ಪ್ರಕ್ರಿಯೆ ಇದಾಗಿದೆ. ಸಮಾಯೋಜನೆ ಎನ್ನುವುದು ಸಾಮಾಜಿಕ ಪರಿಸರದ ಬೇಡಿಕೆ ಹಾಗೂ ಒತ್ತಡಗಳಿಗೆ ವ್ಯಕ್ತಿ ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸುವ ವಿಧಾನವಾಗಿದೆ. ಹೀಗೆ **ತನಗೂ ಮತ್ತು ತನ್ನ ಪರಿಸರಕ್ಕೂ ನಡುವೆ ಸಾಮರಸ್ಯ ಏರ್ಪಡಿಸಲು ವ್ಯಕ್ತಿ ತನ್ನ ವರ್ತನೆಯನ್ನು ಪರಿವರ್ತಿಸಿಕೊಳ್ಳುವ ಪ್ರಕ್ರಿಯೆಯೇ ಸಮಾಯೋಜನೆ** ಎನ್ನಬಹುದು. ವ್ಯಕ್ತಿಯ ಆಂತರಿಕ ಸಾಮರ್ಥ್ಯ ಹಾಗೂ ಬಾಹ್ಯ ಪರಿಸರದ ಒತ್ತಡ– ಈ ಎರಡೂ ಬಲಗಳ ನಡುವಿನ ಪರಸ್ಪರ ಕ್ರಿಯೆ ಪ್ರಕ್ರಿಯೆಯ ಫಲವೇ ಸಮಾಯೋಜನೆ. ಈ ಪದವು ಮುಖ್ಯವಾಗಿ ವ್ಯಕ್ತಿ ತನ್ನ ಪರಿಸರದೊಂದಿಗೆ ಸಾಮರಸ್ಯ ಸಾಧಿಸುವ ಪ್ರಕ್ರಿಯೆ ಸೂಚಿಸುತ್ತದೆ.

**'ಪರಿಸರಕ್ಕೆ ಅಥವಾ ಬದಲಾಗುತ್ತಿರುವ ಪರಿಸರಕ್ಕೆ ಸರಿ ಹೊಂದುವಂತೆ ವರ್ತನೆಯನ್ನು ಹೊಂದಿಸಿಕೊಳ್ಳುವ ಪ್ರಕ್ರಿಯೆಯೇ 'ಸಮಾಯೋಜನೆ'**

**– ಕಾರ್ಟರ್ ವಿ. ಗುಡ್ (1959)**

## ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳು (Characteristics of a well adjusted personality)

1 ಸದೃಢ ದೇಹದಲ್ಲಿ ಸದೃಢ ಮನಸ್ಸನ್ನು ಹೊಂದಿರಲು ಬೇಕಾದ ಹವ್ಯಾಸಗಳನ್ನು ರೂಢಿಸಿಕೊಳ್ಳುವುದು.

2 ತನ್ನ ಸಾಮರ್ಥ್ಯ ಹಾಗೂ ಅಸಾಮರ್ಥ್ಯಗಳ ಬಗ್ಗೆ ಅರಿವು ಮತ್ತು ಅವುಗಳನ್ನು ಮೌಲ್ಯ ಮಾಡುವ ಸಾಮರ್ಥ್ಯ.

3 ಬದಲಾಗುತ್ತಿರುವ ಸಂದರ್ಭ ಸನ್ನಿವೇಶಗಳಿಗೆ ಹೊಂದಿಕೊಳ್ಳುವ ಗುಣ ಸಾಮರ್ಥ್ಯ.

4 ಉದ್ವೇಗ, ಆಶಾಭಂಗ ಹಾಗೂ ಮಾನಸಿಕ ಘರ್ಷಣೆಗಳಿಂದ ದೂರವಿದ್ದು ಭಾವಾತ್ಮಕ ಪಕ್ವತೆ ಹಾಗೂ ಸ್ಥಿರತೆ ಹೊಂದಿರುವುದು.

5 ಸಾಮಾಜಿಕ ಹೊಂದಾಣಿಕೆ ಹಾಗೂ ಸಹಕಾರಯುತ ಮನೋಭಾವ.

6 ಸ್ವತಂತ್ರವಾಗಿ ಚಿಂತನೆ ಮಾಡುವ ಹಾಗೂ ಸರಿಯಾದ ನಿರ್ಧಾರಕೈಗೊಳ್ಳುವ ಸಾಮರ್ಥ್ಯ.

7 ಆಶಾವಾದಿತನ ಹಾಗೂ ವಿಶೇಷ ತಾಳ್ಮೆ ಹಾಗೂ ಧೈರ್ಯಶಾಲಿಯಾಗಿರುವುದು.

8 ಸಕಾರಾತ್ಮಕ ಮನೋಭಾವನೆ ಹೊಂದಿದ್ದು ಸಕಾರಾತ್ಮಕ ಚಿಂತನೆ ಮಾಡುವ ಗುಣ.

9 ಸ್ವಯಂ/ಆತ್ಮಗೌರವ ಹಾಗೂ ಇತರರನ್ನು ಗೌರವದಿಂದ ಕಾಣುವ ಸ್ವಭಾವ.

10 ಆತ್ಮ ವಿಶ್ವಾಸ ಹಾಗೂ ಆತ್ಮಾಭಿಮಾನ ತಳೆದಿರುವುದು.

11 ಸದಾ ಸುರಕ್ಷಿತ ಭಾವನೆ ತಾಳಿರುವುದು.

12 ಮತ್ತೊಬ್ಬರ ತಪ್ಪನ್ನು ಹುಡುಕುವ ಮನೋಭಾವದಿಂದ ದೂರವಿರುವುದು.

13 ಪ್ರಪಂಚದ ವಾಸ್ತವಿಕತೆಯ ಪ್ರತ್ಯಕ್ಷಾನುಭಾವ ಹೊಂದಿರುವುದು.

14 ಲೈಂಗಿಕ ಅಸಹಜತೆ ಮತ್ತು ಅತೃಪ್ತಿಯಿಂದ ಬಳಲದೇ ಇರುವುದು.

15 ವೈವಿಧ್ಯಮಯ ಸಮೂಹಗಳೊಂದಿಗೆ ಸಾಮರಸ್ಯ.

16 ವೃತ್ತಿಯಲ್ಲಿ ತೃಪ್ತಿ ಹೊಂದಿರುವುದು.

17 ನಿಸ್ವಾರ್ಥ ಹಾಗೂ ಜವಾಬ್ದಾರಿಯುತ ವ್ಯಕ್ತಿಯಾಗಿರುವುದು.

18 ಮೂಲಭೂತ ಅವಶ್ಯಕತೆಗಳಿಂದ ತೃಪ್ತಿ ಹೊಂದಿರುವುದು.

19 ಎಲ್ಲರೊಂದಿಗೆ ಸ್ನೇಹದಿಂದ ಮುಗುಳ್ನಗುತ್ತಾ ಇರುವುದು.

20 ತನ್ನ ಚಾರಿತ್ರ್ಯ ಹಾಗೂ ಕಾರ್ಯಚಟುವಟಿಕೆಗಳನ್ನು ನಿಯಂತ್ರಿಸುವಂತಹ ಉತ್ತಮ ತಾತ್ವಿಕ ಚಿಂತನೆಗಳಿಂದ ಕೂಡಿರುವುದು.

### 3.2.2. ಸಮಾಯೋಜನೆಗೆ ಅಡೆತಡೆಗಳು

### ಉದ್ವೇಗ, ಆಶಾಭಂಗ, ಮಾನಸಿಕ ಘರ್ಷಣೆ ಹಾಗೂ ಒತ್ತಡ

### (Barriers to adjustment- Tension, Frustration, Conflict and stress)

ಸಮಾಯೋಜನೆ ವ್ಯಕ್ತಿಯನ್ನು ಅವನ ಸುತ್ತಲಿನ ಪರಿಸರಕ್ಕೆ ತನ್ನ ವರ್ತನೆಯನ್ನು ಹೊಂದಿಸಿಕೊಳ್ಳುವ ಪ್ರಕ್ರಿಯೆಯಾಗಿದೆ. ಇದು ವ್ಯಕ್ತಿಗೆ ಅನಿವಾರ್ಯ. ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳದೇ ಹೋದಲ್ಲಿ ವ್ಯಕ್ತಿ ಅನಗತ್ಯ ತೊಂದರೆಗಳಿಗೆ ಸಿಲುಕಿಕೊಳ್ಳುತ್ತಾನೆ. ಸಂತೋಷ ಹಾಗೂ ಸಂತೃಪ್ತಿಯ ಬದುಕಿಗಾಗಿ ಅವನು ತನ್ನ ಸುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲೇ

ಬೇಕಾಗುತ್ತದೆ. ಆಗಲೇ ಅವನು ಉದ್ವೇಗ, ಆಶಾಭಂಗ, ಘರ್ಷಣೆ ಹಾಗೂ ಒತ್ತಡಗಳಿಂದ ಮುಕ್ತಿ ಪಡೆದು ಕ್ರಿಯಾಶೀಲ ಬದುಕಿಗೆ ದಾರಿ ಮಾಡಿಕೊಳ್ಳುವ ಅವಕಾಶ ಪಡೆಯುತ್ತಾನೆ. ಪ್ರತಿಯೊಬ್ಬ ವ್ಯಕ್ತಿ ಇಂತಹ ಸಮಾಯೋಜನೆಗೆ ಪ್ರಯತ್ನಿಸುತ್ತಲೇ ಇರುತ್ತಾನೆ. ಅನೇಕ ಸಲ ಹೊಂದಿಕೊಳ್ಳುವಲ್ಲಿ ವಿಫಲನಾಗಿ ಬಾವೋದ್ವೇಗಕ್ಕೆ ಒಳಗಾಗಿ ಕೊರಗುತ್ತಾನೆ. ಅವನ ಸಮಾಯೋಜನೆಗೆ ಅಡ್ಡಿ ಆತಂಕಗಳು ಅನೇಕ. ಪ್ರಮುಖವಾಗಿ ಉದ್ವೇಗ, ಆಶಾಭಂಘ, ಘರ್ಷಣೆ, ಒತ್ತಡ,

## ಉದ್ವೇಗ (Tension)

ಉದ್ವೇಗವೆಂಬುದು ಮಾನಸಿಕ, ಭಾವಾತ್ಮಕ ಹಾಗೂ ನರಮಂಡಲದ ಅಸ್ಥಿರತೆಯ ಸ್ಥಿತಿಯಾಗಿದೆ. ಇದು ವಾಸ್ತವಿಕ ಅಥವಾ ಕಾಲ್ಪನಿಕ ಸನ್ನಿವೇಶವೊಂದನ್ನು ಎದುರಿಸಲು ಶಕ್ತಿಯನ್ನು ಕ್ರೋಡೀಕರಿಸಿಕೊಂಡು ವ್ಯಕ್ತಿ ಸಿದ್ಧತೆ ಮಾಡಿಕೊಳ್ಳುವ ಸ್ಥಿತಿಯಾಗಿದೆ. ಆಗ ಮಾಂಸಖಂಡಗಳು ಹೆಚ್ಚಿನ ಸ್ಪಂಧನ ಶಕ್ತಿಯನ್ನು ಹಾಗೂ ಉದ್ರೇಕವನ್ನು ತಾಳಿರುತ್ತವೆ. ಅತಿಯಾದ ಉದ್ವೇಗದಿಂದ ವ್ಯಕ್ತಿಯಲ್ಲಿ ಕಳವಳ ಪ್ರವೃತ್ತಿ ಉ0ಟಾಗಿ ನರದೌರ್ಬಲ್ಯಕ್ಕೆಡೆಮಾಡುತ್ತದೆ. ಆಗ ವ್ಯಕ್ತಿ ಮಾನಸಿಕ ಸ್ಥಿಮಿತತೆ ಕಳೆದಕೊಂಡು ತನ್ನ ಸುತ್ತಲಿನ ವಾತಾವರಣಕ್ಕೆ ಹೊಂದಿಕೊಳ್ಳಲಾರದ ಸ್ಥಿತಿ ತಲುಪುತ್ತಾನೆ. ವ್ಯಕ್ತಿಯಲ್ಲಿರುವ ತಪ್ಪು ಕಲ್ಪನೆಗಳು, ಭಿನ್ನಾಭಿಪ್ರಾಯಗಳು, ದ್ವೇಷ, ಅಸೂಯೆ, ಅಸಹನೆ, ಅತೃಪ್ತಿ ಭಾವಗಳು ಉದ್ವೇಗಕ್ಕೆ ಕಾರಣವಾಗಿ ಈ ಉದ್ವೇಗವೇ ಅವನ ಸಮಾಯೋಜನೆ ಪ್ರಕ್ರಿಯೆಗೆ ಅಡ್ಡಿಯಾಗುತ್ತವೆ. ಅನೇಕ ವೇಳೆ ವ್ಯಕ್ತಿಯ ಅನಾರೋಗ್ಯ , ವೃತ್ತಿಯಲ್ಲಿ ಕಿರಿಕಿರಿ, ನಿರುದ್ಯೋಗ, ಆರ್ಥಿಕಸ್ಥಿತಿ ಕಾರಣವಾಗಿ ವ್ಯಕ್ತಿ ಮನೆಯಲ್ಲೂ ಹೊಂದಿಕೊಳ್ಳಲಾರದೆ, ಸಮಾಜದಲ್ಲಿ ಹೊಂದಿಕೊಳ್ಳಲಾರದೆ ಕೊನೆಗೆ ಮಾನಸಿಕವಾಗಿ ಅಸ್ವಸ್ಥನಾಗುವ ಸ್ಥಿತಿ ತಲುಪುತ್ತಾನೆ. ಯಾರ ಜೊತೆಗೂ ಹೊಂದಿಕೊಳ್ಳದೇ ಏಕಾಂಗಿಯಾಗಿ ಬಿಡುತ್ತಾನೆ. ಕೊನೆಗೆ ಅದು ಆತ್ಮಹತ್ಯೆಗೂ ದಾರಿಯಾಗಿಬಿಡಬಹುದು.

## ಮನೋವೈಫಲ್ಯ (Frustration)

ವ್ಯಕ್ತಿ ಸಹಜವಾಗಿ ಮಹತ್ವಾಕಾಂಕ್ಷೆಯ ಗುಣ ಸ್ವಭಾವ ಹೊಂದಿರುತ್ತಾನೆ. ಅನೇಕಾನೇಕ ಮಹದಾಸೆ ಇಟ್ಟುಕೊಂಡು ಈಡೇರಿಸಿಕೊಳ್ಳುವ ಪ್ರಯತ್ನದಲ್ಲಿರುತ್ತಾನೆ. ವಿಫಲನಾದಾಗ ಆಶಾಭಂಗಕ್ಕೆ ಒಳಗಾಗುತ್ತಾನೆ. ಈ ವಿಫಲತೆಯಿಂದಾದ ಅವನ ತಪ್ಪು ಹೊಂದಾಣಿಕೆಗೆ ದಾರಿಯಗುತ್ತದೆ. ಆಶಾಭಂಗ ಎಂದರೆ ಆಸೆಗಳು ಭಗ್ನವಾಗುವುದು.

ಯಾವುದೇ ಪ್ರವೃತ್ತಿ ತೃಪ್ತಿಯಲ್ಲಿ ಆಶಾಭಂಗ ಹೊಂದಿದ ಮಾನಸಿಕ ಸ್ಥಿತಿಯೇ ಮನೋವೈಫಲ್ಯ. ಒಂದು ಬಯಕೆ ಅಥವಾ ಅವಶ್ಯಕತೆಗೆ ಅಡ್ಡಿಯಾಗುವಿಕೆಯಿಂದುಂಟಾದ ಭಾವೋದ್ವೇಗವೇ ಮನೋವೈಫಲ್ಯ.

ಯಾವುದೇ ವ್ಯಕ್ತಿ ತನ್ನ ಮನಸ್ಸಿನ ಬಯಕೆ ಅಥವಾ ಅವಶ್ಯಕತೆಗಳನ್ನು ಈಡೇರಿಸಿಕೊಳ್ಳಲೆತ್ನಿಸಿದಾಗ ಅಡ್ಡಿ ಆತಂಕಗಳು ಎದುರಾಗಿ ಅವನ ಬಯಕೆಗಳು ಈಡೇರದೆ ವಿಫಲವಾದಾಗ ಅವನಲ್ಲಿ ಮನೋವೈಫಲ್ಯ ಉಂಟಾಗಿ ತನ್ನ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳಲಾರದ ಸ್ಥಿತಿ ನಿರ್ಮಾಣವಾಗುತ್ತದೆ.

ಮನೋವೈಫಲ್ಯಕ್ಕೆ ವ್ಯಕ್ತಿಯ ಬಾಹ್ಯ ಹಾಗೂ ಆಂತರಿಕ ಅಂಶಗಳು ಕಾರಣವಾಗುತ್ತವೆ. ಸಹಜ ದುರ್ಘಟನೆಗಳು, ಸಾಂಪ್ರದಾಯಿಕ ನಂಬಿಕೆಗಳು ಹಾಗೂ ನಿಯಮಗಳು ವ್ಯಕ್ತಿ ವಿಚಾರಕ್ಕೆ ಅಡ್ಡಿಯಾಗುವುದು, ಆರ್ಥಿಕ ಪರಿಸ್ಥಿತಿ ಅಥವಾ ಅನಾರೋಗ್ಯದಿಂದ ಗುರಿ ಸಾಧನೆಗೆ ಅಡ್ಡಿ ಮುಂತಾದವು ಬಾಹ್ಯ ಕಾರಣಗಳಾದರೆ ವ್ಯಕ್ತಿಯ ಅಂಗವಿಕಲತೆ, ಸ್ವಯಂ ಪರಿಕಲ್ಪನೆಯ ಕೊರತೆ, ಅತಿಯಾದ ಆದರ್ಶ ವಿಚಾರಗಳಿಗೆ ಬೆಲೆ ಸಿಗದಂತಹ ಪರಿಸ್ಥಿತಿ, ಸ್ವಯಂಶಿಸ್ತಿನ ಕೊರತೆ, ಮಹದಾಸೆ ಹಾಗೂ ಸಾಮರ್ಥ್ಯದ ನಡುವಿನ ಅಂತರ ಇವೆಲ್ಲ ಆಂತರಿಕ ಅಂಶಗಳಾಗಿ ಕಾರಣವಾಗುತ್ತವೆ. ಒಟ್ಟಾರೆ ಮನೋವೈಫಲ್ಯ ವ್ಯಕ್ತಿಯ ಸಮಾಯೋಜನೆಗೆ ಪ್ರಬಲ ಅಡೆತಡೆಯಾಗಿದೆ.

## ಘರ್ಷಣೆ (Conflict)

ವ್ಯಕಿಯಲ್ಲಾಗುವ ಮಾನಸಿಕ ಘರ್ಷಣೆ ಸಮಾಯೋಜನೆಗೆ ಅಡ್ಡಿಯಾಗುತ್ತದೆ. ಪರಸ್ಪರ ವಿರೋಧಿ ಪ್ರವೃತ್ತಿಯ ಎರಡು ಬಯಕೆಗಳ ನಡುವೆ ಉಂಟಾದ ನೋವಿನಿಂದ ಕೂಡಿದ ಭಾವೋದ್ವೇಗವೇ ಘರ್ಷಣೆ.

ವ್ಯಕ್ತಿಯಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ವಿರೋಧಿ ಬಯಕೆಗಳ ಇರುವಿಕೆಯಿಂದ ಉಂಟಾದ ಆವೇಗದ ಪರಿಸ್ಥಿತಿಯೇ ಮಾನಸಿಕ ಘರ್ಷಣೆ.

ಎರಡು ಅಥವಾ ಎರಡಕ್ಕಿಂತ ಹೆಚ್ಚು ಪರ ಅಥವಾ ವಿರೋಧಿ ಬಯಕೆಗಳು ಉದ್ಭವಿಸಿದ್ದು ಅವರೆಡೂ ಏಕಕಾಲಕ್ಕೆ ಈಡೇರದ ಮಾನಸಿಕ ಸ್ಥಿತಿಯೇ ಘರ್ಷಣೆ.

ವ್ಯಕ್ತಿಯ ಬದುಕಿನಲ್ಲಿ ಅವನ ಪರಿಸರದೊಂದಿಗೆ ಹೊಂದಿಕೊಳ್ಳುವ ಸಂದರ್ಭದಲ್ಲಿ ಅನೇಕ ಬಾರಿ ಎರಡು ಅವಶ್ಯಕತೆ ಅಥವಾ ಗುರಿಗಳ ನಡುವೆ ಯಾವುದನ್ನು ಆಯ್ಕೆಮಾಡಿಕೊಳ್ಳಬೇಕು ಎನ್ನುವ ನಿರ್ಧಾರ ಮಾಡಲಾಗದೆ ವ್ಯಕ್ತಿ ಮಾನಸಿಕ ಸಂಘರ್ಷಕ್ಕೊಳಗಾಗಿ ಅಸಮಾಯೋಜನೆಗೆ ಒಳಗಾಗುತ್ತಾನೆ. ಮಾನಸಿಕ ಘರ್ಷಣೆಗಳಲ್ಲಿ ಕೆಳಕಂಡ ಪ್ರಕಾರಗಳನ್ನು ಕಾಣಬಹುದು.

### 1. ಅನುವರ್ತಿ– ಅನುವರ್ತಿ ಘರ್ಷಣೆ (Approach – Approach Conflict)

ಇಂತಹ ಘರ್ಷಣೆಯಲ್ಲಿ ವ್ಯಕ್ತಿ ಎರಡೂ ಅಷ್ಟೇ ಪ್ರಾಮುಖ್ಯತೆಯುಳ್ಳ ಹಾಗೂ ಅವಶ್ಯಕವಿರುವ ಪರ್ಯಾಯಗಳ ಆಯ್ಕೆ ಬಗ್ಗೆ ಘರ್ಷಣೆಗೊಳಗಾಗುತ್ತಾನೆ. ಅಂದರೆ ವ್ಯಕ್ತಿ ಎರಡೂ ನಿಶ್ಚಿತ ಗುರಿಗಳಲ್ಲಿ ಒಂದನ್ನು ಆಯ್ಕೆ ಮಾಡುವ ಸಂದರ್ಭವಿದ್ದು, ಎರಡೂ ಗುರಿಗಳು ಸಮಾನ ಆಕರ್ಷಣೆ ಹೊಂದಿರುತ್ತವೆ. ಆಗ ವ್ಯಕ್ತಿ ಯಾವುದೇ ನಿರ್ಧಾರಕ್ಕೆ ಬಾರದವನಾಗಿ ಮಾನಸಿಕ ಸಂಘರ್ಷಕ್ಕೊಳಗಾಗಿ ಪರಿಸ್ಥಿತಿಗೆ ಹೊಂದಿಕೊಳ್ಳಲಾರದ ಸ್ಥಿತಿ ತಲುಪುತ್ತಾನೆ.

ಉದಾಹರಣೆಗೆ:

1. ಒಬ್ಬ ಯುವ ನಿರುದ್ಯೋಗಿಗೆ ಏಕಕಾಲಕ್ಕೆ ಎರಡು ಅತ್ಯುತ್ತಮ ಅವಕಾಶಗಳು ದೊರೆತಾಗ ಯಾವುದನ್ನು ಆಯ್ಕೆ ಮಾಡಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬರಲಾಗದೆ ಮಾನಸಿಕ ಸಂಘರ್ಷಕ್ಕೊಳಗಾಗುತ್ತಾನೆ.

2. ವಿದ್ಯಾರ್ಥಿಯೊಬ್ಬ ಪರೀಕ್ಷೆ ಬರುವಾಗ ಎರಡು ಪ್ರಶ್ನೆಗಳು ಎದುರಾಗಿ ಎರಡನ್ನೂ ಚೆನ್ನಾಗಿ ಉತ್ತರಿಸುವ ಸಾಮರ್ಥ್ಯ ಹೊಂದಿದ್ದು ಯಾವುದನ್ನು ಬರೆಯಬೇಕೆಂಬ ನಿರ್ಧಾರಕ್ಕೆ ಬಾರದೆ ಘರ್ಷಣೆಗೊಳಗಾಗುತ್ತಾನೆ.

### 2. ಅನುವರ್ತಿ– ಅಪವರ್ತಿ ಘರ್ಷಣೆ (Approach- Avoidance Approach )

ಇಲ್ಲಿ ಒಂದೇ ಗುರಿಯ ಬಗ್ಗೆ ತೃಪ್ತಿದಾಯಕ ಹಾಗೂ ಅತೃಪ್ತಿದಾಯಕ ಭಾವನೆ ಒಡಮೂಡಿದಾಗ ಮಾನಸಿಕ ಘರ್ಷಣೆ ಉಂಟಾಗುತ್ತದೆ. ವ್ಯಕ್ತಿ ಒಂದು ಗುರಿಯ ಕಡೆ ಆಕರ್ಷಣೆ ಹೊಂದಿರುತ್ತಾನೆ. ಆದರೆ ಅದು ಋಣಾತ್ಮಕವೂ ಆಗಿರುತ್ತದೆ.

**ಉದಾಹರಣೆಗೆ:** ಮಧುಮೇಹಿಗೆ ಸಿಹಿ ತಿನ್ನುವ ಚಪಲ ಆದರೆ ಆರೋಗ್ಯಕ್ಕೆ ಅಹಿತಕರ. ತಿನ್ನಬೇಕೋ ಬೇಡವೋ ಎಂಬ ಗೊಂದಲ ಉಂಟಾಗುತ್ತದೆ.

### 3. ಅಪವರ್ತಿ– ಅಪವರ್ತಿ ಘರ್ಷಣೆ (Avoidance- Avoidance Approach)

ಇಂತಹ ಘರ್ಷಣೆಯಲ್ಲಿ ವ್ಯಕ್ತಿಗೆ ಎರಡು ಆಯ್ಕೆಗಳಿರುತ್ತವೆ. ಎರಡೂ ಋಣಾತ್ಮಕ/ ಅತೃಪ್ತಿಯಾಗಿರುತ್ತವೆ. ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಒತ್ತಡವಿರುತ್ತದೆ.

**ಉದಾ :** ಪ್ರಾಮಾಣಿಕ ಪ್ರಾಂಶುಪಾಲನೊಬ್ಬ ಆಡಳಿತ ಮಂಡಳಿ ಒತ್ತಡಕ್ಕೆ ಮಣಿದು ತನ್ನ ಆತ್ಮಸಾಕ್ಷಿಗೆ ವಿರುದ್ಧ ನಡೆದುಕೊಳ್ಳುವ ಸನ್ನಿವೇಶ ಎದುರಾದಾಗ ಮಾನಸಿಕ ಸಂಘರ್ಷಕ್ಕೆ ಒಳಗಾಗುತ್ತಾನೆ.

ಮೇಲ್ಕಾಣಿಸಿದ ಎಲ್ಲ ರೀತಿಯ ಮಾನಸಿಕ ಘರ್ಷಣೆಗಳು ಎಲ್ಲರ ಬದುಕಿನ ಅನುಭವಗಳಾಗಿದ್ದು ಅನೇಕ ಸಲ ವ್ಯಕ್ತಿ ತನ್ನ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ಮಾನಸಿಕವಾಗಿ ಅಸ್ವಸ್ಥನಾಗಿಬಿಡುತ್ತಾನೆ.

## ಒತ್ತಡ (Stress)

ಒತ್ತಡ ಸಹ ವ್ಯಕ್ತಿಯ ಸಮಾಯೋಜನೆಗೆ ಅಡ್ಡಿಯಾಗಿರುವ ಪ್ರಮುಖ ಅಂಶ. ಒತ್ತಡ ಎಂಬುದು ವ್ಯಕ್ತಿಯ ಹೊಂದಿಕೊಳ್ಳಲಾರದಂತಹ ವೈರುದ್ಯಾತ್ಮಕ ಬೇಡಿಕೆಗಳು ತಂದೊಡ್ಡಿದ ಒಂದು ಸ್ಥಿತಿಯಾಗಿದೆ. ಒಂದು ದೃಷ್ಟಿಯಲ್ಲಿ ಇದು ವ್ಯಕ್ತಿನಿಷ್ಠವಾಗಿದ್ದು, ಒಂದೇ ರೀತಿಯ ಘಟನೆ ಬೇರೆ ಬೇರೆ ವ್ಯಕ್ತಿಗಳಿಗೆ ಬೇರೆ ಬೇರೆ ರೀತಿಯಲ್ಲಿ ಅನುಭವ ನೀಡುವಂಥದ್ದಾಗಿರುತ್ತದೆ. ಒತ್ತಡ ವ್ಯಕ್ತಿಯ ಮೇಲೆ ಹೇರಿದ ಉದ್ವೇಗವಾಗಿದ್ದು, ಇದು ಮಾನಸಿಕ ಅಥವಾ ಭಾವೋದ್ವೇಗದಿಂದ ಕೂಡಿದ ಪ್ರಯಾಸವಾಗಿದೆ.

**–ಆಕ್ಸ್‌ಫರ್ಡ್ ನಿಘಂಟು.**

ವ್ಯಕ್ತಿಯ ದೈನಂದಿನ ಬದುಕಿನಲ್ಲಿ ತನ್ನ ಪರಿಸ್ಥಿತಿಗೆ ಪ್ರತಿಕ್ರಿಯಿಸುವಾಗ ಅನುಭವಿಸುವ ಹೆಚ್ಚಿನ ಮಾನಸಿಕ ಹೊರೆ ಅಥವಾ ಭಾರವಾಗಿದೆ. ಮನೆಯಲ್ಲಿ ಪೋಷಕರು, ಶಾಲೆಯಲ್ಲಿ ಶಿಕ್ಷಕರು, ಕಛೇರಿಯಲ್ಲಿ ಅಧಿಕಾರಿಗಳು ಹಾಗೂ ಸಮಾಜದಲ್ಲಿ ಹಿರಿಯರು ಮಕ್ಕಳು ಮತ್ತು ಯುವಕರ ಮೇಲೆ ಅತಿಯಾದ ಬೇಡಿಕೆ ಇಡುವುದು ಒತ್ತಡಕ್ಕೆ ದಾರಿಯಾಗುತ್ತದೆ.ಒತ್ತಡ ಆಂತರಿಕ ಹಾಗೂ ಬಾಹ್ಯ ಎರಡೂ ರೂಪದಲ್ಲಿ ಉಂಟಾಗುತ್ತದೆ.ಆಂತರಿಕ ಒತ್ತಡ ವ್ಯಕ್ತಿಯ ಅತಿಯಾದ ವೈಯಕ್ತಿಕ ಆಸೆ ಆಕಾಂಕ್ಷೆಗಳು ಹಾಗೂ ಅಹಂಭಾವದಿಂದ ಪ್ರಕಟಗೊಳ್ಳುತ್ತವೆ. ತನ್ನ ಸಾಮರ್ಥ್ಯಕ್ಕೆ ಮೀರಿದ ಬಯಕೆಗಳನ್ನು ಹೊತ್ತು ಈಡೇರಿಸಿಕೊಳ್ಳುವಾಗ ವ್ಯಕ್ತಿ ಹೆಚ್ಚಿನ ಒತ್ತಡ ಅನುಭವಿಸುತ್ತಾನೆ.

ಬಾಹ್ಯ ಒತ್ತಡ ಪರಿಸರದಿಂದ ಉಂಟಾದದ್ದು, ಮುಖ್ಯವಾಗಿ,

- ಪೋಷಕರ ಅತಿಯಾದ ನಿರೀಕ್ಷೆಗಳು, ಬೇಡಿಕೆಗಳು.

- ಮನೆಯ ಆರ್ಥಿಕ ಪರಿಸ್ಥಿತಿಗಳು– ತೀರಾ ಬಡತನ, ಸಾಂಪ್ರದಾಯಿಕ ಹಾಗೂ ಧಾರ್ಮಿಕ ನಡಾವಳಿಗಳ ಬಿಗಿ ಧೋರಣೆ ಇತ್ಯಾದಿ.
- ವೈಯಕ್ತಿಕ ಕಾರಣಗಳಿಂದ ಶಿಸ್ತಿನ ಕೊರತೆ, ಅಹಂಭಾವ, ಹೆಚ್ಚಿನ ಕೆಲಸದ ಒತ್ತಡ, ಆತ್ಮೀಯರ ಸಾವು, ಸಾಮರ್ಥ್ಯಕ್ಕೆ ಮೀರಿದ ನಿರೀಕ್ಷೆಗಳು ಇತ್ಯಾದಿ.
- ಸಮೂಹ ಕಾರಣಗಳಾದ ನಾಯಕತ್ವದ ಕೊರತೆ, ಸಮೂಹ ಸಂಘರ್ಷ, ಸಾಮಾಜಿಕ ರಕ್ಷಣೆ ಕೊರತೆ, ವರ್ಗ, ಜಾತಿ, ವರ್ಣ ಬೇಧ ಭಾವಗಳು ಇತ್ಯಾದಿ.
- ಆಧುನಿಕ ಜೀವನಶೈಲಿ ಕಾರಣಗಳಾದ, ಸದಾ ಕಾರ್ಯನಿರತ ಸ್ಥಿತಿ, ವಿರಾಮ ವೇಳೆ ಕೊರತೆ, ಹೆಚ್ಚಿನ ಜವಾಬ್ದಾರಿ, ರಸ್ತೆ, ಟ್ರಾಫಿಕ್, ಅವಸರ, ಏಕಾಂತಕ್ಕೆ ಅವಕಾಶವಿಲ್ಲದಿರುವುದು ಇತ್ಯಾದಿ.

ಈ ಎಲ್ಲಾ ರೀತಿಯ ಉದ್ವೇಗ, ಘರ್ಷಣೆ ಹಗೂ ಒತ್ತಡಗಳಿಂದಾಗಿ ವ್ಯಕ್ತಿ ತನ್ನ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ಹೋಗುತ್ತಾನೆ. ಈ ಅಸಮಾಯೋಜನೆಯನ್ನು ಸರಿಯಾಗಿ ನಿರ್ವಹಿಸಲಾರದವನಾಗಿ ಅನೇಕ ವೇಳೆ ಆತ್ಮಹತ್ಯೆಗೆ ಮುಂದಾಗುತ್ತಾನೆ. ಸಮಾಯೋಜನೆಗೆ ಅಡ್ಡಿಯಾಗಿರುವ ಈ ಒತ್ತಡ, ಉದ್ವೇಗ ಹಾಗೂ ಘರ್ಷಣೆಗಳಿಂದ ವ್ಯಕ್ತಿ ಮುಕ್ತನಾಗಲು ಸ್ವಯಂ ಅರಿವು, ಸ್ವಯಂಶಿಸ್ತು, ತಾಳ್ಮೆ ಅಗತ್ಯ. ಹಿರಿಯರು ಜಾಣ್ಮೆ ಹಾಗೂ ತಾಳ್ಮೆಯಿಂದ ರೂಪದರ್ಶಿಗಳಂತಿದ್ದು ಉತ್ತಮ ಮಾರ್ಗದರ್ಶಕರಾಗಿರಬೇಕು.

### 3.2.3 ಅಸಮಾಯೋಜನೆ – ಪರಿಕಲ್ಪನೆ, ಕಾರಣಗಳು ಮತ್ತು ಪರಿಹಾರ ಮಾರ್ಗಗಳು.

## (Mal- Adjustment- concept, causes and measures to overcome Mal-adjustment )

### ಪರಿಕಲ್ಪನೆ (concept)

ವ್ಯಕ್ತಿ ಬದಲಾಗುತ್ತಿರುವ ಸನ್ನಿವೇಶಗಳಿಗೆ ಸಕಾರಾತ್ಮಕವಾಗಿ ಸ್ಪಂದಿಸುವ ಮೂಲಕ ಹೊಂದಿಕೊಂಡು ಜೀವಿಸುವುದೇ ಸಮಾಯೋಜನೆ. ಇದರರ್ಥ ವ್ಯಕ್ತಿ ತನ್ನ ಹಾಗೂ ತನ್ನ ಪರಿಸರದೊಡನೆ ಮತ್ತು ಪರಿಸರದ ವ್ಯಕ್ತಿಗಳೊಂದಿಗೆ ಮಧುರ ಬಾಂಧವ್ಯ ಮೂಡಿಸಿಕೊಂಡು ನಿಕಟ ಸಂಬಂಧ ಹೊಂದಿರುವುದಾಗಿದೆ. ಈ ಸಮಾಯೋಜನೆ ಸಾಮರ್ಥ್ಯ ಎಲ್ಲರಲ್ಲೂ ಇರುವುದಿಲ್ಲ. ಅನೇಕರು ತಮ್ಮ ಪರಿಸ್ಥಿತಿ ಹಾಗೂ ಸನ್ನಿವೇಶಗಳಿಗೆ ಹೊಂದಿಕೊಳ್ಳಲು ವಿಫಲರಾಗುತ್ತಾರೆ. ಈ ವಿಫಲತೆಯೇ ಅಸಮಾಯೋಜನೆ **(Mal- Adjustment)**. ಅಂದರೆ **ವ್ಯಕ್ತಿ ಹಾಗೂ ಪರಿಸ್ಥಿತಿ ನಡುವೆ ಸಾಮರಸ್ಯ ಇಲ್ಲದ0ತಾಗಿ ವ್ಯಕ್ತಿ ಸ್ವಯಂ ತನಗೆ ಹಾಗೂ ಸಮಾಜಕ್ಕೆ ಎರಡಕ್ಕೂ ಅಹಿತವಾದ ರೀತಿಯಲ್ಲಿ ನಡೆದುಕೊಳ್ಳುವ ಸ್ಥಿತಿಯೇ 'ಅಸಮಾಯೋಜನೆ'**. ಇದು ಸಾಮಾಜಿಕ ವಾತಾವರಣ ಹಾಗೂ ಸನ್ನಿವೇಶಗಳ ನಡುವೆ ಸಾಮರಸ್ಯ ಕಳೆದುಕೊಂಡ ವ್ಯಕ್ತಿಯ ವರ್ತನಾ ಸ್ವಭಾವವಾಗಿದೆ. **ಅಸಮಾಯೋಜನೆ ಒಂದು ಸಂಕೀರ್ಣ ಸಮಸ್ಯೆಯಾಗಿದ್ದು, ವ್ಯಕ್ತಿಯು ಕುಟುಂಬ, ಶಾಲೆ, ಸಮಾಜ ಹಾಗೂ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ವಿಫಲನಾಗಿ ಅಪರಾಧಿ ಅಥವಾ ತಪ್ಪು ಹೊಂದಾಣಿಕೆ ವರ್ತನೆ ತೋರುವ ಪ್ರಕ್ರಿಯೆಯಾಗಿದೆ.**

### ಅಸಮಾಯೋಜನೆಗೆ ಕಾರಣಗಳು

#### 1. ಅನುವಂಶೀಯ ಕಾರಣಗಳು (Hereditary causes)

ಅನುವಂಶೀಯವಾಗಿ ವಂಶಪಾರಂಪರ್ಯವಾಗಿ ಹರಿದು ಬರುವ ಗುಣವಿಶೇಷಗಳಿಗೆ ವಂಶವಾಹಿನಿ **(genes)** ಗಳು ಕಾರಣವಾಗಿದ್ದು, ವ್ಯಕ್ತಿಯ ದೈಹಿಕ, ಮಾನಸಿಕ ಹಾಗೂ ಭಾವಾತ್ಮಕ ವರ್ತನೆಗೆ ದಾರಿಮಾಡಿಕೊಡುತ್ತವೆ. ಅನುವಂಶೀಯವಾಗಿ ಬಂದ ಹಲವು ವರ್ತನೆಗಳಿಂದ ವ್ಯಕ್ತಿ ತನ್ನ ಪರಿಸ್ಥಿತಿಗೆ ಹೊಂದಿಕೊಳ್ಳುವಲ್ಲಿ ವಿಫಲನಾಗುತ್ತಾನೆ. ವಂಶವಾಹಿನಿಗಳಿಂದ ಬಂದ ಇಂತಹ ಗುಣ ಸ್ವಭಾವಗಳನ್ನು ಬದಲಿಸುವುದು ಸುಲಭವಲ್ಲ. ಸ್ವಾಭಾವಿಕವಾಗಿ ಬಂದ ಕೃಶದೇಹ, ತೀರಾದಡ್ಡತನ, ಹುಂಬತನ ಎಲ್ಲವೂ ಅಸಮಾಯೋಜನೆಗೆ ಕಾರಣವಾಗುತ್ತವೆ.

#### 2. ದೈಹಿಕ ಕಾರಣಗಳು (Physical causes)

ಸಾಮಾಜಿಕ ಹೊಂದಾಣಿಕೆಯಲ್ಲಿ ವ್ಯಕ್ತಿಯ ಶಾರೀರಿಕ ಅಂಶಗಳು ಮಹತ್ವದ ಪ್ರಭಾವ ಬೀರುತ್ತವೆ. ನೋಡಲು ಸುಂದರವಾದ, ಎತ್ತರದ ನಿಲುವಿನ ಹಾಗೂ ಆಕರ್ಷಣೀಯ ವ್ಯಕ್ತಿಗಳು ಬಹುಬೇಗನೆ ಎಲ್ಲರೊಡನೆ ಹೊಂದಿಕೊಳ್ಳುತ್ತಾರೆ. ಆದರೆ ದೈಹಿಕವಾಗಿ ತೀರಾ ದುರ್ಬಲರು, ಕುರೂಪಿಗಳು ಹಾಗೂ ಅಂಗವಿಕಲರು ತಮ್ಮ ಸುತ್ತಮುತ್ತಲಿನ ಪರಿಸರಕ್ಕೆ ಹೊಂದಿಕೊಳ್ಳಲಾರರು. ಮನೋವೈಜ್ಞಾನಿಕವಾಗಿ ಕೀಳರಿಮೆ ಭಾವನೆ ಮೂಡಿಸಿಕೊಂಡು ಅಸಮಾಯೋಜಿತ ವ್ಯಕ್ತಿಗಳಾಗಿ ಬಿಡುತ್ತಾರೆ. ವ್ಯಕ್ತಿಯ ಬಣ್ಣ ಸಹ ಅವನ ಅಸಮಾಯೋಜನಾ ಗುಣಕ್ಕೆ ಕಾರಣವಾಗುತ್ತದೆ. ಉತ್ತಮ ಬಣ್ಣ ಹಾಗೂ ಲಕ್ಷಣದಿಂದ ಕೂಡಿದ ವ್ಯಕ್ತಿಗಳೊಡನೆ ತೀರಾ ಕಪ್ಪು ಬಣ್ಣದ ವ್ಯಕ್ತಿಗಳು ಹೊಂದಿಕೊಳ್ಳುವುದು ಕಷ್ಟಸಾಧ್ಯ.

### 3. ವೈಯಕ್ತಿಕ ಕಾರಣಗಳು (Personal causes)

ವ್ಯಕ್ತಿಯ ಅಸಮಾಯೋಜನೆಗೆ ಅವನ ಹಲವು ವೈಯಕ್ತಿಕ ಅಂಶಗಳು ಕಾರಣವಾಗುತ್ತವೆ. ವ್ಯಕ್ತಿಯ ವೈಯಕ್ತಿಕ ಗುಣಸ್ವಭಾವಗಳಾದ, ಅಶಿಸ್ತು, ಕೋಪ, ಹಠ, ಅವಿಧೇಯತೆ, ಆಕ್ರಮಣಕಾರಿ ಧೋರಣೆ, ದ್ವೇಷ, ಅಸೂಯೆ, ಖಿನ್ನತೆ ಅಹಿಂಸಾ ಸ್ವಭಾವ, ಕೀಳರಿಮೆ ಅಥವಾ ಮೇಲರಿಮೆ ಭಾವಗಳು ಮುಂತಾದ ಗುಣಸ್ವಭಾವಗಳು ಅಸಮಾಯೋಜನೆಗೆ ಪ್ರಮುಖ ಕಾರಣಗಳಾಗುತ್ತವೆ.

### 4. ಕುಟುಂಬದ ವಾತಾವರಣ (Family atmosphere)

ಕುಟುಂಬದ ಅಹಿತಕರ ವಾತಾವರಣ ಮಗುವಿನ ಅಸಮಾಯೋಜನೆಗೆ ಕಾರಣವಾಗುತ್ತದೆ. ಅತಿಯಾದ ಪ್ರೀತಿಯಿಂದ ಬೆಳೆದ ಮಗು ಸ್ವಾರ್ಥಿ, ಬೇಜವಾಬ್ದಾರಿ, ಹಠಮಾರಿ ಧೋರಣೆ ರೂಢಿಸಿಕೊಂಡು ದೊಡ್ಡವನಾದ ಮೇಲೂ ಅದೇ ಸ್ವಭಾವ ತೋರಿ ಪರಿಸ್ಥಿತಿಗೆ ಹೊಂದಿಕೊಳ್ಳಲಾರದೆ ಹೋಗುತ್ತಾನೆ. ಹಾಗೆಯೇ ಪ್ರೀತಿ, ವಿಶ್ವಾಸ, ರಕ್ಷಣೆ ಹಾಗೂ ಸ್ವಾತಂತ್ರ್ಯದಿಂದ ವಂಚಿತರಾದ ಮಕ್ಕಳು ಆಕ್ರಮಣಕಾರಿ ಮನೋಭಾವ ರೂಢಿಸಿಕೊಂಡು ಅಸಮಾಯೋಜನೆಗೊಳಗಾಗುತ್ತಾರೆ.

ಹಲವು ಕುಟುಂಬಗಳಲ್ಲಿ ಅಸಮಾಯೋಜನೆ ಸಮಸ್ಯೆಗಳು ಹೆಚ್ಚಾಗಿ ಕಂಡು ಬಂದಿವೆ. ವಿವಾಹವಿಚ್ಛೇದನ, ಮಲತಾಯಿಧೋರಣೆ, ಗಂಡ ಹೆಂಡತಿ ಕಲಹಗಳು ಹಾಗೂ ಪೋಷಕರ ಸಾವು– ಎಲ್ಲವೂ ಮಕ್ಕಳನ್ನು ಪ್ರೀತಿ, ವಿಶ್ವಾಸ, ಸ್ವಾತಂತ್ರ್ಯ ಹಾಗೂ ರಕ್ಷಣೆಯಿಂದ ವಂಚಿತರನ್ನಾಗಿಸುತ್ತವೆ. ಮಕ್ಕಳು ಭಾವಾತ್ಮಕ ದೃಷ್ಟಿಯಿಂದ ಖಿನ್ನರಾಗಿ ಪರಿಸ್ಥಿತಿಗೆ ಹೊಂದಿಕೊಳ್ಳಲಾರದವರಾಗುತ್ತಾರೆ.

### 5. ಬಡತನ (Poverty)

ಕುಟುಂಬ ಹಾಗೂ ಸಮಾಜದಲ್ಲಿ ಬಹುಪಾಲು ವ್ಯಕ್ತಿಗಳು ಕಡುಬಡತನದಿಂದಾಗಿ ಸಾಮಾಜಿಕ ಪರಿಸರಕ್ಕೆ ಹೊಂದಿಕೊಳ್ಳುವಲ್ಲಿ ವಿಫಲರಾಗುತ್ತಾರೆ. ಕೆಳಮಟ್ಟದ ಸಾಮಾಜಿಕ ಹಾಗೂ ಆರ್ಥಿಕ ಹಂತದಿಂದ ಬಂದ ಮಕ್ಕಳು ಅತಿ ಹೆಚ್ಚು ಅಸಮಾಯೋಜನೆಯಿಂದ ಬಳಲುತ್ತಿರುವುದು ಕಂಡು ಬಂದಿದೆ. ಅವರ ಕನಿಷ್ಠ ಅಗತ್ಯಗಳ ಪೂರೈಕೆಗೆ ಅಡ್ಡಿಯಾಗಿರುವ ಬಡತನ ಇದಕ್ಕೆ ಕಾರಣ.

### 6. ಶಾಲಾ ಪರಿಸರ (School Environment)

ಶಾಲೆಯ ಅಹಿತಕರ ಮತ್ತು ಅನಾರೋಗ್ಯಕರ ವಾತಾವರಣ ಹಾಗೂ ಪರಿಸರ ಮಕ್ಕಳ ಅಸಮಾಯೋಜನೆಗೆ ಕಾರಣ. ಕನಿಷ್ಠ ಸೌಲಭ್ಯಗಳ ಕೊರತೆ, ಕಳಪೆ ಬೋಧನೆ, ಕೆಟ್ಟ ಸ್ನೇಹಿತರ ಸಹವಾಸ, ಶಿಸ್ತು ಹಾಗೂ ದಕ್ಷತೆಯಿಂದ ದೂರಾದ ಆಡಳಿತ, ಸ್ವಾರ್ಥ, ಆಡಳಿತ ಹಾಗೂ ಸಿಬ್ಬಂದಿ ವರ್ಗ, ಅಸಂಘಟಿತ ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳು – ಎಲ್ಲವೂ ಮಗುವಿನ ಅಸಮಾಯೋಜನೆಗೆ ಕಾರಣವಾಗುತ್ತವೆ.

### 7. ಸಾಮಾಜಿಕ ವಾತಾವರಣ (Social Environemt)

ಮಗು ಬೆಳೆಯುತ್ತಿರುವ ಸಾಮಾಜಿಕ ವಾತಾವರಣ ಸಹ ಅಸಮಾಯೋಜನೆಗೆ ಕಾರಣ ಮಗುವಿನ ನೆರೆಹೊರೆಯುವರು, ಸುತ್ತಲಿನ ಸಮುದಾಯದ ವ್ಯಕ್ತಿಗಳು, ಸ್ನೇಹಿತರು, ಸಮಾಜದ ಹಿರಿಯರ ನಡವಳಿಕೆಗಳು ಎಲ್ಲವೂ ಪ್ರಭಾವ ಬೀರುತ್ತದೆ– ಸಮಾಜದ ಅನೇಕರ ಸ್ವಾರ್ಥ, ದೌರ್ಜನ್ಯ, ಧಾರ್ಮಿಕ ಆಚರಣೆ, ನಂಬಿಕೆ, ವರ್ಗ ಬೇಧಗಳು, ಮತ, ಪಂಥ, ವರ್ಣ ಬೇಧಗಳು ಎಲ್ಲವೂ ಅಸಮಾಯೋಜನೆ ಸಮಸ್ಯೆಗೆ ಕಾರಣಗಳು.

### 8. ನಿರುದ್ಯೋಗ ಸಮಸ್ಯೆ (Unemployment Problem)

ಈ ಸಮಸ್ಯೆ ಇಂದಿನ ಯುವಕರನ್ನು ಆಶಾಭಂಗಕ್ಕೊಳ ಮಾಡಿದೆ. ಓದಿ ಪದವಿ ಪಡೆದ ಯುವ ಸಮೂಹ ಸರಿಯಾದ ಉದ್ಯೋಗ ಸಿಗದೆ ಪರಿತಪಿಸುತ್ತಿದ್ದಾರೆ. ಮಹದಾಸೆ ಹೊತ್ತು ಶಿಕ್ಷಣ ಪಡೆದು ಉದ್ಯೋಗ ಸಿಗದೆ ಕುಟುಂಬ ನಿರ್ವಹಣೆಯಲ್ಲಿ ಅಸಹಾಯಕರಾಗಿ ಪರಿಸರಕ್ಕೆ ಹೊಂದಿಕ್ಕೊಳಲಾರದೆ ಹೋಗುತ್ತಾರೆ. ಅನೇಕ ಸಲ ವಾಮಮಾರ್ಗದ ಮೂಲಕ ಹಣ ಸಂಪಾದನೆಗೆ ಮುಂದಾಗುತ್ತಾರೆ. ಪರಿಸ್ಥಿತಿಗೆ ಹೊಂದಿಕ್ಕೊಳಲಾರದೆ ಅಸಮಾಯೋಜಿತ ವ್ಯಕ್ತಿಗಳಾಗಿ ತಾವೂ ಸುಧಾರಿಸದೆ ಸಮಾಜಕ್ಕೂ ಕಂಟಕರಾಗಿ ಬಿಡುತ್ತಾರೆ.

9. **ಮಾರ್ಗದರ್ಶನದ ಕೊರತೆ (Lack of Guidance)** ಇಂದು ಮಕ್ಕಳಿಗೆ ಹಾಗೂ ಯುವಕರಿಗೆ ಸರಿಯಾದ ಮಾರ್ಗದರ್ಶನ ಸಿಗದೆ ಅವರು ದಾರಿತಪ್ಪುತ್ತಿರುವುದು ವಿಷಾದನೀಯ. ಮಕ್ಕಳ ಬಗ್ಗೆ ಅತಿಯಾದ ನಿರೀಕ್ಷೆಗಳನ್ನು ಮಾತ್ರಹೊಂದಿ

ಅವರು ತಾವು ಬಯಸಿದಂತೆ ಆಗಬೇಕೆಂಬ ಛಲ ತೊಟ್ಟಿರುವ ಅನೇಕ ಪೋಷಕರು ಮಕ್ಕಳ ಮನಸ್ಸನ್ನರಿಯದೆ ಅವರ ವ್ಯಕ್ತಿತ್ವ ವಿನಾಶಕ್ಕೆ ಇವರೇ ದಾರಿ ಮಾಡಿಕೊಡುವಂತಾಗಿದೆ. ಮಕ್ಕಳ ಭಾವನೆ, ಅಭಿವ್ಯಕ್ತಿ, ಸಾಮರ್ಥ್ಯ, ಆಸಕ್ತಿ ಅರಿತು ಅವರಿಗೆ ಮಾರ್ಗದರ್ಶನ ನೀಡುವ ಪರಿಸ್ಥಿತಿ ಇಲ್ಲದಂತಾಗಿ ಮಕ್ಕಳು ವಾತಾವರಣಕ್ಕೆ ಹೊಂದಿಕ್ಕೊಳ್ಳಲಾರದೆ ಅನೇಕ ವೇಳೆ ಮನೆಬಿಟ್ಟು ಹೋಗುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಶಾಲೆಯಲ್ಲಿ ಶಿಕ್ಷಕರ ಹಾಗೂ ಸಮಾಜದಲ್ಲಿ ಹಿರಿಯರ ಮಾರ್ಗದರ್ಶನದ ಕೊರತೆ ಇಂದಿನ ಯುವ ಪೀಳಿಗೆಯ ಅಸಮಾಯೋಜನಾ ಸ್ಥಿತಿಗೆ ಬಹುಮುಖ್ಯ ಕಾರಣವಾಗಿದೆ.

### 10. ಸಮೂಹ ಮಾಧ್ಯಮ (Mass - Media)

ಸಮೂಹ ಮಾಧ್ಯಮಗಳು ಇಂದು ಮಕ್ಕಳನ್ನು ಹಾಗೂ ಯುವಕರನ್ನು ಬಹುಬೇಗನೆ ಆಕರ್ಷಿಸುವಂತಹ ಮಾಧ್ಯಮಗಳಾಗಿದ್ದು ಅವರ ವರ್ತನೆ ಮೇಲೆ ಪ್ರಭಾವ ಬೀರಿವೆ. ಅಶ್ಲೀಲ ಜಾಹಿರಾತುಗಳು, ಪ್ರಚೋದನಾಕಾರಿ ಕಾರ್ಯಕ್ರಮಗಳು, ರಚನಾತ್ಮಕವಲ್ಲದ ಹಾಗೂ ದಾರಾವಾಹಿಗಳು, ಚಲನಚಿತ್ರಗಳು ಎಲ್ಲವೂ ಅಸಮಾಯೋಜನೆಯ ಸಮಸ್ಯೆಗೆ ದಾರಿ ಮಾಡಿಕೊಡುತ್ತವೆ.

## ಅಸಮಾಯೋಜನೆ ತಡೆಗಟ್ಟುವ ಪರಿಹಾರ ಮಾರ್ಗಗಳು (Measures to overcome mal-adjustment)

ಪ್ರತಿಯೊಬ್ಬ ವ್ಯಕ್ತಿ ಸಮಾಯೋಜಿತ ವ್ಯಕ್ತಿತ್ವ ಹೊಂದಿರಬೇಕಗುತ್ತದೆ. ವ್ಯಕ್ತಿ ಬೆಳವಣಿಗೆ ಹಾಗೂ ವಿಕಾಸ ಮತ್ತು ಸಮಾಜದ ಆರೋಗ್ಯಕರ ಬೆಳವಣಿಗೆ ಸಮಾಯೋಜಿತ ವ್ಯಕ್ತಿತ್ವದಿಂದ ಕೂಡಿದ ವ್ಯಕ್ತಿಗಳಿಂದ ಮಾತ್ರ ಸಾಧ್ಯ. ಈ ದೃಷ್ಟಿಯಲ್ಲಿ ಅಸಮಾಯೋಜನೆ ತಡೆಗಟ್ಟುವ ಪರಿಹಾರ ಮಾರ್ಗಗಳನ್ನು ಕಂಡುಹಿಡಿಯುವುದು ಇಂದಿನ ಅಗತ್ಯತೆ ಆಗಿದೆ. ಮುಖ್ಯವಾದ ಪರಿಹಾರ ಮಾರ್ಗಗಳು ಹೀಗಿವೆ.

- ತಾಯಿ ಮಗುವಿಗೆ ಜನನ ನೀಡುವ ಮುನ್ನ ಅಂದರೆ ಗರ್ಭಧರಿಸಿದಾಗ ಅವಳಿಗೆ ಆರೋಗ್ಯಕರ ವಾತಾವರಣ ಒದಗಿಸುವುದು ಅತ್ಯಂತ ಅವಶ್ಯಕ. ಕಾರಣ ಅವಳ ಆ ಸಮಯದ ವಾತಾವರಣ, ಅವಳ ಆರೋಗ್ಯ, ಮಾನಸಿಕ ಸ್ಥಿತಿಗತಿಗಳು ಮಗುವಿನ ಮೇಲೆ ಪ್ರಭಾವ ಬೀರುತ್ತವೆ. ಹೀಗಾಗಿ ತಾಯಿಯ ಆರೋಗ್ಯ ರಕ್ಷಣೆ ಮೊದಲ ಕಾರ್ಯ.
- ಮಗುವಿನ ಆರೋಗ್ಯಕರ ಬೆಳವಣಿಗೆ ಹಾಗೂ ವಿಕಾಸಕ್ಕೆ ಪೂರಕವಾದ ಎಲ್ಲ ಸೌಲಭ್ಯ ಹಾಗೂ ವಾತಾವರಣ ಒದಗಿಸಬೇಕು.
- ಶಾರೀರಿಕವಾಗಿ ಅಂಗವಿಕಲತೆ ಹೊಂದಿದ ಮಕ್ಕಳ ಬಗ್ಗೆ ಪ್ರೀತಿ ಹಾಗೂ ಸಹಾನುಭೂತಿ, ತೋರಿಸಬೇಕು. ಅಂತಹ ಮಕ್ಕಳಲ್ಲಿ ಸ್ವಯಂ ಪರಿಕಲ್ಪನೆ ಹಾಗೂ ಸ್ವಾಭಿಮಾನ ಮೂಡಿಸಿ ಕೀಳರಿಮೆ ಭಾವನೆ ಮೂಡದಂತೆ ಜಾಗೃತಿವಹಿಸಬೇಕು.
- ಮಕ್ಕಳಿಗೆ ಹಿರಿಯರು ಮಾರ್ಗದರ್ಶಕರಾಗಿದ್ದು ಮಕ್ಕಳಲ್ಲಿ ಯಾವುದೇ ರೀತಿಯ ದ್ವೇಷ, ಅಸೂಯೆ, ಕೋಪ, ಹಠ, ಅವಿಧೇಯತೆ, ಅಶಿಸ್ತು, ಮುಂತಾದ ಗುಣಗಳು ಮೂಡದ ರೀತಿಯಲ್ಲಿ ಬೆಳೆಸುವ ವಾತಾವರಣ ಕಲ್ಪಿಸಬೇಕು.
- ಮಕ್ಕಳಿಗೆ ಎಲ್ಲಾ ರೀತಿಯ ಮೂಲಭೂತ ಸೌಲಭ್ಯ ಹಾಗೂ ಇತರೆ ಸೌಲಭ್ಯಗಳನ್ನು ಪೂರೈಸಿ ಸೌಲಭ್ಯಗಳಿಂದ ವಂಚಿತರಾಗದಂತೆ ನೋಡಿಕೊಳ್ಳಬೇಕು.
- ಮಕ್ಕಳನ್ನು ಬಿಗಿಯಾದ ನಿಯಂತ್ರಿತ ವಾತಾವರಣದಲ್ಲಿ ಬೆಳೆಸದೆ ಪ್ರೀತಿ, ವಿಶ್ವಾಸ, ಸ್ವಾತಂತ್ರ್ಯ ಹಾಗೂ ಆತ್ಮೀಯತೆಯ ಬಾಂಧ್ಯವದಿಂದ ಬೆಳೆಸಬೇಕು. ಅತಿಯಾದ ಪ್ರೀತಿ ಸಹ ಅಪಾಯಕಾರಿ ಎನ್ನುವುದನ್ನು ಗಮನದಲ್ಲಿರಿಸಿ ಜಾಣ್ಮೆ ಹಾಗೂ ತಾಳ್ಮೆಯಿಂದ ಮಕ್ಕಳ ಬೆಳವಣಿಗೆ ಹಾಗೂ ವಿಕಾಸದೆಡೆ ಗಮನಹರಿಸಬೇಕು.
- ಶಾಲಾ ಆರೋಗ್ಯಕರ ವಾತಾವರಣ ಹಾಗೂ ಪರಿಸರ ಅತೀಮುಖ್ಯ. ಮಾದರಿ ಶಿಕ್ಷಕರು, ಉತ್ತಮ ಪಾಠಬೋಧನೆ, ಸುಸಂಘಟಿತ ಪಠ್ಯ ಹಾಗೂ ಸಹ ಪಠ್ಯ ಚಟುವಟಿಕೆಗಳು, ಉತ್ತಮ ಹಾಗೂ ದಕ್ಷ ಆಡಳಿತ, ಪ್ರಾಮಾಣಿಕ ಸಿಬ್ಬಂದಿ ವರ್ಗ, ಉತ್ತಮ ಗ್ರಂಥಾಲಯ ಎಲ್ಲವೂ ಅಸಮಾಯೋಜನೆ ಸಮಸ್ಯೆ ತಡೆಗಟ್ಟುವಲ್ಲಿ ಸಹಾಯಕಾರಿ.
- ಸಾಮಾಜಿಕ ಪರಿಸರ ಶುದ್ಧವಾಗಿರಬೇಕು. ಸಮಾಜದ ಹಿರಿಯರು ರೂಪದರ್ಶಿಗಳಂತಿರಬೇಕು. ಯಾವುದೇ ಬೇಧಭಾವವಿಲ್ಲದೆ. ಸಮಾಜದ ಎಲ್ಲ ಹಿರಿಯರು ಪ್ರೀತಿ, ವಿಶ್ವಾಸ, ಹೊಂದಾಣಿಕೆಗಳಿಂದ ಸಾಮರಸ್ಯದಿಂದ ಇದ್ದಲ್ಲಿ ಆ ಸಮಾಜದಲ್ಲಿ ಬೆಳೆಯುತ್ತಿರುವ ಮಕ್ಕಳು ಖಂಡಿತ ಅಸಮಾಯೋಜನೆಯಿಂದ ಕೂಡಿರದೆ ಸಮಾಯೋಜಿತ ಮಕ್ಕಳಾಗಿ ಬೆಳೆಯಬಲ್ಲರು.

- ನಿರುದ್ಯೋಗ ಸಮಸ್ಯೆ ಪರಿಹಾರಕ್ಕೆ ನವೀನ ಚಿಂತನೆಗಳಾಗಬೇಕು. ಸ್ವಯಂ ಉದ್ಯೋಗದ ಪರಿಕಲ್ಪನೆ ಮತ್ತು ಮಹತ್ವ ತಿಳಿಸಿ ಯುವಕರು ಸ್ವಯಂ ಉದ್ಯೋಗದಲ್ಲಿ ತೊಡಗುವಂತೆ ಪ್ರೇರೇಪಿಸಬೇಕು.
- ಸಮೂಹ ಮಾಧ್ಯಮಗಳು ಉತ್ತಮ, ನೈತಿಕ ಹಾಗೂ ಆದರ್ಶ ವಿಚಾರಗಳಿಂದ ಕೂಡಿದ ಕಾರ್ಯಕ್ರಮಗಳಿಗೆ ವಿಶೇಷ ಗಮನ ನೀಡಬೇಕು.ಸಮಾಜತಿದ್ದುವ ಕೆಲಸವನ್ನೇ ಉದ್ದೇಶವಾಗಿರಿಸಿಕೊಂಡು ಮಕ್ಕಳ ಹಾಗೂ ಯುವಕರ ಆರೋಗ್ಯಕರ ಬೆಳವಣಿಗೆಗೆ ಪೂರಕವಾಠ ಕಾರ್ಯಕ್ರಮಗಳನ್ನು ಯೋಜಿಸಬೇಕು.
- ನಮ್ಮ ಸಮಾಜ ವೈವಿಧ್ಯತೆಯಿಂದ ಕೂಡಿದ ಸಮಾಜ. ಈ ವೈವಿಧ್ಯತೆಯಲ್ಲಿ ಏಕತೆ ಎಲ್ಲರ ಮಂತ್ರವಾಗಬೇಕು. ಆಗ ಮಾತ್ರ ಸಮಾಯೋಜಿತ ವ್ಯಕ್ತಿತ್ವ ಹೊಂದಿದ ವ್ಯಕ್ತಿಗಳ ನಿರ್ಮಾಣ ಸಾಧ್ಯ.

## 3.2.4 ರಕ್ಷಣಾ ತಂತ್ರಗಳು ಪರಿಕಲ್ಪನೆ–ಪ್ರಕಾರಗಳು–ಆಕ್ರಮಣಕಾರಿ , ಪಲಾಯನ ಹಾಗೂ ಹೊಂದಾಣಿಕೆ ತಂತ್ರಗಳು.

## (Defense mechanisms –concept - kinds of defense mechanisms – Aggressive , Escape and adjustment mechanisms.)

### ರಕ್ಷಣಾ ತಂತ್ರಗಳ ಪರಿಕಲ್ಪನೆ (Concept of Defence Mechanism)

ಮಾನವ ಬುದ್ಧಿವಂತ ಹಾಗೂ ಚಿಂತನಾ ಸಾಮರ್ಥ್ಯವುಳ್ಳವನಾಗಿದ್ದು, ಸಹಜವಾಗಿ ಆಕಾಂಕ್ಷವಾದಿ. ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ಆಸೆ, ಆಕಾಂಕ್ಷೆಗಳನ್ನು ಹೊಂದಿದು ಅವುಗಳ ಈಡೇರಿಕೆಗಾಗಿ ಹಲವಾರು ಮಾರ್ಗಗಳನ್ನು ಅನುಸರಿಸುತ್ತಾನೆ. ಅನೇಕ ಸಲ ಕೆಲವು ವ್ಯಕ್ತಿಗಳು ತಮ್ಮ ಈ ಬಯಕೆ ಅಥವಾ ಗುರಿ ಪೂರೈಕೆಯಲ್ಲಿ ವಿಫಲರಾಗುತ್ತಾರೆ. ಕಾರಣ ಏನೇ ಇದ್ದರೂ ವ್ಯಕ್ತಿ ಆಸೆ ಈಡೇರದಿದ್ದಾಗ ಆಶಾಭಂಗಕ್ಕೆ ಒಳಗಾಗುತ್ತಾನೆ. ಇದು ಅವನ ಅಹಂಭಾವಕ್ಕೆ ಅಥವಾ ಪ್ರತಿಷ್ಠೆಗೆ ಧಕ್ಕೆ ಬಂದಿದೆ ಎಂಬ ಭಾವನೆ ಅವನಲ್ಲಿ ಮೂಡಿ ಕೀಳರಮೆ ಭಾವನೆ ಮೂಡುವ ಸಾಧ್ಯತೆಗಳೂ ಹೆಚ್ಚು. ಆಶಾಭಂಗ ಅಥವಾ ವಿಫಲತೆಯನ್ನು ಮತ್ತೊಬ್ಬರೆದುರು ತೋರಿಸಿಕೊಳ್ಳಲಾರದೆ, ತನ್ನ ಇತಿಮಿತಿಗಳನ್ನು ಒಪ್ಪಿಕೊಳ್ಳದೆ, ಸತ್ಯ ಮುಚ್ಚಿಡುವ ಕಾರ್ಯದಲ್ಲಿ ತೊಡಗುತ್ತಾನೆ. ಅಂದರೆ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಅನೇಕ ತಂತ್ರಗಳನ್ನು ಬಳಸುತ್ತಾನೆ. ಇವುಗಳನ್ನೇ **'ರಕ್ಷಣಾತಂತ್ರಗಳು' (defense mechanisms)** ಎನ್ನುವರು. ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ವ್ಯಕ್ತಿಗಳೂ ಒಂದಲ್ಲ ಒಂದು ಇಂತಹ ರಕ್ಷಣಾ ತಂತ್ರಗಳನ್ನು ಬಳಸುವ ಮೂಲಕ ತಮ್ಮ ಉದ್ವೇಗ ಹಾಗೂ ಆಶಾಭಂಗದಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾರೆ. ರಕ್ಷಣಾ ತಂತ್ರಗಳು ರೂಢಿಸಿಕೊಂಡ ಹವ್ಯಾಸಗಳಾಗಿದ್ದು, ವ್ಯಕ್ತಿಯ ಒತ್ತಡ ಹಾಗೂ ಆಶಾಭಂಗದಿಂದ ತಾತ್ಕಾಲಿಕವಾಗಿ ಮುಕ್ತಗೊಳಿಸಿ ವ್ಯಕ್ತಿತ್ವದಲ್ಲಿ ಸಮತೋಲನ ತರುವ ತಂತ್ರಗಳಾಗಿವೆ. ತನಗೆ ಎದುರಾದ ಅಡಚಣೆಗಳನ್ನು ನಿವಾರಿಸಿ, ಗುರಿ ತಲುಪಲು ಹಾಗೂ ಆಶಾಭಂಗದಿಂದ ಹೊರಬರುವ ಮೂಲಕ ಸಮತೋಲನ ಸ್ಥಿತಿ ಕಾಪಾಡಿಕೊಳ್ಳಲು ನೆರವಾಗುವ ಯಾವುದೇ ಸಹ ವಿಧಾನಗಳನ್ನು **'ರಕ್ಷಣಾ ತಂತ್ರಗಳು'** ಎನ್ನಬಹುದು.

### ವ್ಯಾಖ್ಯೆಗಳು

**"ಒಂದು ಅವಶ್ಯಕತೆಗೆ ಪರೋಕ್ಷ ತೃಪ್ತಿ ತಂದುಕೊಳ್ಳಲು ಹಾಗೂ ಆ ಮೂಲಕ ಉದ್ವೇಗ ಕಡಿಮೆಗೊಳಿಸಿಕೊಂಡು ಸ್ವಯಂಗೌರವ ಕಾಪಾಡಿಕೊಳ್ಳಲು ಬಳಸುವ ತಂತ್ರಗಳೇ ರಕ್ಷಣಾ ತಂತ್ರಗಳು" –**

– ಕ್ಯಾರೋಲ್

**"ವ್ಯಕ್ತಿಗಳು ತಮ್ಮಲ್ಲಿ ಆಗಾಗ ಕಂಡು ಬರುವ ದೈಹಿಕ ಅಥವಾ ಮಾನಸಿಕವಾಗಿ ಅಳವಡಿಸಿಕೊಂಡಿರುವ ಅನೈಚ್ಛಿಕ ಅಥವಾ ಅಪ್ರಜ್ಞಾ ರೀತಿಯ ಕ್ರಮಗಳನ್ನು ರಕ್ಷಣಾ ತಂತ್ರಗಳೆನ್ನುವರು".** –ಜೇಮ್ಸ್ ಡ್ರೀವರ್

ಹೀಗೆ ವ್ಯಕ್ತಿಗೆ ಅವನ ಸ್ವಯಂ ಗೌರವ ಕಾಪಾಡಿಕೊಳ್ಳುವಲ್ಲಿ ಪೂರಕವಾಗಿ ಸಹಾಯ ಮಾಡುವ ತಂತ್ರಗಳೇ ರಕ್ಷಣಾ ತಂತ್ರಗಳಾಗಿವೆ. ಇಂತಹ ತಂತ್ರಗಳು ತಾತ್ಕಾಲಿಕ ಪರಿಹಾರ ಮಾರ್ಗಗಳಾಗಿದ್ದು ಬಹುಪಾಲು ವ್ಯಕ್ತಿಯ ಅಪ್ರಜ್ಞಾಸ್ಥಿತಿಯಲ್ಲಾಗಿದ್ದು, ಮನೋವೈಜ್ಞಾನಿಕ ತಂತ್ರಗಳಾಗಿವೆ.

### ರಕ್ಷಣಾತಂತ್ರಗಳ ಪ್ರಕಾರಗಳು (Kinds of defense mechanisms)

ರಕ್ಷಣಾ ತಂತ್ರಗಳನ್ನು ಪ್ರಮುಖವಾಗಿ ಮೂರು ಪ್ರಕಾರಗಳನ್ನಾಗಿ ವಿಂಗಡಿಸಬಹುದು. ಅವುಗಳೆಂದರೆ,

ರಕ್ಷಣಾತಂತ್ರಗಳು

| I ಆಕ್ರಮಣಕಾರಿ ತಂತ್ರಗಳು | II ಪಲಾಯನ ತಂತ್ರಗಳು | III ಹೊಂದಾಣಿಕೆ ತಂತ್ರಗಳು |
|---|---|---|
| 1. ಸ್ಥಾನ ಬದಲಿ ತಂತ್ರ | 1. ದಮನ | 1. ತಾದಾತ್ಮ್ಯ |
| 2. ಆತ್ಮನಿಂದನೆ | 2. ಅದುಮಿಡುವಿಕೆ | 2. ಉದಾತ್ತೀಕರಣ |
| | 3. ಹಿಮ್ಮರುಳುವಿಕೆ | 3. ಪರಿಹಾರ |
| | 4. ತರ್ಕ ಸಮ್ಮತವಾಗಿಸುವಿಕೆ | |
| | 5. ಪ್ರಕ್ಷೇಪಣೆ | |
| | 6. ಹಗಲುಗನಸು ಕಾಣುವಿಕೆ | |

## I ಆಕ್ರಮಣಕಾರಿ ತಂತ್ರಗಳು (Aggressive Mechanisms)

ಈ ರೀತಿಯ ರಕ್ಷಣಾ ತಂತ್ರಗಳಲ್ಲಿ ವ್ಯಕ್ತಿಯು ಅಡಚಣೆಯನ್ನಾಗಲಿ ಅಥವಾ ಅಡಚಣೆಗೆ ಪ್ರತಿಯಾಗಿ ಬೇರೊಂದು ವಸ್ತು ಅಥವ ವ್ಯಕ್ತಿ ಮೇಲೆ ಆಕ್ರಮಣ ಮಾಡುವ ಮೂಲಕ ತನ್ನನ್ನು ತಾನು ರಕ್ಷಿಸಿಕೊಳ್ಳುತ್ತಾನೆ. ಇಂತಹ ತಂತ್ರಗಳಲ್ಲಿ ಪ್ರಮುಖವೆಂದರೆ. ಸ್ಥಾನ ಬದಲಾವಣೆ ತಂತ್ರ ಮತ್ತು ಆತ್ಮನಿಂದನೆ, ತಂತ್ರಗಳು.

### 1. ಸ್ಥಾನ ಬದಲಿ ತಂತ್ರ (Displacement mechanism)

ವ್ಯಕ್ತಿ ತನ್ನಲ್ಲಿ ಉಂಟಾದ ಕೋಪದ ಭಾವನೆಯನ್ನು ಆ ಕೋಪ ಉಂಟು ಮಾಡಿದ ವ್ಯಕ್ತಿ ಅಥವಾ ವಸ್ತು ಮೇಲೆ ತೋರ್ಪಡಿಸದೆ ಅದಕ್ಕಿಂತ ಕಡಿಮೆ ಅಪಾಯದ ವ್ಯಕ್ತಿ ಅಥವಾ ವಸ್ತುವಿನ ಮೇಲೆ ತೋರ್ಪಡಿಸುವ ತಂತ್ರವೇ **'ಸ್ಥಾನ ಬದಲಿ ತಂತ್ರ'**. ಹೀಗೆ ವ್ಯಕ್ತಿ ತನ್ನ ಸಿಟ್ಟನ್ನು ಬೇರೆ ದುರ್ಬಲ ವ್ಯಕ್ತಿ ಮೇಲೆ ತೋರಿಸುವುದರಿಂದ ಅವನ ಸಿಟ್ಟು ಅಥವಾ ಚಿಂತೆ ಶಮನವಾಗುತ್ತದೆ. ಅಗ ದುರ್ಬಲ ವ್ಯಕ್ತಿ ಇಲ್ಲಿ ಬಲಿಪಶುವಾಗುತ್ತಾನೆ.

ಉದಾಹರಣೆಗೆ:

- ಶಾಲೆಯಲ್ಲಿ ಮುಖ್ಯೋಪಾಧ್ಯಾಯನಿಂದ ಅವಹೇಳನಗೊಂಡ ಶಿಕ್ಷಕನೊಬ್ಬ ತರಗತಿಯಲ್ಲಿ ವಿದ್ಯಾರ್ಥಿಗಳ ಮೇಲೆ ತನ್ನ ಕೋಪ ತೋರಿಸಿಕೊಳ್ಳುವುದು.
- ಮನೆಯಲ್ಲಿ ಹಿರಿಯ ಅಣ್ಣನಿಂದ ಬೈಸಿಕೊಂಡ ಅಥವಾ ಹೊಡೆಸಿಕೊಂಡ ತಮ್ಮ ತನ್ನ ಚಿಕ್ಕ ತಮ್ಮನ ಮೇಲೆ ಕೋಪತೋರಿಸಿಕೊಂಡು ಅವನನ್ನು ಹೊಡೆಯುವುದು.

### 2. ಆತ್ಮ ನಿಂದನೆ (Self Blame)

ಈ ಪ್ರಕಾರದ ತಂತ್ರದಲ್ಲಿ ವ್ಯಕ್ತಿ ತನ್ನನ್ನು ತಾನೇ ನಿಂದಿಸಿಕೊಳ್ಳಲಾರಂಭಿಸುತ್ತಾನೆ. ತನ್ನ ಕೋಪವನ್ನು ಹಾಗೂ ತನ್ನ ಕೋಪಕ್ಕೆ ಕಾರಣವಾದ ವ್ಯಕ್ತಿ ಅಥವಾ ವಸ್ತುವಿನ ಮೇಲೆ ತೋರಿಸಿಕೊಳ್ಳಲಾರದ ಸ್ಥಿತಿಯಿಂದಾಗಿ ಆ ಕೋಪದ ಶಮನಕ್ಕೆ ತನ್ನನ್ನು ತಾನು ನಿಂದಿಸಿಕೊಳ್ಳುತ್ತಾನೆ. ಇದನ್ನೇ ಆತ್ಮನಿಂದನೆ ಎನ್ನಲಾಗುವುದು. ತನ್ನ ಆಶಾಭಂಗಕ್ಕೆ ತಾನೇ ಕಾರಣ ಎಂದು ತನ್ನನ್ನೇ ತಾನು ದೋಷಿಸಿಕೊಂಡು ಮಾನಸಿಕ ರಕ್ಷಣೆ ಮಾಡಿಕೊಳ್ಳುತ್ತಾನೆ. ಇದು ಮತ್ತೊಬ್ಬರಿಗೂ ಹಾನಿಯಾಗದೆ, ಆ ವ್ಯಕ್ತಿಯೂ ಕೋಪದಿಂದ ತಾತ್ಕಾಲಿಕ ತೃಪ್ತಿ ಪಡೆಯುತ್ತಾನೆ.

## II ಪಲಾಯನ ತಂತ್ರಗಳು (Escape Mechanisms)

ಇಂತಹ ತಂತ್ರಗಳಲ್ಲಿ ವ್ಯಕ್ತಿ ಯಾವುದೇ ರೀತಿಯ ಆಕ್ರಮಣಾಕಾರಿ ತಂತ್ರ ಬಳಸದೆ, ಸನ್ನಿವೇಶಗಳಿಂದ ತಪ್ಪಿಸಿಕೊಳ್ಳುವ ಪಲಾಯನ ತಂತ್ರ ಬಳಸುತ್ತಾನೆ. ಇದೇ ಪಲಾಯನ ತಂತ್ರ. ಇಂತಹ ತಂತ್ರಗಳು ಯಾರಿಗೂ ನೋವನ್ನುಂಟು ಮಾಡದೆ ಪಲಾಯನ ಮಾಡಿದ ವ್ಯಕ್ತಿಗೂ ತಾತ್ಕಾಲಿಕ ರಕ್ಷಣೆ ನೀಡುತ್ತವೆ. ಇವುಗಳಲ್ಲಿ ಪ್ರಮುಖವಾದವುಗಳು ಹೀಗಿವೆ.

### 1. ದಮನ (Repression)

ವ್ಯಕ್ತಿಯಲ್ಲಿ ಉಂಟಾಗುವ ಉದ್ವೇಗದಿಂದ ಕೂಡಿದ ಆಲೋಚನೆಗಳನ್ನು ಮನಸ್ಸಿನ ಜಾಗೃತ ಭಾಗದಿಂದ ಅಜಾಗೃತ ಭಾಗಕ್ಕೆ ದೂಡಲ್ಪಡುವ ಅಥವಾ ಅಡಗಿಸಿಕೊಳ್ಳುವ ತಂತ್ರವೇ ದಮನ. ವ್ಯಕ್ತಿ ತನ್ನ ನೋವನ್ನು ಅಥವಾ ಕೀಳರಿಮೆ ಭಾವನೆಯನ್ನು ಅಥವಾ ನಿರಾಶೆ ಉಂಟಾಗುವ ವಿಚಾರಗಳನ್ನು ಮರೆಯುವ ತಂತ್ರವಾಗಿದೆ. ದಮನ ತಂತ್ರವು ಅತ್ಯಂತ ಸಾಮಾನ್ಯ ಹಾಗೂ ಉಪಯುಕ್ತ ತಂತ್ರವಾಗಿದೆ. ವ್ಯಕ್ತಿ ತನಗೆ ಅಸಾಮಾಧಾನ ತಂದ ವಿಚಾರಗಳನ್ನು ತನ್ನಲ್ಲಿಯೇ ಅಡಗಿಸಿಕೊಂಡು

ಸಮಾಧಾನ ತಂದುಕೊಳ್ಳುತ್ತಾನೆ. **ಸಿಗ್‌ಮಂಡ್ ಫ್ರಾಯ್ಡ್‌**ರವರು ದಮನವನ್ನು ಒಂದು ಮಾನಸಿಕ ಪ್ರಕ್ರಿಯ ಎನ್ನುತ್ತಾರೆ. ಅವರ ಪ್ರಕಾರ ವ್ಯಕ್ತಿ ತನ್ನ ಅವಮಾನ, ನಿರಾಶೆ, ಅಪರಾಧ ಮುಂತಾದವುಗಳಿಗೆ ಸಂಬಂಧಪಟ್ಟ ನೋವಿನ ಸಂಗತಿಗಳನ್ನು ಪ್ರಜ್ಞಾನುಭವದಲ್ಲಿ ಇಟ್ಟುಕೊಳ್ಳಲು ಬಯಸದೇ ಅಜಾಗೃತ ಸ್ಥಿತಿಯಲ್ಲಿ ಅಡಗಿಸಿಕೊಳ್ಳುತ್ತಾನೆ. ಇದು ಅಪ್ರಜ್ಞಾ ಸ್ಥಿತಿಯಲ್ಲಿ ಅಗುತ್ತದೆ.

## 2. ಅದುಮಿಡುವುದು (Supression)

ಈ ತಂತ್ರವು ದಮನ ತಂತ್ರದಂತೆಯೇ ಪಲಾಯನ ತಂತ್ರವಾಗಿದೆ. ಆದರೆ ಇಲ್ಲಿ ವ್ಯಕ್ತಿ ಪ್ರಜ್ಞಾಪೂರ್ವಕವಾಗಿ ತನ್ನ ನೋವಿನ ಸಂಗತಿಗಳನ್ನು ವ್ಯಕ್ತಪಡಿಸಲಿಚ್ಚಿಸಿದೆ ಸುಪ್ತ ಮನಸ್ಸಿಗೆ ತಳ್ಳುತ್ತಾನೆ. ದಮನ ತಂತ್ರದಲ್ಲಿ ಈ ಕಾರ್ಯ ಅಪ್ರಜ್ಞಾಸ್ಥಿತಿಯಲ್ಲಾದರೆ ಅದುಮಿಡುವ ತಂತ್ರದಲ್ಲಿ ಪ್ರಜ್ಞಾಪೂರ್ವಕವಾಗಿ ಈ ಕಾರ್ಯ ನಡೆಯುತ್ತದೆ.

## 3. ಹಿಮ್ಮರುಳುವಿಕೆ (Regression)

ವ್ಯಕ್ತಿ ತನ್ನ ಬಾಲ್ಯಾವಸ್ಥೆಗೆ ಮರಳುವ ತಂತ್ರ ಇದಾಗಿದೆ. ತನ್ನ ಅಡಚಣೆಗಳನ್ನು ನಿರ್ವಹಿಸಲು/ ನಿವಾರಿಸಲು ಸಾಧ್ಯವಾಗದಿದ್ದಾಗ ವ್ಯಕ್ತಿ ತನ್ನ ವಯಸ್ಸಿಗೆ ಅನುಗುಣವಲ್ಲದ ಬಾಲ್ಯ ಸಹಜ ವರ್ತನೆ ತೋರುವುದೇ ಹಿಮ್ಮರಳುವಿಕೆ. ಇದು ಒತ್ತಡ ಸನ್ನಿವೇಶದಿಂದ ಪಲಾಯನ ಮಾಡುವ ಸುಲಭ ತಂತ್ರವಾಗಿದೆ. ಚಿಕ್ಕಮಕ್ಕಳಂತೆ ಅಳುವುದು, ಮಾತನಾಡುವುದು, ಬೆರಳು ಚೀಪುವುದು ಹಿಮ್ಮರುಳುವಿಕೆಯ ಸಂಕೇತ. ಕೆಲಸದ ಜವಾಬ್ದಾರಿಯ ಅತಿ ಒತ್ತಡದಿಂದ ವ್ಯಕ್ತಿಗಳು ಹಲವೊಮ್ಮೆ ಮಕ್ಕಳಂತೆ ಅಳುವುದು ಅಥವಾ ಉಗುರು ಕಡಿಯುವುದು ಮಾಡುತ್ತಾರೆ. ಅನೇಕ ಬಾರಿ ಮಹಿಳೆಯರು ತಮ್ಮ ತಲೆಯನ್ನು ಗೋಡೆಗೆ ಬಡಿದುಕೊಳ್ಳುವುದೂ ಉಂಟು. ಸಂತೋಷವಾದಾಗ ಮಕ್ಕಳಂತೆ ಕುಣಿದಾಡುವುದೂ ಉಂಟು.

## 4. ತರ್ಕ ಸಮ್ಮತವಾಗಿಸುವಿಕೆ (Rationalization)

ತನ್ನ ಆತ್ಮಾಭಿಮಾನ ರಕ್ಷಿಸಿಕೊಳ್ಳಲು ವ್ಯಕ್ತಿ ಬಳಸುವ ಸಾಮಾನ್ಯ ತಂತ್ರ ಇದಾಗಿದೆ. ವ್ಯಕ್ತಿ ತನ್ನ ಸೋಲು ಅಥವಾ ನ್ಯೂನ್ಯತೆಗೆ ಕಾರಣಗಳನ್ನು ಒಪ್ಪಿಕೊಳ್ಳದೆ ತನ್ನ ಅಸಮರ್ಥತೆಗೆ ಇತರರು ಒಪ್ಪಿಕೊಳ್ಳುವಂತೆ ಪ್ರತಿಪಾದನೆ ಮಾಡುವ ತಂತ್ರವೇ ತರ್ಕ ಸಮ್ಮತವಾಗಿಸುವ ತಂತ್ರ. ತನ್ನ ಅಸಮರ್ಥತೆಗೆ ಸುಳ್ಳು ಕಾರಣಗಳನ್ನು ಹೇಳಿ ಅವುಗಳನ್ನು ಸತ್ಯದ ಮೇಲೆ ತಲೆ ಹೊಡೆಯುವುದು ಎನ್ನುವಂತೆ ಮಾತಿನ ವೈಖರಿಯಿಂದ ಒಪ್ಪಿಸುವ ತಂತ್ರ ಬಳಸುತ್ತಾನೆ. ಆತಂಕಕ್ಕೆ ಒಳಗಾದಾಗ, ತನ್ನ ಉದ್ವೇಗ ಶಮನ ಮಾಡಿಕೊಳ್ಳಲು ತೋರಿಕೆಗೆ ನ್ಯಾಯ ಸಮ್ಮತವಾದ ಕಾರಣ ನೀಡಿ ನೈಜ ಕಾರಣ ಮುಚ್ಚಿಡುತ್ತಾನೆ.

ಉದಾಹರಣೆಗೆ : ಪರೀಕ್ಷೆಯಲ್ಲಿ ಕಡಿಮೆ ಅಂಕಗಳಿಸಿದ ವ್ಯಕ್ತಿ ಪರೀಕ್ಷೆಯೊಂದೇ ಬುದ್ಧಿವಂತಿಕೆಯ ಮಾನದಂಡವಲ್ಲ ಎಂದು ವಾದಿಸುವುದು.

ದ್ರಾಕ್ಷಿ ಸಿಗದಿದ್ದಾಗ ಅವು ಹುಳಿ ಎಂದ ನರಿಯ ಕಥೆ ಇದಕ್ಕೆ ಉತ್ತಮ ಉದಾಹರಣೆ. ಇದೊಂದು ಸಾರ್ವತ್ರಿಕವಾಗಿ ಬಹುಜನರು ಬಳಸುವ ರಕ್ಷಣಾ ತಂತ್ರವಾಗಿದೆ. ಆದರೆ ವ್ಯಕ್ತಿ ತನ್ನನ್ನು ತಾನೇ ಮೋಸಗೊಳಿಸಿಕೊಳ್ಳುವ ತಂತ್ರ ಇದಾಗಿದೆ.

## 5. ಪ್ರಕ್ಷೇಪಣೆ (Projection)

ವ್ಯಕ್ತಿ ತನ್ನ ಸೋಲು, ನ್ಯೂನ್ಯತೆ ವಿಫಲತೆ ಅಥವಾ ತಾನು ಒಪ್ಪಿಕೊಳ್ಳಲಾರದ ತನ್ನ ಭಾವನೆಯ ವಿಚಾರಗಳನ್ನು ಇತರ ವ್ಯಕ್ತಿಯಲ್ಲಿ ಕಂಡು ಆರೋಪಿಸುವ ಕ್ರಿಯೆಯೇ **'ಪ್ರಕ್ಷೇಪಣ'**. ತನ್ನಲ್ಲೇ ಇರುವ ಒಪ್ಪಿಕೊಳ್ಳಲಾರದ ವಿಚಾರಗಳನ್ನು ಮತ್ತೊಬ್ಬರಲ್ಲಿ ಗ್ರಹಿಸುವ ತಂತ್ರವೇ ಪ್ರಕ್ಷೇಪಣೆ. ಇಲ್ಲಿ ವ್ಯಕ್ತಿ ತನ್ನ ವಿಫಲತೆ ಒಪ್ಪಿಕೊಳ್ಳುವ ಬದಲು ಇತರರಲ್ಲಿ ಇಂತಹ ವೈಫಲ್ಯಗಳಿವೆ ಎಂದು ತೋರಿಸುವ ತಂತ್ರಗಾರಿಕೆ ತೋರುತ್ತಾನೆ.

ಉದಾಹರಣೆಗೆ :

1) ಭ್ರಷ್ಟ ಅಧಿಕಾರಿ ತನ್ನ ತಪ್ಪು ಒಪ್ಪಿಕೊಳ್ಳದೆ ಯಾರು ಭ್ರಷ್ಟರಿಲ್ಲ, ಎಲ್ಲರೂ ಭ್ರಷ್ಟರೇ ಎಂದು ವಾದಿಸುವ ತಂತ್ರಗಾರಿಕೆ. ಇದರಿಂದ ತನ್ನ ತಪ್ಪಿನ ರಕ್ಷಣೆ ಮಾಡಿಕೊಳ್ಳುವ ಸಾಹಸ ಮಾಡುತ್ತಾನೆ.
2) ಸದಾ ತಡವಾಗಿ ಕೆಲಸಕ್ಕೆ ಹಾಜರಾಗುವ ವ್ಯಕ್ತಿ ಯಾರು ಸರಿಯಾಗಿ ಸಮಯ ನಿರ್ವಹಣೆ ಮಾಡುತ್ತಾರೆ, ಎಲ್ಲರೂ ಅವರೇ ಎನ್ನುವುದು ಇತ್ಯಾದಿ.
3) ಅಪ್ರಮಾಣಿಕ ವ್ಯಕ್ತಿ ಇತರರಲ್ಲಿ ಅಪ್ರಮಾಣಿಕ ಗುಣ ಕಂಡು ತನ್ನ ರಕ್ಷಣೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಾನೆ.

### 6. ಹಗಲುಗನಸು (Day Dreaming)

ವ್ಯಕ್ತಿ ನೈಜತೆಯಿಂದ ದೂರವಾಗಿ ಕನಸಿನ ಲೋಕದಲ್ಲಿ ವಿಹರಿಸಿ ತನ್ನ ಬಯಕೆಗಳನ್ನು ಈಡೇರಿಸಿಕೊಳ್ಳುವ ಕನಸು ಕಾಣುವುದೇ ಹಗಲುಗನಸು. ವಾಸ್ತವ ಬದುಕಿನಲ್ಲಿ ಅವನ ಆಸೆ ಆಕಾಂಕ್ಷೆಗಳು ಈಡೇರದ ಸ್ಥಿತಿ ಬಂದಾಗ ಕನಸಿನ ಲೋಕಕ್ಕೆ ಜಿಗಿದು ಸಮಾಧಾನ ತಂದುಕೊಳ್ಳುತ್ತಾನೆ.

ಉದಾಹರಣೆಗೆ: 1) ಒಬ್ಬ ಯುವಕ ಕ್ರಿಕೆಟ್‌ನಲ್ಲಿ ಆಸಕ್ತಿ ಇದ್ದು ವಾಸ್ತವಿಕ ಜೀವನದಲ್ಲಿ ಒಳ್ಳೆಯ ಕ್ರಿಕೆಟಿಗ ಆಗದೇ ಇದ್ದಾಗ, ಕನಸಿನ ಲೋಕಕ್ಕೆ ಜಾರಿ ಉತ್ತಮ ಕ್ರಿಕೆಟಿಗನಾದಂತೆ ಕನಸುಕಂಡು ತೃಪ್ತಿ ಹೊಂದುವುದು. ಹಾಗೆಯೇ ಸಂಗೀತ, ನೃತ್ಯದಲ್ಲಿ ನಟನೆಯಲ್ಲಿ ವೈಫಲ್ಯತೆ ಕಂಡ ವ್ಯಕ್ತಿಗಳು ಹಗಲುಗನಸು ಕಾಣುವ ಮೂಲಕ ಮಾನಸಿಕ ತೃಪ್ತಿ ತಂದು ಕೊಳ್ಳುವುದು.

## III ಹೊಂದಾಣಿಕೆ ತಂತ್ರಗಳು (Adjustment mechanisms)

ವ್ಯಕ್ತಿಯನ್ನು ಅವನ ಪರಿಸರಕ್ಕೆ ಹೊಂದಾಣಿಕೆ ಮಾಡುವಲ್ಲಿ ಪ್ರೇರೇಪಿಸುವ ತಂತ್ರಗಳೇ ಹೊಂದಾಣಿಕೆ ತಂತ್ರಗಳು, ಇವುಗಳಲ್ಲಿ ಮುಖ್ಯವಾಗಿ,

### 1. ತಾದಾತ್ಮ್ಯ (Identification)

ತನ್ನ ಆತ್ಮಗೌರವ ಕಾಪಾಡಿಕೊಳ್ಳಲು ಅಥವಾ ಅತ್ಮಾಭಿಮಾನ ಹೆಚ್ಚಿಸಿಕೊಳ್ಳಲು ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯೊಂದಿಗೆ ಸಂಬಂಧ ಕಲ್ಪಿಸಿಕೊಂಡು ಗುರುತಿಸಿಕೊಳ್ಳುವ ತಂತ್ರವೇ ತಾದಾತ್ಮ್ಯ ತಂತ್ರ . ಯುವಕರಲ್ಲಿ ಇಂತಹ ತಂತ್ರ ಬಳಕೆ ಹೆಚ್ಚು.. ಇವರು ಶಿಕ್ಷಕ, ಕಲಾವಿದ, ಸಮಾಜ ಸೇವಕ ಮೊದಲಾದವರನ್ನು ಮಾದರಿಗಳನ್ನಾಗಿ ಮಾಡಿಕೊಂಡು ಅವರಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ.

2. ವಿದ್ಯಾರ್ಥಿಯೊಬ್ಬ ಶಿಕ್ಷಕರೊಬ್ಬರನ್ನು ಆದರ್ಶವಾಗಿಟ್ಟುಕೊಂಡು ಅವರಲ್ಲಿ ತನ್ನನ್ನು ಗುರ್ತಿಸಿಕೊಳ್ಳುವುದು. ಇದರಿಂದ ಅವರು ಮಾದರಿಯಾಗಿ ಈ ವ್ಯಕ್ತಿಗಳು ಬೆಳೆಯುವ ಸಾಧ್ಯತೆ ಇರುತ್ತದೆ. ಅತಿಯಾದಾಗ ಸ್ವಂತಿಕೆಗೂ ಧಕ್ಕೆ.

### 3. ಉದಾತ್ತೀಕರಣ (Sublimation)

ಇದೊಂದು ರೀತಿಯ ಹೊಂದಾಣಿಕೆ ಪರಿಹಾರ ತಂತ್ರ. ತಮ್ಮ ಆಸೆ ಆಕಾಂಕ್ಷೆಗಳನ್ನು ಪೂರೈಸಲಾಗದ ಅನೇಕ ವ್ಯಕ್ತಿಗಳು ತಮ್ಮ ಶಕ್ತಿಯನ್ನು ಸಾಹಿತ್ಯ ಸೇವೆ, ಸಮಾಜ ಸೇವೆ ಮುಂತಾದ ಕಾರ್ಯಗಳಲ್ಲಿ ತೊಡಗಿ ಸಮಾಧಾನ ಪಡೆಯುವರು.

ಉದಾಹರಣೆಗೆ 1) ಯುವ ಗೃಹಿಣಿಯೊಬ್ಬಳು ತನ್ನ ಕುಟುಂಬ ಹಾಗೂ ಮಕ್ಕಳಲ್ಲಿ ತೃಪ್ತಿ ಕಾಣಾದಾದಾಗ ದಾದಿಯಾಗಿ ಆಸ್ಪತ್ರೆಯಲ್ಲಿ ರೋಗಿಗಳ ರಕ್ಷಣೆಯಲ್ಲಿ ತೊಡಗುವುದು.

1) ಯುವಕರು ಲೈಂಗಿಕ ಅತೃಪ್ತಿಯಿಂದ ಬಳಲುವ ಸ್ಥಿತಿಬಂದಾಗ ಪ್ರೇಮ ಕವನ ಬರೆಯುವ, ಲೈಂಗಿಕ ಪುಸ್ತಕಗಳನ್ನೋದುವ ಹವ್ಯಾಸ ತೋರುವುದು. ಅನೇಕ ಮನಶ್ಯಾಸ್ತ್ರಜ್ಞರು ಅಭಿಪ್ರಾಯಿಸುವಂತೆ ಲೈಂಗಿಕ ಅತೃಪ್ತರನೇಕರು ನೃತ್ಯ, ಕಲೆ, ಸಂಗೀತದಲ್ಲಿ ಸಾಧನೆ ತೋರಿರುವುದು ಉದಾತ್ತೀಕರಣ ತಂತ್ರಕ್ಕೆ ಉದಾಹರಣೆಯಾಗಿದೆ.

### 2) ಪರಿಹಾರ ತಂತ್ರ (Compensation)

ಒಂದು ಚಟುವಟಿಕೆಯಲ್ಲಿ ವಿಫಲತೆ ಕಂಡ ವ್ಯಕ್ತಿ ಮತ್ತೊಂದು ಚಟುವಟಿಕೆಯಲ್ಲಿ ಯಶಸ್ಸು ಕಾಣುವುದೇ ಪರಿಹಾರ. ಒಂದು ಕ್ಷೇತ್ರದಲ್ಲಿ ಸಾಮರ್ಥ್ಯವಿರದ ಅಥವಾ ಸಾಧನೆ ತೋರದ ವ್ಯಕ್ತಿ ಇನ್ನೊಂದು ಕ್ಷೇತ್ರದಲ್ಲಿ ತನ್ನ ಸಾಮರ್ಥ್ಯ ಬಳಸಿಕೊಂಡು ಪರಿಹಾರ ಕಂಡುಕೊಳ್ಳುತ್ತಾನೆ. ಇದರಿಂದ ಅವನ ಆತ್ಮಾಭಿಮಾನ, ಆತ್ಮಗೌರವ ಹೆಚ್ಚುತ್ತದೆ.

ಉದಾಹರಣೆ: 1) ಶಿಕ್ಷಣದಲ್ಲಿ ಅಥವಾ ತರಗತಿ ವಿಷಯಗಳ ಅಧ್ಯಯನದಲ್ಲಿ ಸಾಧನೆ ತೋರಲಾಗದ ಮಗು/ ವಿದ್ಯಾರ್ಥಿ ಆಟ/ಕ್ರೀಡೆಯಲ್ಲಿ ತನ್ನ ಸಾಮರ್ಥ್ಯ ತೋರಿ ತೃಪ್ತಿ ಹೊಂದುವುದು.

2) ಕುರೂಪಿಯಾದ ಮಹಿಳೆ ಇತರರ ಪ್ರೀತಿ ವಿಶ್ವಾಸ ಗಳಿಸಲು ಎಲ್ಲರನ್ನು ಪ್ರೀತಿ ಸಹಾನುಭೂತಿಯಿಂದ ಕಾಣುವ ಮನೋಭಾವ ರೂಢಿಸಿಕೊಳ್ಳುವುದು.

ಮೇಲಿನ ಎಲ್ಲಾ ರಕ್ಷಣಾತಂತ್ರಗಳು ವ್ಯಕ್ತಿ ತನ್ನ ಆತ್ಮಾಭಿಮಾನ ಅಥವಾ ಗೌರವ ರಕ್ಷಿಸಿಕೊಳ್ಳಲು ಬಳಸುವ ತಾತ್ಕಾಲಿಕ ರಕ್ಷಣಾ ತಂತ್ರಗಳಷ್ಟೇ. ಪ್ರತಿಯೊಬ್ಬರ ಬದುಕಿನಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಇವು ಬಳಕೆಯಾಗುತ್ತವೆ. ಇವುಗಳನ್ನು ಸಂದರ್ಭಾನುಸಾರ ಜಾಣ್ಮೆಯಿಂದ ಸೀಮಿತವಾದಂತೆ ಉಪಯೋಗಿಸಿಕೊಂಡಲ್ಲಿ ವ್ಯಕ್ತಿ ತನ್ನ ಆತ್ಮಾಭಿಮಾನ ಅಥವಾ ಗೌರವ ಹೆಚ್ಚಿಸಿಕೊಳ್ಳಬಹುದು ಹಾಗೂ ವ್ಯಕ್ತಿತ್ವ ಕಾಪಾಡಿಕೊಂಡು, ಆಶಾಭಂಗಕ್ಕೆ ಒಳಗಾಗದಂತೆ ರಕ್ಷಿಸಿಕೊಳ್ಳಬಹುದು. ಆದರೆ ಇವು ತಾತ್ಕಾಲಿಕ ಎನ್ನುವುದನ್ನು ನೆನಪಿಡಬೇಕು. ಯಾವುದೇ ಪರ್ಯಾಯ ಮಾರ್ಗಹಿಡಿಯದೆ, ನೇರವಾಗಿ ಸಮಸ್ಯೆಗಳನ್ನು ಎದುರಿಸಿ ದಿಟ್ಟತನದಿಂದ ಸಹಜವಾದ ರೀತಿಯಲ್ಲಿ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ವ್ಯಕ್ತಿತ್ವ ಹೊಂದಾಣಿಕೆಯ ರಾಜಮಾರ್ಗ.

****************************

## ಅಭ್ಯಾಸ ಪ್ರಶ್ನೆಗಳು

### I. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. 'ವ್ಯಕ್ತಿತ್ವ' ಪದವನ್ನು ವ್ಯಾಖ್ಯಾನಿಸಿ.
2. 'Personality''ಪದದ ನಿಷ್ಪತ್ತಿ ಬರೆಯಿರಿ.
3. ಅನುವಂಶೀಯತೆಯ ಅರ್ಥ ಬರೆಯಿರಿ.
4. ಸಮೂಹ ಮಾಧ್ಯಮ ಎಂದರೇನು?
5. ಯಾವುದಾದರೂ ಎರಡು ನಿರ್ನಾಳ ಗ್ರಂಥಿಗಳನ್ನು ಹೆಸರಿಸಿ.
6. ಥೈರಾಯ್ಡ್ ಗ್ರಂಥಿ ಸ್ರವಿಸುವ ಹಾರ್ಮೋನನ್ನು (Harmone) ಹೆಸರಿಸಿ.
7. ಅಡ್ರಿನಲ್ ಗ್ರಂಥಿ ಸ್ರವಿಸುವ ಹಾರ್ಮೋನನ್ನು (Harmone) ಹೆಸರಿಸಿ.
8. ದರ್ಜಾ ಮಾಪನಗಳೆಂದರೇನು?
9. ಪ್ರಕ್ಷೇಪಣ ತಂತ್ರಗಳೆಂದರೇನು?
10. ವಿಸ್ತರಿಸಿ –TAT
11. ಸಮಾಯೋಜನೆ ಪದದ ಅರ್ಥ ಬರೆಯಿರಿ.
12. ಆಶಾಭಂಗ ಎಂದರೇನು?
13. ಉದ್ವೇಗ ಎಂದರೇನು?
14. 'ಅಸಮಾಯೋಜನೆ' ಯ ಅರ್ಥವೇನು?
15. ರಕ್ಷಣಾ ತಂತ್ರಗಳೆಂದರೇನು ?
16. ಸಮಾಯೋಜನೆಗಿರುವ ಎರಡು ಅಡೆತಡೆಗಳನ್ನು ಹೆಸರಿಸಿ.
17. ಆಕ್ರಮಣಕಾರಿ ರಕ್ಷಣಾ ತಂತ್ರಗಳೆಂದರೇನು?
18. ಪಲಾಯನ ರಕ್ಷಣಾ ತಂತ್ರಗಳೆಂದರೇನು?

### II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ನರಮಂಡಲ ವ್ಯವಸ್ಥೆಯ ಎರಡು ಕಾರ್ಯಗಳನ್ನು ತಿಳಿಸಿ.
2. ನಿರ್ನಾಳ ಗ್ರಂಥಿಗಳೆಂದರೇನು? ಯಾವುದಾದರೂ ಎರಡನ್ನು ಹೆಸರಿಸಿ.
3. ಸಮೂಹ ಮಾಧ್ಯಮ ಎಂದರೇನು? ಯಾವುದಾದರೂ ಎರಡನ್ನು ಹೆಸರಿಸಿ.
4. ಅನುವರ್ತಿ –ಅನುವರ್ತಿ ಘರ್ಷಣೆ ಎಂದರೇನು? ಒಂದು ಉದಾಹರಣೆ ಕೊಡಿ.
5. ಅನುವರ್ತಿ– ಅಪವರ್ತಿ ಘರ್ಷಣೆ ಎಂದರೇನು? ಒಂದು ಉದಾಹರಣೆ ಕೊಡಿ.

6. ಅಪವರ್ತಿ– ಅಪವರ್ತಿ ಘರ್ಷಣೆ ಎಂದರೇನು? ಒಂದು ಉದಾಹರಣೆ ಕೊಡಿ.
7. ವ್ಯಕ್ತಿನಿಷ್ಠ ರೀತಿಯ ವ್ಯಕ್ತಿತ್ವ ಮಾಪನ ಎಂದರೇನು? ಒಂದು ಉದಾಹರಣೆ ಕೊಡಿ.
8. ವಸ್ತುನಿಷ್ಠ ರೀತಿಯ ವ್ಯಕ್ತಿತ್ವ ಮಾಪನ ಎಂದರೇನು? ಒಂದು ಉದಾಹರಣೆ ಕೊಡಿ.
9. ಪ್ರಕ್ಷೇಪಣ ತಂತ್ರಗಳೆಂದರೇನು? ಒಂದು ಉದಾಹರಣೆ ಕೊಡಿ.
10. ರಕ್ಷಣಾ ತಂತ್ರಗಳೆಂದರೇನು ? ಅವುಗಳ ಒಂದು ಮಹತ್ವ ತಿಳಿಸಿ.

## III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪುಟ ಮೀರದಂತೆ ಉತ್ತರಿಸಿ.

1. ವ್ಯಕ್ತಿತ್ವದ ಆಯಾಮಗಳನ್ನು ಸಂಕ್ಷಿಪ್ತದಲ್ಲಿ ವಿವರಿಸಿ.
2. ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರದಲ್ಲಿ ನಿರ್ನಾಳ ಗ್ರಂಥಿಗಳ ಪಾತ್ರವೇನು? ಸಂಕ್ಷಿಪ್ತದಲ್ಲಿ ವಿವರಿಸಿ.
3. ವ್ಯಕ್ತಿಯ ವರ್ತನೆಯ ಮೇಲೆ ದೈಹಿಕ ರಚನೆಯ ಪರಿಣಾಮವೇನು?
4. ವ್ಯಕ್ತಿಯ ವ್ಯಕ್ತಿತ್ವ ಮೇಲೆ ಕುಟುಂಬದ ಪ್ರಭಾವವೇನು?
5. ಮಗುವಿನ ವ್ಯಕ್ತಿತ್ವ ವಿಕಾಸದಲ್ಲಿ ಶಾಲೆಯ ಪಾತ್ರವೇನು?
6. ವ್ಯಕ್ತಿಯ ವ್ಯಕ್ತಿತ್ವ ವಿಕಾಸದಲ್ಲಿ ಸಮೂಹ ಮಾಧ್ಯಮಗಳ ಪಾತ್ರವೇನು?
7. ಪ್ರಕ್ಷೇಪಣ ತಂತ್ರಗಳೆಂದರೇನು? ಕಥಾಸಂಪ್ರತ್ಯಕ್ಷಣಾ ಪರೀಕ್ಷೆ (TAT) ಯ ಪ್ರಾಮುಖ್ಯತೆ ಬರೆಯಿರಿ.
8. ವ್ಯಕ್ತಿತ್ವ ಪರೀಕ್ಷೆಯ ವಸ್ತುನಿಷ್ಠ ವಿಧಾನ ಎಂದರೇನು? ವ್ಯಕ್ತಿತ್ವ ಪರೀಕ್ಷೆಯಲ್ಲಿ ದರ್ಜಾ ಮಾಪನದ ಮಹತ್ವ ಬರೆಯಿರಿ.
9. ಸಮಾಯೋಜಿತ ವ್ಯಕ್ತಿತ್ವದ ಲಕ್ಷಣಗಳಾವುವು?
10. ಸಮಾಯೋಜನೆಯ ಅಡೆತಡೆಗಳಲ್ಲಿ ಯಾವುದಾದರೂ ಎರಡನ್ನು ವಿವರಿಸಿ.
11. ಸಮಾಯೋಜನೆ ಅಡೆತಡೆಗಳಾಗಿ ಮಾನಸಿಕ ಘರ್ಷಣೆ ಪಾತ್ರವೇನು ?
12. ಅಸಮಾಯೋಜನೆ ಎಂದರೇನು? ಎರಡು ಕಾರಣಗಳನ್ನು ವಿವರಿಸಿ.
13. ರಕ್ಷಣ ತಂತ್ರಗಳೆಂದರೇನು ? ಯಾವುದಾದರೂ ಎರಡನ್ನು ಸಂಕ್ಷಿಪ್ತದಲ್ಲಿ ವಿವರಿಸಿ.
14. ಪಲಾಯನ ರಕ್ಷಣ ತಂತ್ರಗಳನ್ನು ಸಂಕ್ಷಿಪ್ತದಲ್ಲಿ ವಿವರಿಸಿ.
15. ಆಕ್ರಮಣಕಾರಿ ರಕ್ಷಣ ತಂತ್ರಗಳನ್ನು ಸಂಕ್ಷಿಪ್ತದಲ್ಲಿ ವಿವರಿಸಿ.

## IV. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡು ಪುಟಗಳು ಮೀರದಂತೆ ಉತ್ತರಿಸಿ.

1. ವ್ಯಕ್ತಿತ್ವದ ಪರಿಕಲ್ಪನೆ ಬರೆಯಿರಿ. ವ್ಯಕ್ತಿತ್ವದ ಆಯಾಮಗಳನ್ನು ವಿವರಿಸಿ.
2. ವ್ಯಕ್ತಿಯ ವ್ಯಕ್ತಿಯ ನಿರ್ಧಾರದಲ್ಲಿ ಅನುವಂಶೀಯತೆ ಹಾಗೂ ನಿರ್ನಾಳ ಗ್ರಂಥಿಗಳ ಪಾತ್ರ ವಿವರಿಸಿ.
3. ವ್ಯಕ್ತಿಯ ವ್ಯಕ್ತಿತ್ವ ನಿರ್ಧರಿಸುವಲ್ಲಿ ದೈಹಿಕ ರಚನೆ ಹಾಗೂ ನರಮಂಡಲ ವ್ಯವಸ್ಥೆಯ ಪಾತ್ರ ವಿವರಿಸಿ.
4. ವ್ಯಕ್ತಿಯ ವ್ಯಕ್ತಿತ್ವ ನಿರ್ಧಾರದಲ್ಲಿ ಕುಟುಂಬ ಹಾಗೂ ಶಾಲೆಯ ಪಾತ್ರ ವಿವರಿಸಿ.
5. ಸಮಾಯೋಜನೆ ಹಾಗೂ ಅಸಮಾಯೋಜನೆಯ ಪರಿಕಲ್ಪನೆ ಬರೆಯಿರಿ. ಸಮಾಯೋಜಿತ ವ್ಯಕ್ತಿತ್ವ ಲಕ್ಷಣಗಳಾವುವು?
6. ಅಸಮಾಯೋಜನೆಯ ಕಾರಣಗಳನ್ನು ವಿವರಿಸಿ ಹಾಗೂ ಪರಿಹಾರ ಮಾರ್ಗಗಳನ್ನು ಸೂಚಿಸಿ.
7. ಸಮಾಯೋಜನೆಯ ಪ್ರಮುಖ ಅಡೆತಡೆಗಳನ್ನು ವಿವರಿಸಿ.
8. ಆಕ್ರಮಣಕಾರಿ ರಕ್ಷಣ ತಂತ್ರಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.
9. ಪಲಾಯನ ರಕ್ಷಣ ತಂತ್ರಗಳನ್ನು ಉದಾಹರಣೆಗಳೊಂದಿಗೆ ವಿವರಿಸಿ.

********************************

ಘಟಕ 4

# ಸಂಯೋಜನಾ ಶಿಕ್ಷಣ

# Inclusive Education

4.1 ಸಂಯೋಜನಾ ಶಿಕ್ಷಣ: ಪರಿಕಲ್ಪನೆ–ಮಹತ್ವ.

4.2 ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ–ಅವುಗಳ ಪರಿಕಲ್ಪನೆ–ಗುಣಲಕ್ಷಣಗಳು–ಶೈಕ್ಷಣಿಕ ಕ್ರಮಗಳು.

4.2.1 ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು

4.2.2 ದೃಷ್ಟಿ ಸವಾಲುಗಳುಳ್ಳ ಮಕ್ಕಳು

4.2.3 ಶ್ರವಣ ಸವಾಲುಗಳುಳ್ಳ ಮಕ್ಕಳು

4.2.4 ಮಾನಸಿಕ ಸವಾಲುಗಳುಳ್ಳ ಮಕ್ಕಳು

4.2.5 ಕಲಿಕಾ ಸವಾಲುಗಳುಳ್ಳ ಮಕ್ಕಳು

**ಉದ್ದೇಶಗಳು:**

ಈ ಘಟಕದ ಬೋಧನೆಯ ನಂತರ ವಿದ್ಯಾರ್ಥಿಗಳು,

- ಸಂಯೋಜನಾ ಶಿಕ್ಷಣದ ಪರಿಕಲ್ಪನೆಯನ್ನು ಸ್ಮರಿಸುವರು.
- ಸಾಂಪ್ರದಾಯಿಕ ಮತ್ತು ಸಂಯೋಜನಾ ಶಿಕ್ಷಣದ ವ್ಯತ್ಯಾಸ ಹೇಳುವರು.
- ವಿಶೇಷ ಅಗತ್ಯವುಳ್ಳ ಮಕ್ಕಳನ್ನು ವರ್ಗೀಕರಿಸುವರು.
- ಸಂಯೋಜನಾ ಶಿಕ್ಷಣದ ಮಹತ್ವ ವಿವರಿಸುವರು.
- ವಿವಿಧ ವಿಶೇಷ ಅಗತ್ಯವುಳ್ಳ ಮಕ್ಕಳ ಲಕ್ಷಣಗಳನ್ನು ಪಟ್ಟಿ ಮಾಡುವರು.
- ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಒದಗಿಸುವ ಶಿಕ್ಷಣ ಕ್ರಮಗಳನ್ನು ವಿವರಿಸುವರು.

*****************

*"ಸಮಸ್ಯೆ ಇರುವುದು ನಮ್ಮ ನಡುವಿರುವ ವ್ಯತ್ಯಾಸಗಳನ್ನು ಅಳಿಸಿ ಹಾಕುವುದರಲ್ಲಲ್ಲ, ಬದಲಿಗೆ ವ್ಯತ್ಯಾಸಗಳಿದ್ದು ನಾವು ಒಂದಾಗಿ ಇರುವುದು ಹೇಗೆ ಎಂದು ಕಂಡುಕೊಳ್ಳುವಲ್ಲಿ"*

– ರವೀಂದ್ರನಾಥ ಟ್ಯಾಗೋರ್.



ಘಟಕ 4

# ಸಂಯೋಜನಾ ಶಿಕ್ಷಣ
# Inclusive Education

ಶಿಕ್ಷಣ ಪ್ರತಿಯೊಂದು ಮಗುವಿನ ಹಕ್ಕು. ಏಕೆಂದರೆ ಬದುಕಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಲು ಮಗುವನ್ನು ಸಿದ್ಧಗೊಳಿಸುವುದೇ ಶಿಕ್ಷಣವಾಗಿದೆ. ಅದರಲ್ಲೂ ವೈಕಲ್ಯಗಳಿರುವ ಮಕ್ಕಳಿಗಂತೂ ಶಿಕ್ಷಣದ ಅವಶ್ಯಕತೆ ಇನ್ನೂ ಹೆಚ್ಚು. ವಿಶ್ವ ಆರೋಗ್ಯ ಸಂಸ್ಥೆಯ ಸರ್ವರಿಗೂ ಶಿಕ್ಷಣ ನೀತಿ 1991 ರ ನಿರ್ಧಾರದಂತೆ ವಿಶೇಷ ಅಗತ್ಯವಿರುವ ಮಕ್ಕಳಿಗೂ ಸಹ ಇತರೆ ಮಕ್ಕಳೊಡನೆ ಸಮಾನ ಶೈಕ್ಷಣಿಕ ಅವಕಾಶ ಪಡೆಯುವಂತಹ ವಾತಾವರಣವನ್ನು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲಿ ಕೊಡಬೇಕಾಗಿರುವದು ಎಲ್ಲ ಸದಸ್ಯ ರಾಷ್ಟ್ರಗಳ ಅವಶ್ಯಕತೆಯಾಗಿದೆ. ವಿಶ್ವಸಂಸ್ಥೆಯ ಅಂಗವಿಕಲ ಮಕ್ಕಳ ಸಮಾನ ಅವಕಾಶಗಳ ಸಂರಕ್ಷಣೆ ನಿಯಮ(1993)ವು **"ರಾಷ್ಟ್ರಗಳು ಮಕ್ಕಳ, ಯುವಕರ ಮತ್ತು ವಯಸ್ಕರ ಸಮಾನ ಶೈಕ್ಷಣಿಕ ಅವಕಾಶಗಳ ತತ್ವಗಳನ್ನು ಸಮನ್ವಯ ವ್ಯವಸ್ಥೆಯಲ್ಲಿ ಗುರುತಿಸಬೇಕು ಹಾಗೂ ಎಲ್ಲ ಅಸಮರ್ಥ ಮಕ್ಕಳ ಶಿಕ್ಷಣವನ್ನು ದೃಢೀಕರಿಸಬೇಕು"** ಎಂದು ಪ್ರತಿಪಾದಿಸುತ್ತದೆ. ಶಾಲೆಗಳು ಕಾನೂನು ಅವಕಾಶಗಳನ್ನು ಸಾಕಾರಗೊಳಿಸಲು ಸಂಯೋಜನಾ ಶಾಲೆಗಳಾಗಿ ಪರಿವರ್ತಿತವಾಗಬೇಕು. **ಸಲಾಮಂಕಾರ**ವರ ಹೇಳಿಕೆಯಂತೆ ಪ್ರತಿ ಮಗು ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಹೊಂದಿದೆ. ಅದಕ್ಕಾಗಿ ವೈವಿಧ್ಯಮಯ ಆಸಕ್ತಿ, ಸಾಮರ್ಥ್ಯ ಮತ್ತು ಕಲಿಕಾ ಅವಶ್ಯಕತೆಗಳನ್ನು ಪೂರೈಸಲು ಶಿಕ್ಷಣ ವ್ಯವಸ್ಥೆಯು ಕಾರ್ಯಕ್ರಮಗಳನ್ನು ವಿನ್ಯಾಸಗೊಸಬೇಕು. ಮುಂದುವರೆದು ಹೇಳುವಂತೆ ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣವನ್ನು ಸಾಮಾನ್ಯ ಶಾಲೆಗಳಲ್ಲಿಯೇ ಶಿಶು ಕೇಂದ್ರಿತ ಬೋಧನೆಯ ಮೂಲಕ ಇವರ ಅಗತ್ಯಗಳನ್ನು ಈಡೇರಿಸುವಂತಾಗಬೇಕು ಎಂದಿದ್ದಾರೆ. ಭಾರತೀಯ ಸಂವಿಧಾನದ ನಿರ್ದೇಶಕ ತತ್ವಗಳು, ರಾಷ್ಟ್ರೀಯ ಶಿಕ್ಷಣ ನೀತಿ–1986 ಮತ್ತು ಸರ್ವಶಿಕ್ಷಣ ಅಭಿಯಾನ(2001–10) ಅದಲ್ಲದೇ ಸರ್ವರಿಗೂ ಶಿಕ್ಷಣ(EFA-2015) ಸರ್ವರಿಗೂ ಆರೋಗ್ಯ(EFH-2015)–ಇವುಗಳು ಮಾನವ ಅಭಿವೃದ್ಧಿ ಸಚಿವಾಲಯ ಮತ್ತು ಸರ್ವಶಿಕ್ಷಣ ಅಭಿಯಾನದ ರಾಜ್ಯ ಅನುಷ್ಠಾನ ಪ್ರಾಧಿಕಾರಗಳು ರಾಷ್ಟ್ರದ 6 ರಿಂದ 14 ವಯೋಮಾನದ ವಿಶೇಷ ಅಗತ್ಯವುಳ್ಳ ಹಾಗೂ ಇತರ ಎಲ್ಲಾ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ಪ್ರವೇಶ ನೀಡುವ ಮತ್ತು ಶಾಲೆಯಲ್ಲಿ ಉಳಿಸಿಕೊಳ್ಳುವ ಭರವಸೆಯನ್ನು ನೀಡುತ್ತವೆ. ರಾಷ್ಟ್ರದ ಯಾವುದೇ ಸಾಮಾನ್ಯ ಶಾಲೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಪ್ರವೇಶವನ್ನು ನಿರಾಕರಿಸುವಂತಿಲ್ಲ ಈ ಹಿನ್ನೆಲೆಯಲ್ಲಿ ಪ್ರಸ್ತುತ ಎಲ್ಲಾ ಶಾಲೆಗಳು ಸಂಯೋಜನಾ ಶಾಲೆಗಳಾಗಿವೆ. ಆದ್ದರಿಂದ ಸಂಯೋಜನಾ ಶಿಕ್ಷಣವನ್ನು ತರಗತಿಯಲ್ಲಿ ಅನುಷ್ಠಾನಗೊಳಿಸಲು ಸಂಯೋಜನಾ ಶಿಕ್ಷಣದ ತತ್ವಗಳ ಸ್ಪಷ್ಟ ತಿಳಿವಳಿಕೆಯು ಅತ್ಯವಶ್ಯಕವಾಗಿದೆ.

## 4.1 ಸಂಯೋಜನಾ ಶಿಕ್ಷಣದ ಪರಿಕಲ್ಪನೆ (Concept of Inclusive Education)

"ಸರ್ವಸಾಮರ್ಥ್ಯಗಳನ್ನು ಹೊಂದಿದ ಸಾಮಾನ್ಯ ಮಕ್ಕಳ ಮತ್ತು ವಿಶೇಷ ಅಗತ್ಯವುಳ್ಳ ಮಕ್ಕಳನ್ನೊಳಗೊಂಡ ಸಮೂಹಕ್ಕೆ ಸಮಾನ ಅವಕಾಶಗಳ ತತ್ವಗಳನ್ನಾಧರಿಸಿ ಒಟ್ಟಾಗಿ ಕಲಿಯುವ ಅವಕಾಶವನ್ನು ಕಲ್ಪಿಸುವ ಶಿಕ್ಷಣವೇ **ಸಂಯೋಜನಾ ಶಿಕ್ಷಣ**".

**"ಸಾಮಾನ್ಯ ಶಾಲೆಯ ವರ್ಗ ಕೋಣೆಯ ಎಲ್ಲಾ ಮಕ್ಕಳಿಗೂ ಕಲಿಯುವ ಸಮಾನ ಅವಕಾಶಗಳನ್ನು ಕಲ್ಪಿಸುವ, ಪ್ರತಿಯೊಂದು ಮಗುವಿನ ಅವಶ್ಯಕತೆಗಳಿಗೆ ಹೊಂದಾಣಿಕೆ ಮಾಡಲು, ಸಾಮಾನ್ಯ ಶಿಕ್ಷಕನು ಸೌಲಭ್ಯಕಾರನಾಗಿ ಕಾರ್ಯನಿರ್ವಹಿಸುವ ವ್ಯವಸ್ಥೆಯೇ ಸಂಯೋಜನಾ ಶಿಕ್ಷಣ."**

**"ಸಾಮಾನ್ಯ ಶಾಲೆ ಮತ್ತು ವರ್ಗ ಕೋಣೆಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ, ಸಾಮಾನ್ಯ ಮಕ್ಕಳೊಂದಿಗೆ ಶಿಕ್ಷಣವನ್ನು ಒದಗಿಸುವುದೇ ಸಂಯೋಜನಾ ಶಿಕ್ಷಣ."**

ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಶಿಕ್ಷಣವನ್ನು ಒದಗಿಸುವ ವಿಶೇಷ ಮಾರ್ಗವೇ ಸಂಯೋಜನಾ ಶಿಕ್ಷಣ. ಈ ಮಾದರಿಯಲ್ಲಿ ವಿಶೇಷ ಅಗತ್ಯವುಳ್ಳ ಮಕ್ಕಳು ತಮ್ಮ ಬಹಳಷ್ಟು ಸಮಯವನ್ನು ಇತರ ಸಾಮಾನ್ಯ ಮಕ್ಕಳೊಂದಿಗೆ ಕಳೆಯುತ್ತಾರೆ.

ಸಮಗ್ರ ಶಿಕ್ಷಣದಲ್ಲಿ ನಡೆಯುವಂತೆ ಮಗುವನ್ನು ಪ್ರತ್ಯೇಕ ಕೋಣೆ ಇಲ್ಲವೆ ಪ್ರತ್ಯೇಕ ತರಗತಿಗೆ ಕೊಂಡೊಯ್ಯದೆ, ಅವನಿಗೆ ಸಾಮಾನ್ಯ ವರ್ಗಕೋಣೆಯ ಎಲ್ಲ ಬೆಂಬಲ ಸೇವೆಗಳನ್ನು ಸಂಯೋಜನಾ ಶಿಕ್ಷಣದಲ್ಲಿ ಒದಗಿಸಲಾಗುವದು.

ಸಂಯೋಜನಾ ಶಿಕ್ಷಣವು ಈ ಹಿಂದೆ ಜಾರಿಯಲ್ಲಿದ್ದ ಸಮಗ್ರ ಮತ್ತು ಮುಖ್ಯವಾಹಿನಿಯ ಶಿಕ್ಷಣಕ್ಕಿಂತ ವಿಭಿನ್ನ ದೃಷ್ಟಿಕೋನ ಹೊಂದಿದೆ. ಇದು ಮುಖ್ಯವಾಹಿಯಲ್ಲಿಯೇ ವಿಕಲಚೇತನ ಮತ್ತು ವಿಶೇಷ ಶಿಕ್ಷಣದ ಅಗತ್ಯವುಳ್ಳ ಮಕ್ಕಳ ಪಾಲ್ಗೊಳ್ಳುವಿಕೆಗೆ ಅವಕಾಶ ನೀಡಿ ಅವರ ಅಗತ್ಯಗಳನ್ನು ಪೂರೈಸುತ್ತದೆ. ತರಗತಿಯ ಎಲ್ಲ ಚಟುವಟಿಕೆಗಳಲ್ಲಿ ಭಾಗವಹಿಸುವದು ಮಗುವಿನ ಹಕ್ಕಾಗಿದೆ ಮತ್ತು ಅಂತಹ ಮಕ್ಕಳನ್ನು ಸ್ವೀಕರಿಸುವದು ಶಾಲೆಯ ಕರ್ತವ್ಯವಾಗಿದೆ. ವಿಕಲಚೇತನ ಮಕ್ಕಳನ್ನು ಸಾಮಾನ್ಯ ಮಕ್ಕಳಿಂದ ಪ್ರತ್ಯೇಕಗೊಳಿಸಿ ವಿಶೇಷ ಶಾಲೆ ಮತ್ತು ತರಗತಿಗಳನ್ನು ಉಪಯೋಗಿಸುವದನ್ನು ಇದು ತಿರಸ್ಕರಿಸುತ್ತದೆ. ವೈಕಲ್ಯ ಹೊಂದಿದ ಮಕ್ಕಳು ಪೂರ್ಣ ಪ್ರಮಾಣದಲ್ಲಿ ಭಾಗವಹಿಸುವಂತೆ ಮತ್ತು ಅವರ ಸಾಮಾಜಿಕ ಶೈಕ್ಷಣಿಕ ಮತ್ತು ನಾಗರಿಕ ಹಕ್ಕುಗಳನ್ನು ಗೌರವಿಸುವಂತಹ ಶಿಕ್ಷಣ ವ್ಯವಸ್ಥೆ ಮಾಡಲಾಗುತ್ತದೆ. ಸಂಯೋಜನಾ ಶಿಕ್ಷಣವು ವಿಕಲಾಂಗ ಚೇತನ ಮಕ್ಕಳಿಗೆ ತರಗತಿಯ ಒಳಗೆ ಹಾಗೂ ಹೊರಗೆ ನೈಜ ಬದುಕಿನಲ್ಲಿ ಉಪಯೋಗಿಸಬಹುದಾದ ಕೌಶಲ್ಯಗಳನ್ನು ಒದಗಿಸುತ್ತದೆ. ಪೂರ್ಣ ಪ್ರಮಾಣದ ಸಂಯೋಜನಾ ಶಿಕ್ಷಣ ಶಾಲೆಗಳು 'ಸಾಮಾನ್ಯ ಶಿಕ್ಷಣ' ಹಾಗೂ 'ವಿಶೇಷ ಶಿಕ್ಷಣ' ಕುರಿತು ಯಾವುದೇ ವ್ಯತ್ಯಾಸ ಮಾಡದೇ ಎಲ್ಲ ಮಕ್ಕಳು ಒಟ್ಟಿಗೆ ಕಲಿಯುವಂತಹ ಕಾರ್ಯಯೋಜನೆಗಳನ್ನು ಒಳಗೊಂಡಿರುತ್ತದೆ.

## ಸಾಂಪ್ರದಾಯಿಕ ಮತ್ತು ಸಂಯೋಜನಾ ಮಾರ್ಗಗಳ ನಡುವಿನ ವ್ಯತ್ಯಾಸಗಳು (Difference between Traditional and inclusive Approach)

| ಸಾಂಪ್ರದಾಯಿಕ ಮಾರ್ಗ | ಸಂಯೋಜನಾ ಮಾರ್ಗ |
|---|---|
| • ಕೆಲವರಿಗಾಗಿ ಮಾತ್ರ ಶಿಕ್ಷಣ. | • ಸರ್ವರಿಗಾಗಿ ಶಿಕ್ಷಣ |
| • ಇದು ಜಡತ್ವದಿಂದ ಕೂಡಿದೆ. | • ನಮ್ಯತೆಯಿಂದ ಕೂಡಿದೆ. |
| • ಸಾಮೂಹಿಕ ಬೋಧನೆ ನಡೆಯತ್ತದೆ. | • ವೈಯಕ್ತಿಕರಿಸಿದ ಬೋಧನೆ ನಡೆಯುತ್ತದೆ. |
| • ಪ್ರತ್ಯೇಕವಾದ ವ್ಯವಸ್ಥೆಯಲ್ಲಿ ಕಲಿಕೆ. | • ಸಂಯೋಜಿತ ವ್ಯವಸ್ಥೆಯಲ್ಲಿ ಕಲಿಕೆ. |
| • ಬೋಧನೆಗೆ ಮಹತ್ವ | • ಕಲಿಕೆಗೆ ಮಹತ್ವ |
| • ವಿಷಯ ಕೇಂದ್ರಿತ | • ಶಿಶು ಕೇಂದ್ರಿತ |
| • ನೈದಾನಿಕ/ನಿಗದಿಗೊಳಿಸಿದ | • ಸಮಗ್ರತೆಯಿಂದ ಕೂಡಿದೆ. |
| • ಹೊರಗಿಡುವದರಿಂದ ಸೀಮಿತ ಅವಕಾಶಗಳು. | • ಸರ್ವರಿಗೂ ಸಮಾನ ಅವಕಾಶಗಳು. |

## ಸಂಯೋಜನಾ ಶಿಕ್ಷಣದ ಮಹತ್ವ.(Importance of Inclusive Education)

1. **ತಮ್ಮ ಮಕ್ಕಳ ಭಾವೀ ಜೀವನದ ಕನಸುಗಳನ್ನು ನನಸಾಗಿಸುವುದು ( Family's visions of a typical life for their children can come true):** ಎಲ್ಲ ಪಾಲಕರು ತಮ್ಮ ಮಕ್ಕಳು ಅವರ ಸಹಪಾಠಿಗಳಿಂದ ಸ್ವೀಕರಿಸಲ್ಪಡಬೇಕು, ಗೆಳೆಯರನ್ನು ಹೊಂದಿರಬೇಕು ಮತ್ತು ಇತರರೊಂದಿಗೆ ಸಹಜವಾಗಿ ಬೆರೆತು ಜೀವನ ನಡೆಸಬೇಕು ಎಂದು ಬಯಸುತ್ತಾರೆ. ಸಂಯೋಜನಾ ಶಿಕ್ಷಣ ವ್ಯವಸ್ಥೆಯು ವೈಕಲ್ಯಗಳಿಂದ ಕೂಡಿದ ಮಕ್ಕಳ ಹಾಗೂ ಪಾಲಕರ ಈ ಆಶಯವನ್ನು ಈಡೇರಿಸುವುದು.
2. **ಮಕ್ಕಳು ತಮ್ಮ ಮತ್ತು ಇತರರ ಬಗ್ಗೆ ಧನಾತ್ಮಕ ಅರಿವನ್ನು ಹೊಂದುವರು.( Children develop a positive understanding of themselves and others):** ಶಾಲೆ ಮತ್ತು ತರಗತಿಗಳು ವೈವಿಧ್ಯಮಯ ಸಮಾಜವನ್ನು ಪ್ರತಿನಿಧಿಸುತ್ತವೆ. ವೈವಿಧ್ಯಮಯ ಸಾಮರ್ಥ್ಯಗಳು ಮತ್ತು ಸಂಸ್ಕೃತಿಯನ್ನು ಹೊಂದಿದ ಮಕ್ಕಳು ಜೊತೆಗೂಡಿ ಕಲಿಯುವದರಿಂದ ಇತರರನ್ನು ಗೌರವಿಸುವುದನ್ನು ಮತ್ತು ತಿಳಿದುಕೊಳ್ಳುವುದನ್ನು ಕಲಿಯುವರು. ಇದರಿಂದ ಮಕ್ಕಳು ವಿವಿಧತೆಯನ್ನು ಮೆಚ್ಚಿಕೊಳ್ಳುವದನ್ನು ಕಲಿಯುವರು.
3. **ಸಾಮಾಜಿಕ ಗುಣಗಳ ಅಭಿವೃದ್ಧಿ(Development of Social Traits):** ಸಂಯೋಜನಾ ಶಿಕ್ಷಣದಲ್ಲಿ ಅಸಮರ್ಥತೆ ಹೊಂದಿದ ಮತ್ತು ಹೊಂದಿರದ ಮಕ್ಕಳು ಜೊತೆಗೂಡಿ ಕಲಿಯುವ ಅವಕಾಶ ಪಡೆಯುವದರಿಂದ ಪ್ರತಿಯೊಬ್ಬರೂ ಪರಸ್ಪರರಿಂದ ಕಲಿಯುವರು. ಸಹಕಾರ, ಸಂಯಮ, ತ್ಯಾಗ, ಸಹೋದರತ್ವ, ಅನುಕಂಪ ಮುಂತಾದ ಸಾಮಾಜಿಕ ಹೊಂದಾಣಿಕೆಯ ಗುಣಗಳು ಮಕ್ಕಳಲ್ಲಿ ಮೂಡಿ ಬರುತ್ತವೆ. ಸಂಯೋಜನಾ ಶಿಕ್ಷಣ ವ್ಯವಸ್ಥೆಯ ಶಾಲಾ ಪರಿಸರವು ಮಕ್ಕಳು ಸಾಮಾಜಿಕ ಕೌಶಲಗಳನ್ನು ಪಡೆಯುವ ಪ್ರಮುಖ ತಾಣವಾಗಿ ಕಾರ್ಯನಿರ್ವಹಿಸುತ್ತದೆ.
4. **ಮಕ್ಕಳು ಮಹತ್ವದ ಶೈಕ್ಷಣಿಕ ಕೌಶಲಗಳನ್ನು ಹೊಂದುವರು.(Children learn important academic skills):** ಸಂಯೋಜನಾ ಶಿಕ್ಷಣ ವ್ಯವಸ್ಥೆಯ ತರಗತಿಗಳಲ್ಲಿ ಸಾಮರ್ಥ್ಯವುಳ್ಳ ಸಾಮಾನ್ಯ ಮಕ್ಕಳು ಹಾಗೂ

ಅಸಾಮರ್ಥ್ಯದ ವಿಕಲಾಂಗಚೇತನ ಮಕ್ಕಳು ಜೊತೆಗೂಡಿ ಓದುವ, ಬರೆಯುವ, ಗಣಿತದ ಸಮಸ್ಯೆಗಳನ್ನು ಬಿಡಿಸುವುದನ್ನು ಕಲಿಯುವರು. ಇತರರಂತೆ ಗರಿಷ್ಟ ನಿರೀಕ್ಷೆಗಳನ್ನು ಹೊಂದಿ ಉತ್ತಮ ಬೋಧನೆಯ ಮೂಲಕ ಅಸಮರ್ಥ ಮಕ್ಕಳೂ ಕೂಡ ಶೈಕ್ಷಣಿಕ ಕೌಶಲಗಳನ್ನು ಪಡೆಯುವರು.

5. **ಎಲ್ಲ ಮಕ್ಕಳೂ ಒಗ್ಗೂಡಿ ಕಲಿಯುವರು.( All children learn by being together):** ಒಂದು ತರಗತಿಯಲ್ಲಿ ಎಲ್ಲ ಮಕ್ಕಳಿಗೂ ಕಲಿಯಲು ಅನುಕೂಲವಾಗುವಂತೆ ಸಹಾಯ ಮಾಡುವ ತಾತ್ವಿಕ ಹಿನ್ನೆಲೆಯನ್ನು ಸಂಯೋಜನಾ ಶಿಕ್ಷಣ ಹೊಂದಿದೆ. ಅಂತೆಯೇ ಮಕ್ಕಳು ತಮ್ಮದೇ ಆದ ವೇಗದಲ್ಲಿ ತಮ್ಮ ಸಾಮರ್ಥ್ಯಗಳಿಗನುಗುಣವಾಗಿ ತಮ್ಮದೇ ಆದ ವಿಶಿಷ್ಟ ವಿಧಾನದಲ್ಲಿ ಕಲಿಕೆಯನ್ನು ಪೋಷಿಸುವ ವಾತಾವರಣದಲ್ಲಿ ಕಲಿಯುವರು.

**ವಿಶಿಷ್ಟ ಮಕ್ಕಳನ್ನು ಅವರಲ್ಲಿ ಕಂಡು ಬರುವ ಭಿನ್ನತೆಗಳಿಗನುಗುಣವಾಗಿ ಮನೋವಿಜ್ಞಾನಿಗಳು 4 ವಿಧಗಳಾಗಿ ವಿಂಗಡಿಸಿದ್ದಾರೆ.**

### I. ದೈಹಿಕ ಸವಾಲುಗಳುಳ್ಳ ಮಕ್ಕಳು (Physically challenged)

1. ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು
2. ದೃಷ್ಟಿ ಸವಾಲುಗಳುಳ್ಳ ಮಕ್ಕಳು.
3. ಶ್ರವಣ ಸವಾಲುಗಳುಳ್ಳ ಮಕ್ಕಳು.
4. ವಾಕ್ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು.




### II. ಬೌದ್ಧಿಕ ಸವಾಲುಗಳುಳ್ಳ ಮಕ್ಕಳು (Intellectually challenged)

1. ಪ್ರತಿಭಾನ್ವಿತರು
2. ಸೃಜನಶೀಲರು
3. ಅಪೂರ್ಣಸಾಧಕರು
4. ಮಂದಗತಿಯಲ್ಲಿ ಕಲಿಯುವವರು.
5. ಮಾನಸಿಕ ಸವಾಲುಗಳುಳ್ಳ ಮಕ್ಕಳು.

### III. ಸಾಮಾಜಿಕ ಮತ್ತು ಸಂವೇಗಾತ್ಮಕ ಸವಾಲುಗಳುಳ್ಳ ಮಕ್ಕಳು (Socially and Emotionally challenged)

1. ಸಂವೇಗಾತ್ಮಕವಾಗಿ ವಿಚಲಿತರಾದ ಮಕ್ಕಳು.
2. ಸಾಮಾಜಿಕ ಅಪಸಮಾಯೋಜಿತರು.
3. ಬಾಲಾಪರಾಧಿಗಳು

### IV. ಶೈಕ್ಷಣಿಕ ಸವಾಲುಗಳುಳ್ಳ ಮಕ್ಕಳು (Educationally challenged)

1. ಕಲಿಕೆಯ ಸವಾಲುಗಳುಳ್ಳ ಮಕ್ಕಳು.
2. ಭಾಷಾ ದೌರ್ಬಲ್ಯವುಳ್ಳ ಮಕ್ಕಳು.

## 4.2 ವಿಶೇಷ ಅಗತ್ಯವುಳ್ಳ ಮಕ್ಕಳಿಗಾಗಿ ಸಮನ್ವಯ ಶಿಕ್ಷಣ(Inclusive education for Children with special needs)

ಪ್ರತಿಯೊಬ್ಬನೂ ತನ್ನ ವ್ಯಕ್ತಿತ್ವದ ಬೆಳವಣಿಗೆಗೆ ಸಮಾನ ಅವಕಾಶಗಳನ್ನು ಪಡೆಯಬೇಕು. ಬಹಳಷ್ಟು ಮಕ್ಕಳು ವಿಶಿಷ್ಟ ಮಕ್ಕಳಾಗಿರುತ್ತಾರೆ. ಇವರ ಶಿಕ್ಷಣಕ್ಕೆ ನಾವು ಸೂಕ್ತ ಸೌಲಭ್ಯ ಒದಗಿಸದಿದ್ದರೆ ಅವರ ಸಾಮರ್ಥ್ಯಗಳು ಪರಿಪೂರ್ಣವಾಗಿ ವಿಕಾಸಗೊಳ್ಳದೇ ಮಾನವ ಸಂಪನ್ಮೂಲ ವ್ಯರ್ಥವಾಗುತ್ತದೆ. ಆದ್ದರಿಂದ ವಿಶಿಷ್ಟ ಮಕ್ಕಳ ಶಿಕ್ಷಣಕ್ಕಾಗಿ ಈಗಾಗಲೇ ಅಸ್ತಿತ್ವದಲ್ಲಿರುವ ಸಾಮಾನ್ಯ ಶಾಲೆಗಳಲ್ಲಿಯೇ ವಿಶಿಷ್ಟ ವಿನ್ಯಾಸದ ಮೂಲಕ ಸಂಯೋಜನಾ ಶಿಕ್ಷಣ ನೀಡುವ ಪರಿಕಲ್ಪನೆಯು ಮೂಡಿಬಂದಿದೆ. ಈ ಮೇಲೆ ವರ್ಗೀಕರಿಸಿದಂತೆ ವಿಶಿಷ್ಟ ಮಕ್ಕಳಲ್ಲಿ ಅಭ್ಯಾಸದ ದೃಷ್ಟಿಯಿಂದ ಪ್ರಮುಖವಾದ ವಿಶಿಷ್ಟ ಮಕ್ಕಳ ಕೆಲವು ಪ್ರಕಾರಗಳನ್ನು ಈ ಕೆಳಗೆ ವಿವರಿಸಲಾಗಿದೆ.

### 4.2.1 ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳು (Children with orthopaedic challenges)

**ಮೂಳೆಗಳು ಮತ್ತು ಕೀಲುಗಳ ಗಾತ್ರ ಮತ್ತು ರಚನೆಯಲ್ಲಿ ದೋಷಗಳಿದ್ದು ಸ್ನಾಯುಶಕ್ತಿ, ಸಮನ್ವಯ ಅಥವಾ ನಿಯಂತ್ರಣದಲ್ಲಿ ಸಾಮಾನ್ಯ ಮಕ್ಕಳಿಗಿಂತ ಭಿನ್ನವಾಗಿರುವ ಮಕ್ಕಳನ್ನು** ಮೂಳೆ ಕೀಲುಗಳಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳೆನ್ನುವರು. ಕೆಲವು ದೈಹಿಕ ನ್ಯೂನತೆಗಳಿರುವ ಮಕ್ಕಳಲ್ಲಿ ಮೂಳೆದೋಷದ ಸವಾಲುಗಳಿರುವುವು. ಹೀಗೆ ಮೂಳೆ ಸಂಬಂಧಿತ ಸವಾಲುಗಳು ಸ್ನಾಯು ಮತ್ತು ಕೀಲುಗಳಿಗೆ ಸಂಬಂಧಿಸಿದ ನ್ಯೂನತೆಗಳಾಗಿರುತ್ತವೆ. ಈ ನ್ಯೂನತೆಗಳು ಕೈಕಾಲುಗಳ

ಚಲನೆಯ ಮೇಲೆ ಪರಿಣಾಮ ಬೀರುತ್ತವೆ. ಇಂತಹ ಮಕ್ಕಳು ಓಡಾಡುವಲ್ಲಿ ಕಠಿಣತೆ ಎದುರಿಸುವರೇ ವಿನಃ ಕಲಿಕೆಯಲ್ಲಿ ಸಾಮಾನ್ಯ ಸಾಮರ್ಥ್ಯ ಹೊಂದಿರುವರು. ಆದರೂ ಕಲಿಕೆಗೆ ಅಡ್ಡಿಯುಂಟು ಮಾಡಬಲ್ಲ ಕೆಲವು ನಿರ್ದಿಷ್ಟ ಸಮಸ್ಯೆಗಳನ್ನು ಎದುರಿಸಬಹುದು. ಉದಾಹರಣೆಗೆ ಕೈಬೆರಗಳುಗಳ ಸ್ನಾಯುಗಳಲ್ಲಿ ಬಿಗಿತ ಇರುವ ಮಗು ಬರೆಯುವುದರಲ್ಲಿ ಸಮಸ್ಯೆ ಎದುರಿಸಬಹುದು. ಕೆಲವು ಮಕ್ಕಳು ಭಂಗಿಯ (ನಿಲುವಿನ) ಸಮಸ್ಯೆಯನ್ನು ಎದುರಿಸುತ್ತಿದ್ದು, ಇದರಿಂದಾಗಿ ಆಯಾಸಗೊಂಡು, ಕೆಲವು ಕಲಿಕೆಯ ಚಟುವಟಿಕೆಗಳಲ್ಲಿ ಅವರ ಕಾರ್ಯಕ್ಷಮತೆ ಸೀಮಿತವಾಗಬಹುದು. ಸ್ನೇಹಿತರು ಇವರನ್ನು ಒಪ್ಪಿಕೊಳ್ಳದಿರುವುದರಿಂದ ಅಥವಾ ಪರಿಹಾಸ್ಯದಿಂದಾಗಿ ಈ ಮಕ್ಕಳು ಹೊಂದಾಣಿಕೆ ಸಮಸ್ಯೆಗಳನ್ನು ಎದುರಿಸುವರು.

### ಗುಣಲಕ್ಷಣಗಳು(Characteristics)

ಈ ಕೆಳಗಿನ ವರ್ತನಾ ಸಮಸ್ಯೆಗಳು ಅಥವಾ ಲಕ್ಷಣಗಳ ಸಹಾಯದಿಂದ ಮೂಳೆ ಕೀಲುಗಳಿಗೆ ಸಂಬಂಧಿತ ಸವಾಲುಗಳುಳ್ಳ ಮಕ್ಕಳನ್ನು ಗುರುತಿಸಬಹುದು.

- ಕೈಕಾಲುಗಳನ್ನು ಇದ್ದಕ್ಕಿದ್ದಂತೆಯೇ ಚಾಚಿದಾಗ ಸ್ನಾಯುಗಳು ಅನೈಚ್ಛಿಕವಾಗಿ ಕುಗ್ಗುವುದು ಅಥವಾ ಮುದುರಿಕೊಳ್ಳುವುದು.
- ಕೈಬೆರಳುಗಳು ಅಥವಾ ಕಾಲ್ಬೆರಳುಗಳ ಮೇಲೆ ಐಚ್ಛಿಕ ನಿಯಂತ್ರಣ ಇಲ್ಲದಿರುವುದು. ಬೆರಳುಗಳು ನಿರಂತರ ಚಲನೆಯಲ್ಲಿರುತ್ತವೆ.
- ಸಂಪೂರ್ಣ ಶರೀರದ ಮೇಲೆ ನಿಯಂತ್ರಣ ಇಲ್ಲದಿರುವುದು ಮತ್ತು ಶರೀರದ ಎರಡು ಅಥವಾ ಮೂರು ಭಾಗಗಳ ಚಲನೆಯನ್ನು ಸಮನ್ವಯಗೊಳಿಸುವ ಸಾಮರ್ಥ್ಯ ಇಲ್ಲದಿರುವುದು. ಉದಾ:ಆಟ ಆಡುವಾಗ ಕೈಗಳು ಮತ್ತು ಕಾಲುಗಳನ್ನು ಏಕಕಾಲದಲ್ಲಿ ಚಲಿಸುವುದು ಕಠಿಣವಾಗಿರುವುದು.
- ನಿರಂತರವಾದ ಸ್ನಾಯು ಸೆಳೆತ.
- ಒಂದು ಅಥವಾ ಎರಡೂ ಪಾದಗಳು ಪಾದದ ಕೀಲುಗಳ ಬಳಿ ಕೆಳಮುಖವಾಗಿ ಅಥವಾ ಹೊರಕ್ಕೆ ಬಾಗಿರುವುದು.
- ಬೆನ್ನೆಲಬು ಒಂದು ಪಾರ್ಶ್ವಕ್ಕೆ ಬಾಗಿರುವುದು ದೇಹದಲ್ಲಿ ಸಮತೆಯಿಲ್ಲದೆ ವಿಕಾರಗಳುಂಟಾಗುವುದು.
- ಹುಟ್ಟಿನಿಂದಲೇ ಕೈಕಾಲುಗಳು ಊನವಾಗಿರುವುದು (ಕೈ ಕಾಲುಗಳು, ಕೈ ಬೆರಳುಗಳು ಅಥವಾ ಕಾಲ್ಬೆರಳುಗಳು ಇಲ್ಲದೆ ಇರುವುದು ಅಥವಾ ಇತರೆ ಸಹಜಾತ ವಿಕಾರಗಳು)
- ನಡಿಗೆಯಲ್ಲಿ ಹೊಯ್ದಾಟದ ಚಲನೆ.
- ನಿಲ್ಲುವ ಮತ್ತು ಕುಳಿತುಕೊಳ್ಳುವ ವಿನ್ಯಾಸದಲ್ಲಿ ಭಿನ್ನತೆ.
- ಎಸೆಯುವುದು ಮತ್ತು ಹಿಡಿಯುವುದರಲ್ಲಿ ಭಿನ್ನತೆಗಳು ಉದಾ: ಎಸೆಯುವಾಗ, ಹಿಡಿಯುವಾಗ ಸಮತೋಲನ ಇಲ್ಲದಿರುವುದು, ವಸ್ತುವನ್ನು ಹಿಡಿಯುವಾಗ ವಿವಿಧ ವೇಗಗಳಿಗೆ, ಎತ್ತರಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗದಿರುವುದು.
- ಬೆರಳುಗಳು, ಕಾಲುಗಳು, ಕೈಗಳು ಮತ್ತು ಕತ್ತಿನಲ್ಲಿನ ವಿರೂಪ.

### ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ (Psychological effect on personality)

ಮೂಳೆ ದೋಷಗಳುಳ್ಳ ಮಕ್ಕಳು ನಿಷ್ಕ್ರೀಯರಾಗಿದ್ದು, ಅವಧಾನ ಸಾಮರ್ಥ್ಯ ಸೀಮಿತವಾಗಿದ್ದು, ಅನ್ವೇಷಣಾ ಚಟುವಟಿಕೆಗಳಲ್ಲಿ ತೊಡಗಿರುವುದಿಲ್ಲ, ಪ್ರೇರಣೆಯೂ ಕಡಿಮೆ ಇರುತ್ತದೆ. ಹೆಚ್ಚಾಗಿ ವಯಸ್ಕರನ್ನೇ ಅವಲಂಬಿಸಿದ್ದು ಸಮವಯಸ್ಕರೊಡನೆ ಅಂತರ್‌ಕ್ರಿಯೆ ಕಡಿಮೆಯಾಗಿರುವುದು ಅವರಲ್ಲಿ ದೇಹದ ಬಗ್ಗೆ ಕಲ್ಪನೆ ಕೆಳಮಟ್ಟದಾಗಿದ್ದು ಹೆಚ್ಚಾದ ಆತಂಕ ಮತ್ತು ಆಶಾಭಂಗ ಕಂಡು ಬರುತ್ತದೆ. ಶಾಂತರಾಗಿಯೂ, ಅನುಕರಣಶೀಲರಾಗಿಯೂ, ಮೃದು ಮನಸ್ಸಿನವರೂ ಸ್ವಲ್ಪಮಟ್ಟಿಗೆ ಉದ್ವೇಗಕ್ಕೊಳಗಾದವರೂ ಆಗಿರುತ್ತಾರೆ.

### ಶೈಕ್ಷಣಿಕ ಕ್ರಮಗಳು (Educational Provisions)

ಮೂಳೆ ದೋಷಗಳುಳ್ಳ ಮಕ್ಕಳ ಶಾಲಾ ಶಿಕ್ಷಣದ ವ್ಯವಸ್ಥೆಯಲ್ಲಿ ವಿಶೇಷ ಸನ್ನಿವೇಶವನ್ನೊದಗಿಸುವ ಅಗತ್ಯವಿರುವುದಿಲ್ಲ. ಇತರ ಮಕ್ಕಳೊಂದಿಗೆ ಸಾಮಾನ್ಯ ಶಾಲೆಯಲ್ಲಿ ಅವರಿಗೆ ಉತ್ತಮ ಶಿಕ್ಷಣ ನೀಡಬಹುದು.

- ಈ ಮಕ್ಕಳಿಗೆ ಸ್ವಾವಲಂಬನೆ, ಮುನ್ನುಗ್ಗುವ ಮತ್ತು ಆಯ್ಕೆ ಮಾಡುವ ಸಾಮರ್ಥ್ಯಗಳನ್ನು ಕಲಿಸಬೇಕು. ಚಲನೆ ಹಾಗೂ ಸಹಾಯಗಳಿಂದಾಗಿ ಪೂರ್ವಯೋಜನೆ ಮಾಡಿಕೊಳ್ಳಲು ಅವರು ಕಲಿಯಬೇಕು. ಕೈಕಾಲುಗಳ ಚಲನೆಗೆ ಸಹಾಯಕವಾಗುವ ಸಾಧನೆಗಳನ್ನು ಒದಗಿಸಬೇಕು.
- ತಮ್ಮ ದೇಹದ ವಿವಿಧ ಭಾಗಗಳನ್ನು ಹೇಗೆ ಬಳಸಿಕೊಳ್ಳಬೇಕೆಂಬುದನ್ನು ಕಲಿಸಬೇಕು.
- ಕಾರ್ಯಸಾಧಿಸಬಹುದಾದಂತಹ ಸ್ವಯಂ ಪರಿಕಲ್ಪನೆ ಬೆಳೆಸಿಕೊಳ್ಳುವಂತೆ ಶಿಕ್ಷಕರು ನೋಡಿಕೊಳ್ಳಬೇಕು. ಈ ಮಕ್ಕಳು ತಮ್ಮ ಸಹಪಾಠಿಗಳಾಗಿರುವ ಸಾಮಾನ್ಯ ಮಕ್ಕಳೊಂದಿಗೆ ಬೆರೆತು ಆಟವಾಡಬೇಕು.
- ಶಾಲೆಯು ಈ ಮಕ್ಕಳಲ್ಲಿ ಕಲೆ, ಸಂಗೀತ, ನಾಟಕ ಮುಂತಾದವುಗಳಿಗೆ ಸಂಬಂಧಿಸಿದಂತೆ ಸೃಜನಶೀಲತೆಯನ್ನು ವಿಕಾಸಗೊಳಿಸಬೇಕು. ಸಾಮಾಜಿಕ ಅನುಭವಗಳನ್ನು ಒದಗಿಸಿ ವೈಯಕ್ತಿಕ ವಿಕಾಸಕ್ಕೆ ಅವಕಾಶ ನೀಡಿ ಉತ್ತೇಜಿಸಬೇಕು.
- ಚಲನಾದೋಷವುಳ್ಳ ಮಕ್ಕಳಿಗೆ ವಿಶೇಷ ತರಗತಿ ಕೊಠಡಿಗಳು ಶಾಲಾ ಕಟ್ಟಡದ ತಳಮನೆಯಲ್ಲಿದ್ದು ಅಲ್ಲಿ ವಿಶೇಷ ಉಪಕರಣಗಳು ಲಭ್ಯವಿರಬೇಕು. ಉದಾ: ನಿಲುವು ಮೇಜುಗಳು, ಸಮಾನಾಂತರ ಸರಳುಗಳು, ವಿಶ್ರಾಂತಿಗಾಗಿ ವಿರಾಮ ಕುರ್ಚಿಗಳು ಇತ್ಯಾದಿ.
- ಶಿಕ್ಷಕರು ಪರಸ್ಪರ ಗೌರವ, ಸಹಾಯ ಮತ್ತು ಸಹಕಾರಗಳ ಆಧಾರದ ಮೇಲೆ ಸಮವಯಸ್ಕರಲ್ಲಿ ಅಂತರ್‌ಕ್ರಿಯೆಯನ್ನು ಉತ್ತೇಜಿಸಬೇಕು.
- ತರಗತಿಯಲ್ಲಿ ನ್ಯೂನ್ಯತೆಗನುಗುಣವಾಗಿ ಆಸನ ವ್ಯವಸ್ಥೆಯಲ್ಲಿ ಸೂಕ್ತ ಹೊಂದಾಣಿಕೆಯನ್ನು ಮಾಡಬೇಕು. ಉದಾ: ಇಂತಹ ಮಕ್ಕಳು ತರಗತಿಯ ಮುಂದಿನ ಬಲಭಾಗದಲ್ಲಿ ಕುಳಿತುಕೊಳ್ಳುವಂತಿದ್ದರೆ ಇತರ ಮಕ್ಕಳ ಓಡಾಟ, ಚಲನೆಯಿಂದ ಇವರಿಗೆ ತೊಂದರೆಯಾಗುವುದಿಲ್ಲ. ಗಾಲಿ ಕುರ್ಚಿಯನ್ನು ಬಳಸುವ ಮಗು ಇದ್ದಲ್ಲಿ ಶಾಲೆ ಮತ್ತು ತರಗತಿಗೆ ಬರಲು ಹೆಚ್ಚು ನುಣುಪಿಲ್ಲದ ಇಳಿಜಾರು ದಾರಿಯನ್ನು ನಿರ್ಮಿಸಬೇಕು.
- ಶಾಲೆಯಲ್ಲಿ ಸಂವೇಗಾತ್ಮಕ ಮತ್ತು ಸಾಮಾಜಿಕ ವಿಕಾಸದ ಚಟುವಟಿಕೆಗಳನ್ನು ರೂಪಿಸಬಹುದು.
- ಅರ್ಥಪೂರ್ಣವಾದ, ಉದ್ದೇಶಪೂರ್ವಕವಾದ ಮತ್ತು ಆಸಕ್ತಿಯುತ ಸಾಮಗ್ರಿಗಳನ್ನು ಬಳಸುವುದರಿಂದ ಈ ಮಕ್ಕಳ ಬೌದ್ಧಿಕ ವಿಕಾಸದ ವೇಗವನ್ನು ಹೆಚ್ಚಿಸಬಹುದು.

### ಶಿಕ್ಷಕರ ಪಾತ್ರ (Role of the teacher)

ಮನೋವೈಜ್ಞಾನಿಕ ದುಷ್ಪರಿಣಾಮಗಳನ್ನು ತಡೆಗಟ್ಟಲು ಶಿಕ್ಷಕರು ಇಂತಹ ಮಕ್ಕಳು ತಮ್ಮಲ್ಲಿರುವ ನ್ಯೂನ್ಯತೆಯನ್ನು ಒಪ್ಪಿಕೊಳ್ಳಲು ಸಹಾಯ ಮಾಡಬೇಕು. ಶಿಕ್ಷಕರು ಸ್ನೇಹಭಾವ, ಮಮತೆ, ಆಸಕ್ತಿ, ತಾಳ್ಮೆ, ದಯೆ ಮತ್ತು ಪ್ರಾಮಾಣಿಕ ಆಲೋಚನೆಗಳಿಂದ ಕೂಡಿರಬೇಕು. ಶಿಕ್ಷಕರು ಮಾಡುವ ಪ್ರತಿ ಪ್ರಯತ್ನವೂ ಮಗು ಅತ್ಯುನ್ನತ ಮಟ್ಟದಲ್ಲಿ ತನ್ನನ್ನು ತಾನು ಒಪ್ಪಿಕೊಳ್ಳುವಿಕೆ, ಆತ್ಮವಿಶ್ವಾಸ ಮತ್ತು ತನ್ನ ಇತಿಮಿತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದನ್ನು ಕಲಿಯಲು ಸಹಾಯ ಮಾಡುವಂತಿರಬೇಕು. ಈ ಮಕ್ಕಳ ಕೌಟುಂಬಿಕ ಹಿನ್ನಲೆಯೂ ಶಿಕ್ಷಕರಿಗೆ ತಿಳಿದಿರಬೇಕು. ಹೊಂದಾಣಿಕೆ ಸಮಸ್ಯೆಗಳನ್ನೆದುರಿಸಲು ಶಿಕ್ಷಕರೇ ಸಹಾಯ ಮಾಡಬೇಕು.

### 4.2.2.ದೃಷ್ಟಿ ಸವಾಲುಗಳುಳ್ಳ ಮಕ್ಕಳು ( Visually challenged)

ವ್ಯಕ್ತಿ ತನ್ನ ಸುತ್ತಲಿನ ಪ್ರಪಂಚದ ಅನುಭವ ಅಥವಾ ಅರಿವನ್ನು ಜ್ಞಾನೇಂದ್ರೀಯಗಳ ಮೂಲಕವೇ ಪಡೆಯುತ್ತಾನೆ. ಇತರ ಎಲ್ಲಾ ಇಂದ್ರೀಯಗಳ ಮೂಲಕ ಒಟ್ಟಾಗಿ ಸಿಗುವ ಅನುಭವಗಳಿಗಿಂತ ಹೆಚ್ಚಿನ ಅನುಭವಗಳು ದೃಶ್ಯೇಂದ್ರೀಯ ಮೂಲಕವೇ ಮೆದುಳನ್ನು ತಲುಪುತ್ತವೆ. ಹೀಗೆ ದೃಷ್ಟಿ ಸಂಬಂಧಿತ ಕಠಿಣತೆಗಳು ವ್ಯಕ್ತಿಯ ಜೀವನದ ದೈಹಿಕ, ಮಾನಸಿಕ, ಸಾಮಾಜಿಕ, ಶೈಕ್ಷಣಿಕ ಮತ್ತು ವೃತ್ತಿಪರ ಅಂಶಗಳೆಲ್ಲದರ ಮೇಲೆ ಪ್ರಭಾವ ಬೀರುತ್ತವೆ.

ದೃಷ್ಟಿಗೆ ಸಂಬಂಧಿಸಿದ ಸವಾಲುಗಳುಳ್ಳ ಮಕ್ಕಳಲ್ಲಿ ಭಾಗಶಃ ದೃಷ್ಟಿ ಸಾಮರ್ಥ್ಯವಿದ್ದು, ದೃಷ್ಟಿ ಸಾಮರ್ಥ್ಯ ಕೆಳಮಟ್ಟದ್ದಾಗಿರುವವರಲ್ಲದೆ, ಅತ್ಯಂತ ಕ್ಷೀಣ ದೃಷ್ಟಿ ಸಾಮರ್ಥ್ಯವುಳ್ಳವರು ಸಹ ಸೇರಿರುತ್ತಾರೆ.

ಎಲ್ಲ ವಿಧದ ವೈದ್ಯಕೀಯ ಮತ್ತು ದೃಷ್ಟಿ ಉಪಕರಣಗಳ ಸಹಾಯ ಪಡೆದ ನಂತರ 20/70 ರಿಂದ 20/200 ರವರೆಗಿನ ದೃಷ್ಟಿ ತೀಕ್ಷ್ಣತೆ ಹೊಂದಿರುವ ಮಕ್ಕಳನ್ನು **ಭಾಗಶಃ ಅಥವಾ ಅಪೂರ್ಣ ದೃಷ್ಟಿಯುಳ್ಳವರೆಂದು ಕರೆಯುವರು.**

ಪ್ರಮುಖವಾಗಿ ಮಕ್ಕಳಲ್ಲಿ ಕಂಡು ಬರುವ ಇತರೆ ದೃಷ್ಟಿ ದೋಷಗಳೆಂದರೆ ಸಮೀಪ ದೃಷ್ಟಿದೋಷ, ದೂರದೃಷ್ಟಿ ದೋಷ, ಕಣ್ಣಿನ ಚಲನೆಯ ದೋಷಗಳು, ಓರೆಗಣ್ಣಿನ ದೋಷ, ಬೆಳಕಿನ ಭಯ, ವರ್ಣ ದೃಷ್ಟಿದೋಷ ಇತ್ಯಾದಿ.

## ಗುಣಲಕ್ಷಣಗಳು(Characteristics)

ದೃಷ್ಟಿ ಸಾಮರ್ಥ್ಯ ಕಡಿಮೆ ಇರುವ ಮಕ್ಕಳನ್ನು ಈ ಕೆಳಕಂಡ ಲಕ್ಷಣಗಳ ಸಹಾಯದಿಂದ ಗುರುತಿಸಬಹುದು.

- ಕಣ್ಣಂಚುಗಳು ಕೆಂಪಾಗಿದ್ದು, ನೀರು ತುಂಬಿದ ಕೆಂಪು ಕಣ್ಣುಗಳು.
- ಗಟ್ಟಿಯಾದ, ಊದಿದ ಕಣ್ಣೆವೆಗಳು.
- ಪದೇ ಪದೇ ಕಣ್ಣುಗಳನ್ನು ಉಜ್ಜುತ್ತಿರುವುದು.
- ಅತಿಯಾಗಿ ರೆಪ್ಪೆ ಮಿಟುಕಿಸುವುದು.
- ಕಣ್ಣೀರಿನ ನಾಳಗಳು ಪ್ರತಿಬಂಧಿತವಾಗಿರುವುದು.
- ಆಗಾಗ್ಗೆ ತಲೆನೋವೆಂದು ಅಥವಾ ಕಣ್ಣುಗಳ ಸೋಂಕು ತಗುಲಿದೆಯೆಂದು ಹೇಳುವುದು.
- ವಸ್ತುಗಳನ್ನು, ಪುಸ್ತಕಗಳನ್ನು ಕಣ್ಣುಗಳಿಗೆ ಅತಿ ಸಮೀಪದಲ್ಲಿ ಹಿಡಿಯುವುದು.
- ದೃಷ್ಟಿಯನ್ನು ಉತ್ತಮವಾಗಿ ಕೇಂದ್ರೀಕರಿಸುವುದಕ್ಕಾಗಿ ತಲೆಯನ್ನು ಬಾಗಿಸುವುದು ಅಥವಾ ಓರೆಗಣ್ಣಿನಿಂದ ನೋಡುವುದು.
- ಇತರರ ಮುಖದಲ್ಲಿ ಕಾಣುವ ಅಭಿವ್ಯಕ್ತಿಗಳಿಗೆ ಸರಿಯಾಗಿ ಪ್ರತಿಕ್ರಿಯೆ ತೋರದಿರುವುದು.
- ಕಣ್ಣು – ಕೈಗಳ ನಡುವೆ ಸಮನ್ವಯ ಇಲ್ಲದಿರುವುದು.
- ಕಪ್ಪು ಹಲಗೆಯ ಮೇಲಿನ ಬರಹವನ್ನು ನೋಡಿ ಬರೆಯುವಾಗ ಇತರ ಮಕ್ಕಳ ಸಹಾಯ ಕೇಳುವುದು.
- ಇತರ ಇಂದ್ರೀಯಗಳ ಮೇಲೆ ಹೆಚ್ಚಾಗಿ ಅವಲಂಬಿಸಿರುವುದು, ನೋಡುವುದಕ್ಕಿಂತ ಕೇಳಲು, ಮುಟ್ಟಿನೋಡಲು ಇಚ್ಛಿಸುವುದು.
- ಕಣ್ಣುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು – ಉದಾಹರಣೆಗೆ ಮೆಳ್ಳಗಣ್ಣು
- ಬಣ್ಣಗಳ ವ್ಯತ್ಯಾಸ ತಿಳಿಯಲು ಅಸಮರ್ಥತೆ.
- ಮಿತವಾದ ಪರಿಧಿಯ ದೃಷ್ಟಿ.
- ಪುಸ್ತಕಗಳಿಂದ ಚಿಕ್ಕ ಅಕ್ಷರಗಳನ್ನು ಓದಲು ತುಂಬಾ ಕಷ್ಟ ಪಡುತ್ತಾನೆ.
- ನಡೆಯುವಾಗ ಎಡವುದು, ಬೀಳುವುದು ಸಾಮಾನ್ಯವಾಗಿರುತ್ತದೆ.

ಇವೆಲ್ಲ ಲಕ್ಷಣಗಳಿಂದ ಹಾಗೂ ಸ್ನೆಲೆನ್ ಚಿತ್ರಪಟದ ಸಹಾಯದಿಂದಲೂ ದೃಷ್ಟಿ ಸವಾಲುಗಳುಳ್ಳ ಮಕ್ಕಳನ್ನುಗುರುತಿಸಬಹುದು.

## ಶೈಕ್ಷಣಿಕ ಕ್ರಮಗಳು (Educational Provisions)



ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ಸಾಮಾನ್ಯ ತರಗತಿಗಳಲ್ಲಿ ಶಿಕ್ಷಣ ನೀಡಬಹುದು. ಇವರಿಗೆ ಪಠ್ಯಕ್ರಮವೂ ಒಂದೇ ಆಗಿರಬೇಕು. ಆದರೆ ಇಂತಹ ಮಗು ಪ್ರಧಾನವಾಗಿ ಸ್ಪರ್ಶ ಹಾಗೂ ಶ್ರವಣ ಅನುಭವಗಳ ಮೂಲಕ ವಿಷಯ ಗ್ರಹಿಸುತ್ತದೆ. ಆದ್ದರಿಂದಲೇ ಇವರಿಗೆ ವಿಶೇಷ ಪಠ್ಯಕ್ರಮ ಅಗತ್ಯವಿರುವುದಿಲ್ಲ. ಆದರೆ ಇವರಿಗೆ ಕಲಿಸಲು ಬಹು ಇಂದ್ರಿಯ ಅನುಭವಗಳ ತಂತ್ರವನ್ನು ಅಳವಡಿಸಬಹುದಾಗಿದೆ.

- ವೈದ್ಯಕೀಯ ತಪಾಸಣೆ ಮಾಡಿಸುವದು.
- ಚಾಕ್ಷುಷ ಸಾಧನಗಳ ಬಳಕೆ ಅಂದರೆ ಕನ್ನಡಕ, ಸಂಪರ್ಕ ಮಸೂರ, ಚಿಕ್ಕದೂರದರ್ಶಕ ಮುಂತಾದವು.
- ಸಹಪಠ್ಯ ಚಟುವಟಿಕೆಗಳ ಮೂಲಕ ಮಕ್ಕಳು ಹೊಂದಿರುವ ಕೀಳರಿಮೆ ಮತ್ತು ಅಭದ್ರತೆ ಭಾವನೆಗಳನ್ನು ಹೋಗಲಾಡಿಸುವುದು.

- ದೃಕ್ ಸಾಮರ್ಥ್ಯದ ಕಾರ್ಯಗಳನ್ನು ಕಡಿಮೆ ಮಾಡುವುದು.
- ದೃಷ್ಟಿದೋಷವುಳ್ಳ ಮಕ್ಕಳಿಗೆ ತರಗತಿಯಲ್ಲಿ ಮುಂದಿನ ಸಾಲಿನಲ್ಲಿ ಆಸನ ವ್ಯವಸ್ಥೆ ಮಾಡುವುದು.
- ತರಗತಿಯಲ್ಲಿ ಉತ್ತಮ ಬೆಳಕಿನ ವ್ಯವಸ್ಥೆ ಮಾಡುವುದು.
- ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಓದಲು ಮಸೂರಗಳ ವ್ಯವಸ್ಥೆ ಕಲ್ಪಿಸುವುದು.

ದೃಷ್ಟಿ ದೋಷ ಉಳ್ಳವರಿಗೆ ಒದಗಿಸಬಹುದಾದ ಬಹು ಇಂದ್ರಿಯಾ ಅನುಭವಗಳ ತಂತ್ರಗಳು ಹೀಗಿವೆ.

a) ಉಬ್ಬಿದ ಸಂಖ್ಯೆಗಳುಳ್ಳ ಕೈಗಡಿಯಾರಗಳು, ಗಣಕ ಯಂತ್ರಗಳು, ಕಡಿಮೆ ದೃಷ್ಟಿಗೆ ಸಹಾಯಕ ಉಪಕರಣಗಳು, ದೃಷ್ಟಿಯನ್ನು ವೃದ್ಧಿಗೊಳಿಸುವ ಮಸೂರಗಳು ಇಂತಹ ಎಲೆಕ್ಟ್ರಾನಿಕ್ ಸಾಧನಗಳು ಮುಂತಾದ ಉಪಕರಣಗಳ ಬಳಕೆ.

b) ಪರಿಚಯಾತ್ಮಕ ಮತ್ತು ಸಂಚಲನ ಕೌಶಲಗಳು.

c) ಸಾಮಾಜಿಕ ಕೌಶಲಗಳು.

d) ದೈನಂದಿನ ಜೀವನದ ಕೌಶಲಗಳು

e) ಇಂದ್ರೀಯ ತರಬೇತಿ.

### ಶಿಕ್ಷಕರ ಪಾತ್ರ (Role of the teacher)

ತರಗತಿ ಶಿಕ್ಷಕರು ಮೂರ್ತ ಅನುಭವಗಳನ್ನು ಒದಗಿಸಿ, ಮಾಡಿ ಕಲಿಯಲು ಸಹಾಯಮಾಡಬೇಕು. ಘಟಕ ಪದ್ಧತಿಯಿಂದ ಬೋಧಿಸಬೇಕು. ಓದುವುದು, ಬರೆಯುವುದು, ಗಣಿತ, ಕಲೆ ಮತ್ತು ದೈಹಿಕ ಚಟುವಟಿಕೆಗಳನ್ನು ಸಮನ್ವಯಗೊಳಿಸುವುದರಿಂದ ಪೂರ್ಣರೀತಿ ಅನುಭವ ಪಡೆಯಲು ಅತ್ಯುತ್ತಮ ಅವಕಾಶ ಲಭಿಸುತ್ತದೆ. ಭಾಗಶಃ ದೃಷ್ಟಿ ಸಾಮರ್ಥ್ಯವುಳ್ಳ ಮಕ್ಕಳಿಗೆ ವೃದ್ಧಿಗೊಳಿಸುವ ಮಸೂರಗಳನ್ನು ಒದಗಿಸುವುದು, ಹೊಂದಾಣಿಕೆ ಮಾಡಬಲ್ಲ ಮೇಜುಗಳನ್ನು ಒದಗಿಸುವುದರ ಮೂಲಕ ಉತ್ತಮ ಭಂಗಿಯನ್ನು ಗರಿಷ್ಟ ಮಟ್ಟದ ದೃಷ್ಟಿದಕ್ಷತೆಯನ್ನು ಪಡೆಯಬಹುದು.

## 4.2.3 ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು (Children with Hearing Challenges)

ಶ್ರವಣ ಸಾಮರ್ಥ್ಯ ಎಷ್ಟು ಅಂಶ ಕಡಿಮೆ ಇದೆ ಎಂಬುದರ ಆಧಾರದ ಮೇಲೆ ಶ್ರವಣದೋಷವಿರುವ ಮಕ್ಕಳ ವ್ಯಾಖ್ಯೆ ನೀಡಲಾಗುವುದು. ಶ್ರವಣ ಸಾಮರ್ಥ್ಯ ಪೂರ್ಣವಾಗಿ ಇಲ್ಲದಿರುವುದು ಕಿವುಡುತನ ಆದರೆ ಶ್ರವಣೇಂದ್ರಿಯ ದೋಷಯುಕ್ತವಾಗಿದ್ದು ಶ್ರವಣ ಸಾಧನ (hearing aids) ಗಳ ಸಹಾಯದಿಂದ ಅಥವಾ ಶ್ರವಣಸಾಧನ ಇಲ್ಲದೆ ನಿರ್ವಹಿಸಿಕೊಂಡು ಹೋಗುವವರನ್ನು **ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು ಎನ್ನುವರು.**

ಸಾಮಾನ್ಯವಾಗಿ 35 ರಿಂದ 69 ಡೆಸಿಬಲ್‌ಗಳಷ್ಟು ಶ್ರವಣ ಸಾಮರ್ಥ್ಯದ ಕೊರತೆ ಇದ್ದು ಶ್ರವಣ ಸಾಧನದ ಸಹಾಯದಿಂದಾಗಲಿ, ಅಥವಾ ಕಿವಿಗಳ ಮೂಲಕವಾಗಲಿ ಗ್ರಹಿಸಲು ಕಠಿಣವಾದರೂ ಆಲಿಸಲು ಸಾಧ್ಯವಿರುವ ಮಕ್ಕಳನ್ನು **ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳು ಎನ್ನುವರು.**

70 ಡಿಸಿಬಲ್‌ಗಳಷ್ಟು ಶ್ರವಣ ಸಾಮರ್ಥ್ಯದ ಕೊರತೆಯಿದ್ದು, ಶ್ರವಣ ಸಾಧನದ ಸಹಾಯದಿಂದಾಗಲಿ, ಅಥವಾ ಕಿವಿಗಳ ಮೂಲಕವಾಗಲಿ ಇತರರ ಮಾತುಗಳನ್ನು ಕೇಳಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲದ ವ್ಯಕ್ತಿಯನ್ನು **ಕಿವುಡನೆಂದು ಕರೆಯುತ್ತಾರೆ.**

ಶ್ರವಣದೋಷ ಜನ್ಮದಿಂದ ಬಂದಿರಬಹುದು ಅಥವಾ ಜೀವನದ ಯಾವುದೇ ವಯಸ್ಸು ಅಥವಾ ಹಂತದಲ್ಲಿ ಉಂಟಾಗಿರಬಹುದು.

### ಗುಣಲಕ್ಷಣಗಳು (Characteristics)

ಈ ಕೆಳಕಂಡ ವರ್ತನಾತ್ಮಕ ಲಕ್ಷಣಗಳ ಸಹಾಯದಿಂದ ಶಿಕ್ಷಕರು ಶ್ರವಣದೋಷದ ಸವಾಲುಗಳನ್ನೆದುರಿಸುತ್ತಿರುವ ಮಕ್ಕಳನ್ನು ಗುರ್ತಿಸಬಹುದು. ಇಂತಹ ಮಗು ಈ ಕೆಳಗಿನವುಗಳಲ್ಲಿ ಒಂದು ಅಥವಾ ಅದಕ್ಕಿಂತ ಹೆಚ್ಚು ವರ್ತನೆಗಳನ್ನು ಪ್ರದರ್ಶಿಸುತ್ತದೆ.

- ತರಗತಿಯಲ್ಲಿ ಅವಧಾನ ಇಲ್ಲದಂತೆ ತೋರುವುದು.
- ಪ್ರಶ್ನೆಗಳು ಅರ್ಥವಾಗುವುದಿಲ್ಲವಾದ್ದರಿಂದ ಸೂಕ್ತವಲ್ಲದ ಅಥವಾ ಅಸಂಬದ್ಧ ಉತ್ತರಗಳನ್ನು ನೀಡಬಹುದು.
- ಸೂಚನೆಗಳನ್ನು, ಪ್ರಶ್ನೆಗಳನ್ನು ಪುನರುಚ್ಚರಿಸುವಂತೆ ಆಗಾಗ್ಗೆ ಕೇಳುವುದು.
- ತರಗತಿಯಲ್ಲಿ ನಡೆಯುವ ಚರ್ಚೆಯಲ್ಲಿ ಭಾಗವಹಿಸುವುದಿಲ್ಲ.

- ತನಗೆ ಯಾರಾದರೂ ಏನನ್ನಾದರೂ ಹೇಳಿದಾಗ ವ್ಯಗ್ರನಾದಂತೆ ತೋರುವುದು ಅಥವಾ ಆಲಿಸುವುದಕ್ಕಾಗಿ ಮುಂದೆ ಬಾಗುವುದು.
- ಮಾತನಾಡುತ್ತಿರುವವರ ಮುಖವನ್ನು ಅಥವಾ ತುಟಿಗಳ ಚಲನೆಯನ್ನು ಸಾಮಾನ್ಯಕ್ಕಿಂತ ಹೆಚ್ಚು ತೀಕ್ಷ್ಣವಾಗಿ ಅವಲೋಕಿಸುವುದು.
- ಉಕ್ತಲೇಖನ ನೀಡಿದಾಗ ಇತರರ ಪುಸ್ತಕ ನೋಡಿ ಬರೆಯಲು ಪ್ರಯತ್ನಿಸುವುದು ಅಥವಾ ಸುಮ್ಮನೆ ಕುಳಿತಿರುವುದು.
- ಮಾತನಾಡುವವರ ಅಥವಾ ಶಬ್ಧದ ದಿಕ್ಕನ್ನು ಗುರ್ತಿಸುವುದು ಕಠಿಣವಾಗಿರುವುದು.
- ಮಾತನಾಡುವವರ ಕಡೆಗೆ ಆಗಾಗ ತಿರುಗುವುದು, ಕಿವಿಯ ಹಿಂದೆ ಕೈಯಿಟ್ಟು ಕಿವಿಚಾಚಿ ಆಲಿಸುವುದು
- ಕಿವಿನೋವು, ಕಿವಿ ಸೋರುವುದು, ಕಿವಿಯಲ್ಲಿ ಗುಂಯ್‌ಗುಡುವ ಶಬ್ದ ಮುಂತಾಗಿ ದೂರುತ್ತಿರುವುದು.
- ದೇಹದ ಸಮತೋಲನ ಕಾಪಾಡಿಕೊಳ್ಳುವುದು, ಅದರಲ್ಲಿಯೂ ಕತ್ತಲಿನಲ್ಲಿ ಕಾಪಾಡಿಕೊಳ್ಳುವುದು ಕಠಿಣವಾಗುವುದು.
- ವಾಗ್ದೋಷಗಳಿರುವುದು, ಶ, ಷ, ಝ, ಛ, ಫ ಇತ್ಯಾದಿ ಮಹಾಪ್ರಾಣವಿರುವ ಶಬ್ದಗಳ ಉಚ್ಚಾರಣೆ ಕಠಿಣವಾಗಿರುವುದು.
- ಸಾಮಾಜಿಕವಾಗಿ ಉತ್ತಮ ಹೊಂದಾಣಿಕೆ ಇಲ್ಲದಿರುವುದು.
- ಸೀಮಿತ ಶಬ್ಧ ಸಂಪತ್ತು ಹೊಂದಿರುವುದು.
- ಅತಿ ಜೋರಾಗಿ ಅಥವಾ ಅತೀ ಮೆಲ್ಲಗೆ ಮಾತನಾಡುವ ಅಭ್ಯಾಸ.
- ಸಂಭಾಷಣೆಯಲ್ಲಿ ಅಗತ್ಯಕ್ಕಿಂತ ಹೆಚ್ಚು ಬಾರಿ ಕೈಗಳನ್ನು ಸಂಜ್ಞೆ ಮಾಡಲು ಬಳಸುತ್ತಾರೆ.

## ಶೈಕ್ಷಣಿಕ ಕ್ರಮಗಳು (Educational Provisions)

ಶ್ರವಣ ದೋಷವುಳ್ಳ ಮಕ್ಕಳ ವಿಶೇಷ ಅಗತ್ಯತೆಗಳನ್ನು ಪೂರೈಸಲು ಈ ಕೆಳಗಿನ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗುವುದು.

### 1. ಶಬ್ದ ಹೆಚ್ಚಿಸುವುದು ಮತ್ತು ಶ್ರವಣ ತರಬೇತಿ(Amplification and auditory training)



ಶಬ್ದ ಹೆಚ್ಚಿಸುವುದರಿಂದ ಶ್ರವಣದೋಷವುಳ್ಳ ಅನೇಕ ಮಕ್ಕಳು ತಮ್ಮಲ್ಲಿರುವ ಕಳೆದುಳಿದ ಅಲ್ಪ ಪ್ರಮಾಣದ ಶ್ರವಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಸಾಧ್ಯವಾಗುವುದು. ಶ್ರವಣ ಸಾಧನದ ಸಹಾಯದಿಂದ ಶಬ್ದವನ್ನು ಹೆಚ್ಚಿಸಬಹುದು (ಶ್ರವಣ ಸಾಧನವು ಶಬ್ದವನ್ನು ಗ್ರಹಿಸಿ ಅದರ ಶಕ್ತಿಯನ್ನು ವೃದ್ಧಿಗೊಳಿಸಿ ಹೀಗೆ ಹೆಚ್ಚಿಸಲ್ಪಟ್ಟ ಶಬ್ದವನ್ನೇ ಸಾಧನ ಬಳಸುವವರ ಕಿವಿಗೆ ಹಾಗೂ ಮೆದುಳಿಗೆ ತಲುಪಿಸುತ್ತದೆ.) ಶ್ರವಣ ಸಾಧನವನ್ನು ಚಿಕ್ಕವಯಸ್ಸಿನಲ್ಲಿಯೇ ಹಾಕಿಸಬೇಕು. ಇದರಿಂದ ಶ್ರವಣ ಸಾಮರ್ಥ್ಯವವನ್ನು ಸಂವಹನ ಮತ್ತು ಅರಿವಿಗಾಗಿ ಬಳಸಿಕೊಳ್ಳಬಹುದು. ಸಾಧನದಿಂದ ಗರಿಷ್ಠ ಲಾಭ ಪಡೆಯುವುದಕ್ಕಾಗಿ ಮಗು ಅದನ್ನು ದಿನಪೂರ್ತಿ ಧರಿಸಿರಬೇಕು.

ಇಂತಹ ಮಕ್ಕಳಿಗೆ ಶ್ರವಣ ತರಬೇತಿಗಾಗಿ ವೈಯಕ್ತಿಕ ಹಾಗೂ ಸಾಮೂಹಿಕ ಮಾದರಿಯ ಸಾಧನಗಳೆರಡನ್ನು ಒದಗಿಸಬೇಕು. ಸಾಮೂಹಿಕ ಶ್ರವಣ ತರಬೇತಿ ಘಟಕವು ಹೆಡ್‌ಫೋನ್ (Head Phone)ಗಳನ್ನು ಮತ್ತು ಧ್ವನಿವರ್ಧಕ ಸಾಧನವನ್ನೂ ಬಳಸಿ ಮಕ್ಕಳು ಸ್ಪಷ್ಟವೂ ಪ್ರಬಲವೂ ಆಗಿರುವ ಶಬ್ಧ ಕೇಳುವಂತೆ ಮಾಡಬೇಕು. ವೈಯಕ್ತಿಕವಾಗಿ ಮಕ್ಕಳು ಧರಿಸಬಹುದಾದ ಶ್ರವಣ ಸಾಧನ ಬಳಸಬೇಕು.

**2. ಶ್ರವಣ ಕಲಿಕೆ (Auditory learning):** ಇಂತಹ ತರಬೇತಿ ಮಗುವಿಗೆ ವಿವಿಧ ವಾಕ್ ಶಬ್ದಗಳನ್ನು ಗ್ರಹಿಸಲು ಸಹಾಯ ಮಾಡುತ್ತದೆ. ಒಂದು ಧ್ವನಿಗೂ ಮತ್ತೊಂದಕ್ಕೂ ಇರುವ ವ್ಯತ್ಯಾಸ ತಿಳಿಯುವ ಸಾಮರ್ಥ್ಯಗಳಿಸಬಹುದು. ಮಕ್ಕಳಿಗೆ ಶಬ್ಧಗಳನ್ನು ಕಂಡುಹಿಡಿಯುವುದು, ಭೇದ ಗುರ್ತಿಸುವುದು ಮತ್ತು ಗುರ್ತಿಸುವುದರಲ್ಲಿ ತರಬೇತಿ ನೀಡಲಾಗುವುದು.

**3. ವಾಕ್ ವಾಚನ (Speech Reading):** ಮಾತನ್ನು ಓದುವುದೆಂದರೆ ಮಾತನಾಡುವವರ ಮುಖ, ತುಟಿಗಳು ಮತ್ತು ನಾಲಗೆಯ ಚಲನೆಗಳನ್ನು ಪರೀಕ್ಷಿಸುವುದರ ಮೂಲಕ ವಾಕ್ ಸಂದೇಶವನ್ನು ಗ್ರಹಿಸುವುದು ಎಂದರ್ಥ. ಶಿಕ್ಷಕರು ಶ್ರವಣದೋಷವುಳ್ಳ ಮಕ್ಕಳ ಮುಂದೆ ನಿಂತು, ತುಟಿಗಳನ್ನು ಅಥವಾ ಮುಖವನ್ನು ಮರೆಮಾಡದೆ, ಸ್ಪಷ್ಟವಾಗಿ ಮಾತನಾಡಬೇಕು,

ಇದರಿಂದ ಮಕ್ಕಳು ಕೇಳುವುದರ ಬದಲಾಗಿ ಮುಖ, ಹಣೆಗಳ ಮೇಲಿನ ಸಂಕೇತಗಳು, ಸಂಜ್ಞೆಗಳು ಮತ್ತು ಮಡಿಕೆಗಳು ಹಾಗೂ ಭಾವಾಭಿವ್ಯಕ್ತಿಗಳನ್ನು ವೀಕ್ಷಿಸಿ ಕಲಿಯಬಹುದು. ತುಟಿಗಳು, ಮುಖಭಾವಗಳು ಕಾಣುವಂತಿರಲು, ಶಿಕ್ಷಕರು ತಮ್ಮ ಕೈಗಳನ್ನು ಮುಖದಿಂದ ದೂರವಿಡಬೇಕು.

**4. ತರಗತಿ ವ್ಯವಸ್ಥೆ (Classroom arrangements) :** ಆಲಿಸುವುದನ್ನು ಉತ್ತಮ ಪಡಿಸಲು ತರಗತಿಯಲ್ಲಿ ಶ್ರವಣ ದೋಷವುಳ್ಳ ಮಕ್ಕಳನ್ನು ಶಿಕ್ಷಕರ ಸಮೀಪದಲ್ಲಿ ಕೂರಿಸಬೇಕು. ಶಿಕ್ಷಕರು ಮಾತನಾಡುವಾಗ ಸಾಕಷ್ಟು ಏರುಧ್ವನಿ ಬಳಸಬೇಕು. ವೇಗವಾಗಿ ಮಾತನಾಡಬಾರದು ಪಠ್ಯಪುಸ್ತಕಗಳಿಂದ ಓದುವಾಗ ಇಂತಹ ಮಕ್ಕಳು ಆಲಿಸುವುದಕ್ಕೆ ಪೂರಕವಾಗಿ ತುಟಿಗಳನ್ನು ಓದಲು ಸಾಧ್ಯವಾಗುವಂತೆ ಶಿಕ್ಷಕರು ತಮ್ಮ ತುಟಿ ಚಲನೆ ಕಾಣುವಂತೆ ಪುಸ್ತಕ ಹಿಡಿಯಬೇಕು. ಶಿಕ್ಷಕರು ಮಾತನಾಡುವಾಗ ಓಡಾಡಬಾರದು. ಸ್ನೇಹಿತರೂ, ಸಮವಯಸ್ಕರೂ ಈ ಮಕ್ಕಳೊಡನೆ ಅಂತರ್‌ಕ್ರಿಯೆ ನಡೆಸಿ, ಪರಸ್ಪರ ಕಲಿಯಲು ಸಹಾಯ ಮಾಡುವಂತೆ ಉತ್ತೇಜಿಸಬೇಕು. ಸಾಮಾನ್ಯ ಬೋಧನೆಯ ಪದ್ಧತಿಗೆ ಅನುಭವಗಳಿಗೆ ಪೂರಕವಾಗುವಂತೆ ವೈಯಕ್ತಿಕವಾಗಿಯಾಗಲಿ, ಗುಂಪಿನಲ್ಲಾಗಲಿ ಹೆಚ್ಚಿನ ದೃಶ್ಯ ಉಪಕರಣಗಳನ್ನು ಬಳಸಬೇಕು.

**ಶಿಕ್ಷಕರ ಪಾತ್ರ (Role of the teacher):** ಶ್ರವಣದೋಷವುಳ್ಳ ಮಕ್ಕಳ ಶಿಕ್ಷಕರು ಕೆಳಕಂಡ ಅಂಶಗಳನ್ನು ಗಮನದಲ್ಲಿಡಬೇಕು.

- ಸಾಧ್ಯವಾದಷ್ಟು ಮಟ್ಟಿಗೆ ಮಾತನಾಡುವವರು ಮತ್ತು ವಿದ್ಯಾರ್ಥಿಯ ನಡುವಿನ ದೂರವನ್ನು (ಅಂತರವನ್ನು)ಕಡಿಮೆ ಮಾಡಬೇಕು.
- ನಿಧಾನವಾಗಿ ಮಾತನಾಡಿ, ಸ್ಪಷ್ಟ ಉಚ್ಚಾರಣೆಯಿಂದ ಒತ್ತಿ ಹೇಳಬೇಕು.
- ಹಿನ್ನೆಲೆಯಲ್ಲಿರಬಹುದಾದ ಶಬ್ಧವನ್ನು ಸಾಧ್ಯವಾದಷ್ಟು ಕಡಿಮೆ ಮಾಡಬೇಕು.
- ಸಾಧ್ಯವಾದಷ್ಟು ಮಟ್ಟಿಗೆ ಮುಖಾಮುಖಿ ಸಂಪರ್ಕ ಬಳಸಬಹುದು.
- ಹೆಚ್ಚಿನ ಸಂಪರ್ಕ ಒದಗಿಸುವುದಕ್ಕಾಗಿ ಸಂಭಾಷಣೆಯಲ್ಲಿ ಅಥವಾ ಬೋಧನೆ ನೀಡುವಾಗ ಪೂರ್ಣವಾಕ್ಯಗಳನ್ನು ಬಳಸಬಹುದು.
- ತರಗತಿಯಲ್ಲಿ ವಸ್ತುಗಳನ್ನು ಸೂಚಿಸುವಾಗ ಅಥವಾ ಬೋಧನಾ ಸನ್ನಿವೇಶಗಳಲ್ಲಿ ದೃಶ್ಯಸೂಚನೆ/ಸಂಕೇತಗಳನ್ನು ಬಳಸಬಹುದು.
- ಮೌಖಿಕ ಪ್ರದರ್ಶನ/ವಿವರಣೆ ಸಮಯದಲ್ಲಿ ಸಹಪಾಠಿಗಳು ಮುಖ್ಯಾಂಶಗಳನ್ನು ಬರೆದುಕೊಳ್ಳುವಂತೆ ಹೇಳಿ, ಪಾಠದ ನಂತರ ಈ ಮಕ್ಕಳು ನೋಡಿ ಬರದುಕೊಳ್ಳುವತೆ ತಿಳಿಸುವುದು.
- ಶ್ರವಣ ಸಾಧನವು ಸುಸ್ಥಿತಿಯಲ್ಲಿದ್ದು, ಕೆಲಸ ಮಾಡುತ್ತಿದೆಯೇ ಎಂದು ಖಾತ್ರಿ ಮಾಡಿಕೊಳ್ಳುವುದು.
- ಸ್ವತಂತ್ರ ಚಟುವಟಿಕೆಗಳನ್ನು ಉತ್ತೇಜಿಸುವುದು ಮತ್ತು ಸಾಮಾಜಿಕ ಕೌಶಲಗಳನ್ನು ಕಲಿಸುವುದು.

### 4.2.4.ಮಾನಸಿಕ ಸವಾಲುಗಳುಳ್ಳ ಮಕ್ಕಳು ( Mentally Challenged)

ಮಕ್ಕಳ ಮಾನಸಿಕ ನ್ಯೂನತೆ ರಾಷ್ಟ್ರದ ಆರೋಗ್ಯ, ಶಿಕ್ಷಣ ಮತ್ತು ಕಲ್ಯಾಣ ಕಾರ್ಯಕ್ರಮಗಳಲ್ಲಿ ಒಂದು ಪ್ರಮುಖ ಸಮಸ್ಯೆಯಾಗಿದೆ. ಹಿಂದೆ ಸಮಾಜ ಇಂತಹ ಮಕ್ಕಳನ್ನು ತಿರಸ್ಕರಿಸಿತ್ತು. ಆದರೆ ಇತ್ತೀಚಿಗೆ ಸಾಮಾನ್ಯ ಜನರು ಇಂತಹ ಮಕ್ಕಳನ್ನು ಒಪ್ಪಿಕೊಳ್ಳುತ್ತಿದ್ದಾರೆ ಮತ್ತು ಅವರ ಬಗ್ಗೆ ಅರಿವನ್ನು ಬೆಳೆಸಿಕೊಳ್ಳುತ್ತಿದ್ದಾರೆ. ಮಾನಸಿಕ ನ್ಯೂನತೆ ವೈದ್ಯಕೀಯ, ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮಸ್ಯೆಯಾಗಿದ್ದು, ಪ್ರಸ್ತುತ ಸಮಾಜಕ್ಕೆ ದೊಡ್ಡ ಸವಾಲಾಗಿದೆ.

ಬೌದ್ಧಿಕ ಕಾರ್ಯನಿರ್ವಹಣೆಯಲ್ಲಿ ಸಾಧಾರಣ ಮಟ್ಟಕ್ಕಿಂತ ತುಂಬಾ ಕೆಳಗಿರುವವರನ್ನು **ಮಾನಸಿಕ ಸವಾಲುಗಳುಳ್ಳ ಮಕ್ಕಳೆಂದು ಕರೆಯುತ್ತಾರೆ.** ಇದು ಮಕ್ಕಳ ವಿಕಾಸದ ಅವಧಿಯಲ್ಲಿ ಕಂಡು ಬರುತ್ತದೆ ಮತ್ತು ಅವರ ಹೊಂದಾಣಿಕಾ ವರ್ತನೆ ಅಸಮರ್ಪಕವಾಗಿರುತ್ತದೆ.

"ಬೆಳವಣಿಗೆಯ ಹಂತದಲ್ಲಿ ಕಾಣಿಸಿಕೊಳ್ಳುವ ಕೆಳಮಟ್ಟದ ಸರಾಸರಿಯ ಬೌದ್ಧಿಕ ಕಾರ್ಯನಿರ್ವಹಣೆ ಮತ್ತು ಹೊಂದಾಣಿಕಾ ವರ್ತನೆಯಲ್ಲಿ ನ್ಯೂನತೆಯಿರುವುದು **ಮಾನಸಿಕ ಸವಾಲಾಗಿದೆ."** –ಹೇಬರ.

" ತನ್ನ ಕೆಲಸಗಳನ್ನು ತಾನು ಯಶಸ್ವಿಯಾಗಿ ನಿರ್ವಹಿಸಲು ಸಾಧ್ಯವಾಗದೇ ಇರುವವನು. ತನ್ನ ಹಾಗೂ ಸಮುದಾಯದ ಕಲ್ಯಾಣಕ್ಕಾಗಿ ನಿರಂತರವಾದ ಮೇಲ್ವಿಚಾರಣೆ, ನಿಯಂತ್ರಣ, ರಕ್ಷಣೆ ಹಾಗೂ ಮಾರ್ಗದರ್ಶನದ ಅವಶ್ಯಕತೆ ಇರುವವನು ಮಾನಸಿಕ ಸವಾಲುಗಳುಳ್ಳ ವ್ಯಕ್ತಿಯಾಗಿದ್ದಾನೆ." –ಬೆರಿಡ

ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಹಿಂದೆ ಮಾನಸಿಕ ನ್ಯೂನತೆಯುಳ್ಳವರೆಂದು ಕರೆಯುತ್ತಿದ್ದರು. ಮಾನಸಿಕ ನ್ಯೂನತೆಗೆ ಬುದ್ಧಿಶಕ್ತಿ ಕಡಿಮೆ ಇರುವುದೇ ಸೂಚಕವಾಗಿದೆ. ಶಿಕ್ಷಣದ ಉದ್ದೇಶಕ್ಕಾಗಿ ಇಂತಹ ಮಕ್ಕಳನ್ನು ಅವರ ಬುದ್ಧಿಶಕ್ತಿಯ ಮಟ್ಟಕ್ಕನುಗುಣವಾಗಿ ಮೂರು ವರ್ಗಗಳಾಗಿ ವಿಂಗಡಿಸಲಾಗಿದೆ.

| ಕ್ರ.ಸಂ | ಬುದ್ಧಿಶಕ್ತಿ ವ್ಯಾಪ್ತಿ | ಶೈಕ್ಷಣಿಕ ವರ್ಗೀಕರಣ |
|---|---|---|
| 1 | 25 ಕ್ಕಿಂತ ಕಡಿಮೆ | ಆಶ್ರಿತ ಅಥವಾ ತರಬೇತಿ ಅಸಾಧ್ಯ ಮಾನಸಿಕ ನ್ಯೂನತೆಯುಳ್ಳವರು (UMR) Untrainable Mentally Retaired |
| 2 | 26 – 50 | ತರಬೇತಿ ಪಡೆಯಬಲ್ಲ ಮಾನಸಿಕ ನ್ಯೂನತೆಯುಳ್ಳವರು (TMR)Trainable Mentally Retaired |
| 3 | 51 – 75 | ಶಿಕ್ಷಣಾರ್ಹ ಮಾನಸಿಕ ನ್ಯೂನತೆಯುಳ್ಳವರು (EMR)Educable Mentally Retaired |

## ಗುಣಲಕ್ಷಣಗಳು(Characteristics)

ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಬುದ್ಧಿಶಕ್ತಿ ಪರೀಕ್ಷೆಗಳು, ವ್ಯಕ್ತಿ ಅಧ್ಯಯನ, ಸಂಚಿತ ದಾಖಲೆಗಳ ಸಹಾಯದಿಂದ ಹಾಗೂ ಅವರ ಹೊಂದಾಣಿಕೆಯ ವರ್ತನೆಗಳ ಮೂಲಕ ಪತ್ತೆ ಮಾಡಬಹುದು. ಶಿಕ್ಷಕರು ಮತ್ತು ಪೋಷಕರು ಇಂತಹ ಮಕ್ಕಳ ವರ್ತನೆಗಳ ಸ್ವರೂಪವನ್ನು ವೀಕ್ಷಿಸುವುದರ ಮೂಲಕ ಗುರುತಿಸಬಹುದು. ಇಂತಹ ವರ್ತನೆಗಳು ಯಾವುವೆಂದರೆ,

- ನಿಧಾನವಾಗಿ ಕಲಿಯುವುದು, ಸಮಸ್ಯಾ ಪರಿಹಾರ ಕೌಶಲಗಳಲ್ಲಿ ತುಂಬಾ ಹಿಂದುಳಿದಿರುವುದು, ಪರಿಸರದ ಬೇಡಿಕೆಗಳಿಗೆ ನಿಧಾನವಾಗಿ ಪ್ರತಿಕ್ರಿಯೆ ತೋರುವುದು ಮುಂತಾದ ಲಕ್ಷಣಗಳಿಂದ ಕೂಡಿದ ಸಾಮಾನ್ಯ ಶೈಕ್ಷಣಿಕ ಹಿಂದುಳಿಯುವಿಕೆ.
- ಸ್ಮರಣ ಶಕ್ತಿ ಕಡಿಮೆ ಇದ್ದು, ವಿಷಯಗಳನ್ನು ದೀರ್ಘಕಾಲ ನೆನಪಿನಲ್ಲಿಡಲು ಅಸಮರ್ಥತೆ.
- ಕಲ್ಪನಾ ಶಕ್ತಿ ಮತ್ತು ಸೃಜನಾತ್ಮಕ ಚಿಂತನೆಯಲ್ಲಿ ಹಿಂದುಳಿದಿರುವುದು. (ಸಾಧಾರಣ ಮಟ್ಟಕ್ಕಿಂತ ಕೆಳಗಿರುವುದು.)
- ಭಾಷಾ ಕಲಿಕೆಯ ವಿಕಾಸ ನಿಧಾನವಾಗಿದ್ದು, ಶಬ್ಧ ಭಂಡಾರ ಮತ್ತು ವೈವಿಧ್ಯತೆಯಲ್ಲಿ ತುಂಬಾ ಸೀಮಿತವಾಗಿರುವುದು.
- ಅವಧಾನ ಸಾಮರ್ಥ್ಯ ಕಡಿಮೆ ಇರುವುದು.
- ಮಿತವಾದ ಆಟ ಮತ್ತು ಸಾಮಾಜಿಕ ಆಸಕ್ತಿಗಳು ಕಡಿಮೆಯಾಗಿರುವುದು.
- ಅವಧಾನ ಕೇಂದ್ರೀಕರಿಸಲಾಗದಿರುವುದು, ಬಹು ಬೇಗ ಅವಧಾನ ಭಂಗವಾಗುವುದು.
- ಸ್ವ–ಸಹಾಯ ಕೌಶಲ್ಯಗಳಲ್ಲಿ ಸಮನ್ವಯದ ಕೊರತೆ.
- ಪರಿಕಲ್ಪನೆಗಳು, ಅದರಲ್ಲಿಯೂ ಅಮೂರ್ತ ಪರಿಕಲ್ಪನೆಗಳ ವಿಕಾಸ ಕಠಿಣವಾಗಿರುವುದು.
- ಕನಿಷ್ಟ ಮಟ್ಟದ ಸ್ವಪರಿಕಲ್ಪನೆ.
- ಅಮೂರ್ತ ಆಲೋಚನಾ ಸಾಮರ್ಥ್ಯದ ಕೊರತೆ.
- ಸಾಮಾಜಿಕ ಹಾಗೂ ವೈಯಕ್ತಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾರರು.
- ಸಂವಹನ ಸಾಮರ್ಥ್ಯದ ಕೊರತೆ ಕಂಡುಬರುತ್ತದೆ.
- ಸರಳ ವಾಕ್ಯಗಳನ್ನು ಮಾತ್ರ ರಚಿಸಬಲ್ಲರು, ಸಂಕೀರ್ಣ ವಾಕ್ಯಗಳನ್ನು ರಚಿಸಲಾರರು.
- ಕನಿಷ್ಟಮಟ್ಟದ ಸ್ನಾಯು ಮತ್ತು ಸ್ನಾಯು ಸಂಯೋಜನೆ ಮತ್ತು ಗತಿ ಕೌಶಲಗಳು.

## ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ (Psychological effect on personality)

ಮಾನಸಿಕ ಸವಾಲುಗಳನ್ನೆದುರಿಸುವ ಮಕ್ಕಳಲ್ಲಿ ಸ್ವ ಪರಿಕಲ್ಪನೆ ಸಾಕಷ್ಟಿರುವುದಿಲ್ಲ. ಇವರು ಆವೇಗದಿಂದ ವರ್ತಿಸುವರು. ವಸ್ತುಗಳನ್ನು/ವಿಷಯಗಳನ್ನು ಒಟ್ಟಾರೆ ವ್ಯಾಪಕವಾಗಿ ನೋಡುವರು. ಇವರಿಗೆ ಫಲಪ್ರದ ಅನುಭವಗಳನ್ನು ಒದಗಿಸುವ ಧನಾತ್ಮಕ ಕಲಿವಿನ ಪರಿಸರ ಸಹಾಯಕವಾಗುವುದು. ಸಾಧಾರಣ ಮಟ್ಟದ ಮಕ್ಕಳಿಗಿಂತ ಹೆಚ್ಚು ಮೂರ್ತ ಅನುಭವಗಳನ್ನು ಮತ್ತು ಹೆಚ್ಚಿನ ಪುನರಾವರ್ತನೆಯ ಅವಶ್ಯಕತೆಯುಳ್ಳ, ನಿಧಾನವಾಗಿ ಕಲಿಯುವ ಮಕ್ಕಳಿಗಾಗಿ ಬೋಧನೆಯನ್ನು ಹೊಂದಿಸಿ ಮಾರ್ಪಡಿಸಿಕೊಳ್ಳುವುದರಿಂದ ಇವರಲ್ಲಿರುವ ಕೀಳರಿಮೆಯ ಭಾವನೆಯನ್ನು ಬಹುಮಟ್ಟಿಗೆ ತಡೆಗಟ್ಟಬಹುದು. ವಿಫಲತೆ ಮತ್ತು ಟೀಕೆಗಳೊಂದಿಗೆ ವ್ಯವಹರಿಸುವುದನ್ನು ಕಲಿಯುದಲ್ಲದೆ ಇವರು ಅವುಗಳನ್ನು ಒಪ್ಪಿಕೊಳ್ಳುವುದನ್ನು ಕಲಿಯಬೇಕು.

## ಶೈಕ್ಷಣಿಕ ಕ್ರಮಗಳು (Educational Measures)

ಮಾನಸಿಕ ಸವಾಲುಗಳುಳ್ಳ ಮಕ್ಕಳ ಶಿಕ್ಷಣದ ಉದ್ದೇಶಗಳು, ಸ್ವಪರಿಕಲ್ಪನೆ, ಮಾನವೀಯ ಸಂಬಂಧಗಳು, ಆರ್ಥಿಕ ಕ್ಷಮತೆ ಮತ್ತು ಪೌರ ಜವಾಬ್ದಾರಿ ಇವುಗಳನ್ನು ಬೆಳೆಸುವುದೇ ಆಗಿದೆ.

- ಅರ್ಹಚಿಕಿತ್ಸಾ ಪರೀಕ್ಷಕರಿಂದ ತಪಾಸನೆಯಾಗಬೇಕು ಮತ್ತು ಇವರ ಕಲ್ಯಾಣಕ್ಕಾಗಿ ಸೂಕ್ತ ಸಲಹೆ ಪಡೆಯಬೇಕು.
- ಪ್ರತಿ ಮಗುವು ತನ್ನದೇ ಆದ ಆಸಕ್ತಿ ಮತ್ತು ಸಾಮರ್ಥ್ಯಗಳಿಗನುಗುಣವಾಗಿ ಕಲಿಯುವಂತಾಗಲು ಸ್ವಯಂ ಕಲಿಕಾ ವಿಧಾನವನ್ನು ಅನುಸರಿಸಲು ಸೂಚಿಸಲಾಗಿದೆ.
- ಪ್ರತಿಯೊಂದು ಮಗುವು ಕಲಿಕೆಯಲ್ಲಿ ಪಾಲ್ಗೊಂಡು ಚಟುವಟಿಕೆಗಳ ಮೂಲಕ ಮಾಡಿ ಕಲಿಯಲು ಅವಕಾಶ ನೀಡುವದು.
- ಮಾನಸಿಕ ನ್ಯೂನ್ಯತೆಯುಳ್ಳ ಮಕ್ಕಳಿಗೆ ಕಲಿಸುವಾಗ ಪರಿಪಕ್ವತೆಯ ಮಟ್ಟ ಮತ್ತು ಕಲಿಕಾ ಸಿದ್ದತೆಯನ್ನು ತಿಳಿದುಕೊಳ್ಳಬೇಕು. ಪೂರ್ವ ಸಿದ್ಧತಾ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಅಗತ್ಯವಾದ ಸಿದ್ಧತೆಯನ್ನು ತರಲು ಪ್ರಯತ್ನಿಸಬೇಕು.
- ಕಡಿಮೆ ಬುದ್ಧಿಶಕ್ತಿ ಹೊಂದಿರುವ ಮಕ್ಕಳಿಗೆ ಅವರಿಗೆ ಇಷ್ಟವಾದ ಕ್ಷೇತ್ರದಲ್ಲಿ ತರಬೇತಿ ನೀಡಬಹುದು. ಚಿತ್ರಕಲೆ, ಸಂಗೀತ, ತೋಟಗಾರಿಕೆ, ಹೊಲಿಗೆ ಮುಂತಾದವುಗಳು.
- ಈ ಮಕ್ಕಳು ಕಡಿಮೆ ಜ್ಞಾಪಕ ಶಕ್ತಿ ಮತ್ತು ಕಲಿಕೆಯ ಸಾಮರ್ಥ್ಯ ಹೊಂದಿರುವದರಿಂದ ಇವರಿಗೆ ಪುನರಾವರ್ತನೆಯ ಮೂಲಕ ಕಲಿಸುವ ಅವಶ್ಯಕತೆ ಇದೆ.
- ಈ ಮಕ್ಕಳ ಅವಧಾನ ಶಕ್ತಿ ಕಡಿಮೆ ಇರುವುದರಿಂದ ಇವರು ತರಗತಿಯ ಕಲಿಕೆಯಲ್ಲಿ ಹೆಚ್ಚು ಕಾಲ ತಮ್ಮ ಗಮನವನ್ನು ಕೇಂದ್ರೀಕರಿಸಲಾರರು ಆದ್ದರಿಂದ ಇವರಿಗೆ ಅಲ್ಪ ಅವಧಿ ಬೋಧನಾ ತರಗತಿ ವ್ಯವಸ್ಥೆ ಮಾಡಬೇಕು.
- ಇವರಲ್ಲಿ ಕಲ್ಪನಾ ಶಕ್ತಿ ತುಂಬಾ ಕಡಿಮೆ ಇರುವದರಿಂದ ಹಲವಾರು ಕಾರ್ಯಚಟುವಟಿಕೆಗಳ ಮುಖಾಂತರ ಪ್ರತ್ಯಕ್ಷಾನುಭವಗಳನ್ನು ಒದಗಿಸಬೇಕು.
- ಮಾನಸಿಕ ಸವಾಲುಗಳುಳ್ಳ ಮಕ್ಕಳಿಗೆ ಸಂವಹನ ಕೌಶಲಗಳಲ್ಲಿ ಸ್ವಸಹಾಯ ಕೌಶಲಗಳು ಮತ್ತು ಸಾಮಾಜೀಕರಣ ಕೌಶಲಗಳಲ್ಲಿ ತರಬೇತಿ ನೀಡುವದು.
- ದೃಕ್–ಶ್ರವಣೋಪಕರಣಗಳನ್ನು ಉಪಯೋಗಿಸುವ ಮೂಲಕ ವಿಷಯವನ್ನು ಸರಳ ಹಾಗೂ ಮೂರ್ತಗೊಳಿಸುವುದು.

### ಶಿಕ್ಷಕರ ಪಾತ್ರ (Role of the teacher)

ತರಗತಿ ಶಿಕ್ಷಕರು ಈ ಕೆಳಗಿನ ಕ್ಷೇತ್ರಗಳಲ್ಲಿ ಪ್ರಮುಖ ಪಾತ್ರವಹಿಸಬೇಕು.

- ನ್ಯೂನ್ಯತೆಯುಳ್ಳ ಮತ್ತು ಸಾಧಾರಣ ಮಕ್ಕಳ ನಡುವೆ ಸೂಕ್ತ ಅಂತರ್‌ಕ್ರಿಯೆಗಳ ಅನುಭವಗಳನ್ನು ರೂಪಿಸಿ, ಅವಕಾಶ ನೀಡುವುದು.
- ಯೋಜಿತ ಬೋಧನೆಯನ್ನು ರೂಪಿಸುವುದು.
- ಸಮವಯಸ್ಕ ಗುಂಪುಗಳ ನಡುವೆ ಮನೋಭಾವ ಬದಲಾವಣೆಗಳನ್ನು ಅಳತೆಮಾಡಿ, ಅವರಲ್ಲಿ ಸೂಕ್ತ ಮನೋಭಾವಗಳನ್ನು ಬೆಳೆಸುವುದು.
- ಮಾನಸಿಕ ಸವಾಲುಗಳುಳ್ಳ ವಿದ್ಯಾರ್ಥಿಗಳಿಗೆ ಬೋಧಿಸುವ ಜವಾಬ್ದಾರಿಯನ್ನು ಒಪ್ಪಿಕೊಳ್ಳುವುದು. ಈ ಕಾರ್ಯವು ಸವಾಲಿನದಾಗಿದ್ದು ಅದನ್ನು ಹೇಗೆ ಎದುರಿಸಬೇಕೆಂಬುದನ್ನು ಶಿಕ್ಷಕನು ತಿಳಿದಿರಬೇಕು.
- ಕೌಶಲ ತರಬೇತಿ, ಅವಧಾನ ತರಬೇತಿ, ಪುನರಭ್ಯಾಸ ತರಬೇತಿ, ಕಲಿಯಲು ಕಲಿಯುವಿಕೆ ಮತ್ತು ಉಪಕರಣ ಬಳಕೆ, ಸಂಪದೀಕರಣ ಮುಂತಾದವುಗಳನ್ನು ಕ್ರಮಬದ್ಧಗೊಳಿಸುವುದಕ್ಕಾಗಿ ಅಭಿವೃದ್ಧಿ ಕೌಶಲ ತರಬೇತಿ ಮಾರ್ಗವನ್ನು ಬಳಸಬೇಕು. ಸಾಮಾಜಿಕ ಹೊಂದಾಣಿಕೆಯ ಕೌಶಲಗಳನ್ನು ಸಹ ಬೆಳೆಸಬೇಕು.
- ಜ್ಞಾನಾತ್ಮಕ ತಂತ್ರ ವಿಧಾನವನ್ನು ಅಳವಡಿಸಬೇಕು. ಸ್ವಯಂ ಬೋಧನೆ ಹಾಗೂ ಸಮಸ್ಯಾ ಪರಿಹಾರ ವಿಧಾನಗಳು ಸೂಕ್ತ ತಂತ್ರಗಳಾಗಿವೆ.

## 4.2.5 ಕಲಿಕೆಯ ಸವಾಲುಗಳುಳ್ಳ ಮಕ್ಕಳು (Children with Learning Challenges)

ಸಾಮಾನ್ಯವಾಗಿ ಕಲಿಕೆಯಲ್ಲಿ ಸೀಮಿತ ಸಾಮರ್ಥ್ಯವುಳ್ಳ ಮಕ್ಕಳನ್ನು **ಕಲಿಕೆಯ ಸವಾಲುಗಳುಳ್ಳ** ಮಕ್ಕಳೆನ್ನುತ್ತೇವೆ. ಒಬ್ಬ ವ್ಯಕ್ತಿ ವಿವಿಧ ಮಟ್ಟದ ಬೌದ್ಧಿಕ ಕ್ರಿಯೆಗಳನ್ನು ಒಳಗೊಂಡ ಹಲವು ವಿಧದ ಕಾರ್ಯಗಳನ್ನು ಕಲಿಯುವುದರಲ್ಲಿ

ನ್ಯೂನತೆ ಹೊಂದಿದ್ದು ಅಥವಾ ಸೀಮಿತ ಸಾಮರ್ಥ್ಯ ಹೊಂದಿದ್ದರೆ ಅಂಥವನನ್ನು ಸಾಮಾನ್ಯ ಬುದ್ಧಿ ಮಾಂಧ್ಯತೆ ಹೊಂದಿರುವವನೆಂದು ಪರಿಗಣಿಸಬಹುದು. ಇದಕ್ಕೆ ಬದಲಾಗಿ ಕೊರತೆಯು ಕಲಿಕೆಯ ಯಾವುದಾದರೊಂದು ಕ್ಷೇತ್ರಕ್ಕೆ ಮಾತ್ರ ಸೀಮಿತವಾಗಿದ್ದರೆ, ಅದರಲ್ಲಿಯೂ ವಿಶೇಷವಾಗಿ ಭಾಷೆ ಮತ್ತು ಸಂಖ್ಯಾ ಕಲಿಕೆಗೆ ಸಂಬಂಧಿಸಿದ್ದರೆ ಇಂತಹ ಮಗುವನ್ನು **ಕಲಿಕೆಯ ಸಮಸ್ಯೆಗಳುಳ್ಳ** ಮಗುವೆಂದು ಹೇಳಬಹುದು.

ಕಲಿಕೆಯ ಸಮಸ್ಯೆಯುಳ್ಳ ಮಗುವೆಂದು ಪರಿಗಣಿಸಬೇಕಾದರೆ ಆ ಮಗು–

(i) ಇತರರ ಮಾತನ್ನು ಗ್ರಹಿಸುವಲ್ಲಿ, ಮಾತನಾಡುವಲ್ಲಿ, ಓದುವಲ್ಲಿ, ಬರೆಯುವಲ್ಲಿ ಕಾಗುಣಿತ ಬಳಕೆ ಮತ್ತು ಗಣಿತಗಳಲ್ಲಿ ಬೆಳವಣಿಗೆಯ ಅವಧಿಯಲ್ಲಿ ಸಾಕಷ್ಟು ಕಠಿಣತೆಯನ್ನು ಎದುರಿಸುವನು.

(ii) ದೃಷ್ಟಿಯ, ಶ್ರವಣದ, ಚಲನೆಗೆ ಸಂಬಂಧಿಸಿದ ಅಥವಾ ಸಂವೇಗಾತ್ಮಕ ಮತ್ತು ಬೌದ್ಧಿಕ ಸಮಸ್ಯೆಗಳಿಂದ ಮುಕ್ತವಾಗಿರುವನು.

(iii) ಕಲಿಯಲು ಸಾಕಷ್ಟು ಅನುಕೂಲತೆಗಳು, ಆಸಕ್ತಿ ಮತ್ತು ಅಭಿಪ್ರೇರಣೆಗಳನ್ನು ಹೊಂದಿರುತ್ತಾನೆ.

ಭಾಷೆಯನ್ನು ಗ್ರಹಿಸುವ, ಬಳಸುವ, ಮಾತನಾಡುವ, ಓದುವ–ಬರೆಯುವ, ಕಾಗುಣಿತ ಬಳಕೆ(Spelling), ಗಣಿತದ ಲೆಕ್ಕ ಬಿಡಿಸುವ ಈ ಮುಂತಾದ ಮನೋವೈಜ್ಞಾನಿಕ ಪ್ರಕ್ರಿಯೆಗಳಲ್ಲಿ ಒಂದು ಅಥವಾ ಹಲವು ಅವ್ಯವಸ್ಥೆಯನ್ನು **ಕಲಿಕಾ ನ್ಯೂನ್ಯತೆ** ಎನ್ನುವರು.

ಗ್ರಹಿಸುವ ಅಸಮರ್ಥತೆ, ಮೆದುಳಿನ ಹಾನಿ(Brain injury), ಮೆದುಳಿನ ಅಸಮರ್ಥ ಕಾರ್ಯನಿರ್ವಹಿಸುವಿಕೆ (Minimal Brain dysfunction), ಡಿಸ್ಲೆಕ್ಸಿಯಾ (Dyslexia), ವಾಕ್ ಸ್ತಂಬನ (Developmental aphasia) ಈ ಮುಂತಾದವುಗಳನ್ನು ಕಲಿಕಾ ನ್ಯೂನ್ಯತೆ ಒಳಗೊಂಡಿದೆ. ಇವರು ಜಾಗತಿಕ ಜನಸಂಖ್ಯೆಯ ಶೇ5 ರಿಂದ 10 ಪ್ರಮಾಣ ದಲ್ಲಿ ಇರುತ್ತಾರೆ. ಕಲಿಕಾ ಸವಾಲುಗಳುಳ್ಳ ಮಕ್ಕಳಲ್ಲಿರುವ ಅಸಮರ್ಥತೆಯನ್ನು ಕಲಿಕಾ ನ್ಯೂನ್ಯತೆ/ ದೌರ್ಬಲ್ಯ(Learning Desability /LD) ಎನ್ನುವರು.

Identification of Children with Specific Learning Disabilities



**ಕಲಿಕಾ ನ್ಯೂನ್ಯತೆಯ ವಿಧಗಳು**

**(Types of Learning disability)**

- **ಡಿಸ್ಲೆಕ್ಸಿಯಾ(Dyslexia)** :- ಓದಿನ ದೌರ್ಬಲ್ಯ
- **ಡಿಸ್‌ಗ್ರಾಫಿಯಾ(Dysgraphia)**:- ಬರವಣಿಗೆ ದೌರ್ಬಲ್ಯ
- **ಡಿಸ್‌ಕ್ಯಾಲ್ಕ್ಯುಲಿಯಾ(Dyscalculia)**:–ಅಂಕಗಣಿತ ದೌರ್ಬಲ್ಯ

**ಗುಣಲಕ್ಷಣಗಳು (Characteristics)**

ಸಾಮಾನ್ಯವಾಗಿ ಮಕ್ಕಳು ಶಾಲೆ ಪ್ರವೇಶಿಸಿದ ನಂತರವೇ ಅವರನ್ನು ಕಲಿಕೆಯ ಸಮಸ್ಯೆಗಳಿರುವವರೆಂದು ಗುರ್ತಿಸಲಾಗುವುದು. ತರಗತಿ ಶಿಕ್ಷಕರು ಮಕ್ಕಳ ವರ್ತನಾತ್ಮಕ ಲಕ್ಷಣಗಳನ್ನು ವೀಕ್ಷಿಸುವುದರ ಮೂಲಕ ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳನ್ನು ಗುರ್ತಿಸಬಹುದು.

- ಶಾಲಾ / ಪಠ್ಯ ವಿಷಯಗಳನ್ನು ಕಲಿಯುವುದರಲ್ಲಿ ಕಠಿಣತೆ, ಕೆಲವು ವೇಳೆ ವಿದ್ಯಾರ್ಥಿಯು ಒಂದು ವಿಷಯದಲ್ಲಿ ಮಾತ್ರ ಹಿಂದುಳಿದಿರಬಹುದು ಅಥವಾ ಹೆಚ್ಚು ವಿಷಯಗಳಲ್ಲಿ ಹಿಂದುಳಿದಿರಬಹುದು.
- ಗಡಿಯಾರ ನೋಡಿ ಗಂಟೆ ಹೇಳುವುದು, ದಿನಗಳು, ತಿಂಗಳುಗಳು ಮತ್ತು ಋತುಗಳ ಅನುಕ್ರಮವನ್ನು ನೆನಪಿಡಲು ಕಷ್ಟವಾಗಿರುವುದು.
- ಬರವಣಿಗೆಯಲ್ಲಿ ನಿರ್ದಿಷ್ಟ ದೋಷಗಳು ಕಂಡುಬರುತ್ತವೆ. ಬರೆಯುವಾಗ ಕೆಲವು ಅಕ್ಷರಗಳನ್ನು ಹಿಂದು ಮುಂದಾಗಿ ಬರೆಯುವರು(b ಬದಲು d, p ಬದಲು q, ಣ ಬದಲು ಟ) ಅಕ್ಷರಗಳ ಲೋಪ, ಅಕ್ಷರಗಳನ್ನು ಒತ್ತಾಗಿ ಅಥವಾ ದೂರ ದೂರ ಬರೆಯುವುದು (where-here, ನಕ್ಷತ್ರ–ನತ್ರ, ದಾಸವಾಳ–ದಾವಾಳ).
- ಸಮವಯಸ್ಕರಿಗೆ ಹೋಲಿಸಿದರೆ ಕೈ ಬರಹ ಅಂದವಾಗಿಲ್ಲದಿರುವುದು.
- ಸಮವಯಸ್ಕರಿಗೆ ಹೋಲಿಸಿದರೆ ಚಿತ್ರ ಬಿಡಿಸುವುದರಲ್ಲಿ ಹಿಂದುಳಿದಿರುವುದು.

- ಓದುವ ವೇಗ ಕಡಿಮೆಯಾಗಿರುವುದು, ಓದುವಾಗ ಅಕ್ಷರಗಳ ಲೋಪ ಅಥವಾ ಅಕ್ಷರಗಳ ಜೋಡಣೆ ಹಿಂದು–ಮುಂದು ಮಾಡುವುದು.
- ಬಹುಮಟ್ಟಿನ ಸಮವಯಸ್ಕರು ಅನುಸರಿಸುವಂತಹ ಲಿಖಿತ ನಿರ್ದೇಶನಗಳನ್ನು ಇವರು ಅನುಸರಿಸಲಾರರು.
- ಅಂಕಗಣಿತದಲ್ಲಿ ತೊಂದರೆ – ಉದಾಹರಣೆ B ಮತ್ತು 8 ರ ನಡುವೆ, b ಮತ್ತು 6ರ ನಡುವೆ ಗೊಂದಲ, ಸಹಪಾಠಿಗಳಿಗೆ ಹೋಲಿಸಿದರೆ ಕೂಡುವುದು, ಕಳೆಯುವದರಲ್ಲಿ ಹೆಚ್ಚಿನ ತೊಂದರೆ, ಉದಾ: ವ್ಯವಕಲನ ಸಮಸ್ಯೆಯ ನಡುವೆಯೇ ಸಂಕಲನ ಪ್ರಾರಂಭಿಸಬಹುದು.
- ಸುಲಭವಾಗಿ ಚಿತ್ತ ಚಂಚಲಗೊಳ್ಳುವುದು.
- ಸಹಪಾಠಿಗಳಿಗೆ ಹೋಲಿಸಿದರೆ ಅತಿ ಚುರುಕಾಗಿರುವುದು, ಸ್ವಲ್ಪಕಾಲವೂ ಸಹ ತರಗತಿಯಲ್ಲಿ ಸುಮ್ಮನೆ ಕುಳಿತಿರಲಾರರು.
- ಆವೇಗಕ್ಕೊಳಗಾಗುವುದು, ಇದ್ದಕ್ಕಿದ್ದಂತೆ ಚಟುವಟಿಕೆಯಲ್ಲಿ ತೊಡಗುವುದು, ತಾನು ಪ್ರಾರಂಭಿಸಿದ ಕೆಲಸದ ಪರಿಣಾಮಗಳನ್ನು ಯೋಚಿಸುವುದಕ್ಕೂ ಕಾಯದಿರುವುದು.
- ಅಂಕಗಣಿತದ ಚಿಹ್ನೆಗಳ ನಡುವೆ ಗೊಂದಲ ( + – x ÷ > < )
- ಸಾಮಾಜಿಕವಾಗಿ ಅಪರಿಪಕ್ವರು, ಅಜಾಗರೂಕತೆ, ಬೇಜವಾಬ್ದಾರಿ, ಪ್ರಾರಂಭಿಸಿದ ಕೆಲಸವನ್ನು ಪೂರ್ಣಗೊಳಿಸದಿರುವುದು.
- ಮಂಕುಕವಿದಂತೆ ಇರುವುದು.

## ಶೈಕ್ಷಣಿಕ ಕ್ರಮಗಳು (Educational Provisions)

ಕಲಿಕೆಯ ಸಮಸ್ಯೆಗಳುಳ್ಳ ಮಕ್ಕಳಿಗಾಗಿ ಶೈಕ್ಷಣಿಕ ಅವಕಾಶಗಳು / ಕಾರ್ಯಕ್ರಮಗಳು ಮಕ್ಕಳಲ್ಲಿರುವ ಕಲಿಕೆಯ ಸಮಸ್ಯೆಯ ವಿಧಗಳು ಮತ್ತು ನ್ಯೂನ್ಯತೆ ಇರುವ ನಿರ್ದಿಷ್ಟ ಕ್ಷೇತ್ರದಲ್ಲಿ ಆ ಮಗು ಪ್ರದರ್ಶಿಸುವ ವರ್ತನೆಯ ಲಕ್ಷಣಗಳನ್ನು ಅವಲಂಬಿಸಿರುತ್ತವೆ.

- **ನರಸಂಬಂಧಿತ–ಮನೋವೈಜ್ಞಾನಿಕ ಪ್ರಕ್ರಿಯೆಯನ್ನು ವಿಕಾಸಗೊಳಿಸುವುದು (Developing the neuropsychological process)**

  ಪ್ರತ್ಯಾಕ್ಷಾನುಭವ – ಸ್ಮರಣೆ – ಧಾರಣೆ ಮತ್ತು ಸಂಬಂಧ ಕಲ್ಪನೆ – ಇವು ಮಗು ಕೊರತೆ ಹೊಂದಿರಬಹುದಾದ ಮಾತುಗಾರಿಕೆ, ಓದುವುದು, ಬರೆಯುವುದು ಮತ್ತು ಅಂಕಗಣಿತ ಕೌಶಲಗಳ ಮೇಲೆ ಪ್ರಭುತ್ವ ಸಾಧಿಸಲು ಅತ್ಯವಶ್ಯ. ಇದನ್ನು ಬಹು ಇಂದ್ರೀಯ ಪ್ರಚೋದನೆಗಳನ್ನೊಳಗೊಂಡ ವ್ಯವಸ್ಥಿತ ಚಟುವಟಿಕೆಗಳ ಸರಣಿಯ ಮೂಲಕ ಸಾಧಿಸಬಹುದು. ಪ್ರಾರಂಭದಲ್ಲಿ ಒಂದೊಂದೇ ಸಾಮರ್ಥ್ಯವನ್ನು ಬೆಳೆಸಲು ಅಭ್ಯಾಸಗಳನ್ನು ನೀಡಿ ನಂತರದ ಹಂತದಲ್ಲಿ ಎಲ್ಲ ಸಾಮರ್ಥ್ಯಗಳ ಸಮನ್ವಯದ ಯತ್ನ ನಡೆಸಲಾಗುವುದು. ಈ ಕ್ರಮವನ್ನು ಕೊರತೆ ಆಧಾರಿತ ಕ್ರಮವೆನ್ನಬಹುದು.

- ಬಲಯುತ ಮಾರ್ಗಗಳ ಮೂಲಕ ಶೈಕ್ಷಣಿಕ ಕೌಶಲಗಳನ್ನು ಬೆಳೆಸುವುದು. ಇವು ಕಲಿಕೆಯ ದೋಷಗಳುಳ್ಳ ಮಕ್ಕಳ ಬೋಧನೆಗೆ ಸಂಬಂಧಿಸಿದ ನಿರ್ದಿಷ್ಟ ತತ್ವಗಳು, ಬೆಳೆಸಬೇಕಾದ ಕೌಶಲಗಳ ಸ್ವರೂಪ, ಆ ಕೌಶಲದ ಕ್ಷೇತ್ರದಲ್ಲಿ ಮಗುವಿನ ಅನುಭವಕ್ಕೆ ಬಂದ ಕಠಿಣತೆಗಳ ಆಧಾರದ ಮೇಲೆ ರೂಪುಗೊಳ್ಳಬೇಕು.
- ಭಾಷಾ ಅನುಭವ ಮಾರ್ಗ ಅತ್ಯಂತ ಉಪಯುಕ್ತ ಏಕೆಂದರೆ ಅದು ಕಥೆಗಳು, ವೈಯಕ್ತಿಕ ಅನುಭವಗಳು, ಮಗುವಿನ ಮೌಖಿಕ ಭಾಷೆಯನ್ನು ಬಳಸುತ್ತದೆ. ನಿರ್ದಿಷ್ಟ, ಕೌಶಲ ಅಭಿವೃದ್ಧಿಯನ್ನು ಅಳವಡಿಸಿಕೊಂಡು ಭಾಷಾ ಕೌಶಲ, ದೃಶ್ಯ ಮತ್ತು ಗತಿ ಸಾಮರ್ಥ್ಯಗಳನ್ನು ಬಳಸುತ್ತದೆ. ಕಾರ್ಯಕ್ರಮನ್ವಯ ಬೋಧನೆ (programmed instruction)ಮತ್ತೊಂದು ಉಪಯುಕ್ತ ತಂತ್ರವಾಗಿದೆ. ಓದುವಿಕೆ ಕಲಿಸಲು ಬಹು ಇಂದ್ರಿಯ ಅನುಭವ ಮಾರ್ಗ ಮತ್ತು ಚಿತ್ರಗಳನ್ನು ಬಳಸಬಹುದು.
- ಕರಕೌಶಲ ಅಭ್ಯಾಸಗಳನ್ನು ಬಳಸಿ ಮಕ್ಕಳ ಸ್ನಾಯುಬಲ ಹೆಚ್ಚಿಸಬಹುದು. ಇದು ಅವರ ಬರವಣಿಗೆಯನ್ನು ಸುಧಾರಿಸುವಲ್ಲಿ ಸಹಾಯ ಮಾಡುತ್ತದೆ.
- ಅಂಕಗಣಿತದ ಕಲಿಕೆಯ ದೋಷ ನಿವಾರಣೆಗೆ ನಿರ್ದಿಷ್ಟ ಪರಿಹಾರ ಬೋಧನೆ ಸಹಾಯಕವಾಗಿದೆ. ಕಲಿಕೆಯ ಸವಾಲುಗಳುಳ್ಳ ಮಕ್ಕಳಿಗಾಗಿ ಈ ಕೆಳಗಿನ ಸಾಮಾನ್ಯ ಬೋಧನಾ ತಂತ್ರಗಳನ್ನು ಬಳಸಬಹುದು.
- ಸಂಕ್ಷಿಪ್ತ, ಚಿಕ್ಕದಾದ ಸೂಚನೆಗಳನ್ನು, ದಪ್ಪ ಮುದ್ರಣಗಳನ್ನು ಬಳಸಬಹುದು.
- ಸೂಚನೆಗಳನ್ನು ಅಥವಾ ಹಂತಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಮುಖ್ಯ ಪದಗಳ ಕೆಳಗೆ ಗೆರೆ ಎಳೆಯಬಹುದು.

- ಸ್ಪಷ್ಟವಾಗಿ, ಜೋರಾಗಿ ಮಾತನಾಡುವುದು.
- ಸದಾ ಒಂದೇ ರೀತಿಯ ಭಾಷೆ ಮತ್ತು ಬಣ್ಣದ ಸಂಕೇತಗಳನ್ನು ಬಳಸುವುದು.
- ರೇಖಾ ಚಿತ್ರಗಳು ಅಥವಾ ಚಿತ್ರರೂಪದ ನಿದರ್ಶನಗಳನ್ನು ಬಳಸುವುದು.
- ಪಾಠದ ಸಮಗ್ರ ನೋಟವನ್ನು ಬಳಸುವುದು, ಪ್ರಶ್ನೆಗಳನ್ನು ಕೇಳುವುದು, ವಸ್ತು ವಿಷಯವನ್ನು ಓದಲು, ಗಟ್ಟಿಯಾಗಿ ಹೇಳಲು, ಪುನರಾವಲೋಕನ ಮಾಡುವಂತೆ ತಿಳಿಸುವುದು.
- ಬೋಧನೆಯಲ್ಲಿ ವಿವಿಧ ದೃಕ್–ಶ್ರವಣ ಸಾಧನಗಳನ್ನು ಬಳಸುವುದು.

**ಕಲಿಕಾ ಸವಾಲುಗಳುಳ್ಳ ಮಕ್ಕಳ ವರ್ತನಾತ್ಮಕ ಸಮಸ್ಯೆಗಳನ್ನು ಪರಿಹರಿಸಲು ಈ ಕೆಳಗಿನ ಮಾರ್ಗೋಪಾಯಗಳನ್ನು ಬಳಸಬಹುದು.**

- ಅವಧಾನದ ಮಟ್ಟವನ್ನು ಹೆಚ್ಚಿಸಿ, ಭಂಗಕಾರಗಳನ್ನು ನಿವಾರಿಸುವುದು.
- ಮಗು ತನ್ನ ಜವಾಬ್ದಾರಿಯನ್ನು ಒಪ್ಪಿಕೊಂಡು ಅದನ್ನು ಫಲಪ್ರದವಾಗಿ ನಿರ್ವಹಿಸುವಂತೆ ಪ್ರೇರೇಪಿಸುವುದು.
- ಕಲಿಕೆಯ ಸಮಸ್ಯೆಯುಳ್ಳ ಮಕ್ಕಳನ್ನು ಕೂಟಗಳಲ್ಲಿ, ಪ್ರವಾಸಗಳಲ್ಲಿ ಮತ್ತು ಶಾಲಾ ಸಮಾರಂಭಗಳಲ್ಲಿ ತೊಡಗಿಸುವುದು.
- ಶಾಲೆಯ ವಿವಿಧ ಸಹ–ಪಠ್ಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು.
- ಸಹಕಾರ, ಚಾತುರ್ಯ, ಜವಾಬ್ದಾರಿಯನ್ನು ಒಪ್ಪಿಕೊಳ್ಳುವಿಕೆ, ನಿಯೋಜಿತ ಕಾರ್ಯವನ್ನು ಮಾಡಿ ಮುಗಿಸುವುದು, ಹೊಸ ಸನ್ನಿವೇಶಗಳಿಗೆ ಹೊಂದಾಣಿಕೆ ಮಾಡಿಕೊಳ್ಳುವುದು, ಸಾಮಾಜಿಕ ಒಪ್ಪಿಗೆ ಪಡೆಯುವುದು ಇತ್ಯಾದಿ ಸಾಮಾಜಿಕ ಕೌಶಲಗಳನ್ನು ವಿಕಾಸಗೊಳಿಸುವುದು.

### ಶಿಕ್ಷಕರ ಪಾತ್ರ (Role of the teacher)

ಸಮನ್ವಯ ತರಗತಿಯಲ್ಲಿ ಶಿಕ್ಷಕರು ವೈಯಕ್ತಿಕ ಭಿನ್ನತೆಗಳನ್ನು ಒಪ್ಪಿ ಅವರನ್ನು ಗೌರವಿಸಲು ತರಗತಿಯನ್ನು ವೈಯಕ್ತಿಕರಿಸಬೇಕು.

- ಸ್ವತಂತ್ರ ಮತ್ತು ಸಣ್ಣಗುಂಪು ಚಟುವಟಿಕೆಯನ್ನು ಉತ್ತೇಜಿಸಬೇಕು.
- ವಿದ್ಯಾರ್ಥಿಗಳಲ್ಲಿ ಅರ್ಪಣಾಭಾವ, ನಿಯಂತ್ರಣ ಮತ್ತು ಜವಾಬ್ದಾರಿಗಳನ್ನು ಹೆಚ್ಚಿಸಬೇಕು.
- ಪ್ರತಿ ಮಗುವಿನ ಪ್ರಗತಿಯನ್ನು ತಿಳಿಯಲು ನಿರಂತರ ವಿದ್ಯಾರ್ಥಿ ಮೌಲ್ಯಮಾಪನ ನಡೆಯಬೇಕು.
- ಪೋಷಕರೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳಬೇಕು.
- ವಿದ್ಯಾರ್ಥಿಯ ಅಗತ್ಯಕ್ಕನುಸಾರವಾಗಿ ಕಾರ್ಯಕ್ರಮ ರೂಪಿಸಬೇಕು.
- ಕಾರ್ಯ ವಿಶ್ಲೇಷಣೆ ಮಾಡಿ ವಿದ್ಯಾರ್ಥಿ ಹಂತಹಂತವಾಗಿ ಕಲಿಯುವಂತೆ ಮುನ್ನಡೆಸಬೇಕು.

ಮಾನಸಿಕ ಹಾಗೂ ದೈಹಿಕ ಸವಾಲುಗಳನ್ನೆದುರಿಸುತ್ತಿರುವ ಮಕ್ಕಳಿಗೆ ವಿಶೇಷ ಶಾಲೆಗಳಲ್ಲಿಯೂ ಕಲಿಸಬಹುದು, ಸಂಯೋಜಿತ ತರಗತಿಗಳಲ್ಲಿಯೂ ಕಲಿಸಬಹುದು. ಸಂಯೋಜಿತ ಶಿಕ್ಷಣವು ಮಕ್ಕಳ ನಿರ್ದಿಷ್ಟ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸುತ್ತದೆ. ಹೊಂದಾಣಿಕೆಯ ಸಮಸ್ಯೆಗಳನ್ನು ನೀಗಿಸಲು ಸಹಾಯ ಮಾಡುತ್ತದೆ ಮತ್ತು ಇಂತಹ ಮಕ್ಕಳಲ್ಲಿ ಅಗತ್ಯ ಕೌಶಲಗಳನ್ನು ಬೆಳೆಸುತ್ತದೆ. ಸಮಸ್ಯೆಗಳುಳ್ಳ ಮಕ್ಕಳಿಗೆ ಸಂಯೋಜಿತ ಶಿಕ್ಷಣ ಒದಗಿಸುವುದಕ್ಕಾಗಿ ಇತ್ತೀಚೆಗೆ ವಿವಿಧ ನವೀನ ವಿಧಾನಗಳನ್ನು ಬಳಸಲಾಗುತ್ತಿದೆ. ಅವು ಯಾವುವೆಂದರೆ – ಸಹಪಾಠಿಗಳನ್ನು ಶಿಕ್ಷಕರಂತೆ ಬಳಸಿ ಸಣ್ಣಗುಂಪುಗಳಲ್ಲಿ ಬೋಧಿಸುವುದು, ಪ್ರಭುತ್ವ ಕಲಿಕೆಯನ್ನು ಅಳವಡಿಸುವುದು, ಕಾರ್ಯ ವಿಶ್ಲೇಷಣಾ ತಂತ್ರಗಳು, ಸಂಪನ್ಮೂಲ ಕೊಠಡಿಗಳನ್ನು ಬಳಸುವುದು, ಸಂಪನ್ಮೂಲ ಶಿಕ್ಷಕರ ಸಾಮರ್ಥ್ಯಗಳು, ಕಾರ್ಯಕ್ರಮಾನ್ವಯ ಸಾಮಗ್ರಿಗಳು, ಸೂಕ್ಷ್ಮ ಗಣಕಯಂತ್ರಗಳ ಬಳಕೆ ಮತ್ತು ಸಾಮಾನ್ಯ ತರಗತಿ ಶಿಕ್ಷಕರನ್ನು ಪುನಶ್ಚೇತನಗೊಳಿಸಿ, ತಮ್ಮ ಸಾಮಾನ್ಯ ತರಗತಿಗಳಲ್ಲಿ ದೈಹಿಕ ಮತ್ತು ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ಸಮನ್ವಯಗೊಳಿಸಲು ಅಗತ್ಯವಾದ ಪ್ರಾಯೋಗಿಕ ಕೌಶಲಗಳನ್ನು ಕಲಿಸಲಾಗುತ್ತಿದೆ.

********

## ಅಭ್ಯಾಸ ಪ್ರಶ್ನೆಗಳು

### I. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ವಾಕ್ಯದಲ್ಲಿ ಉತ್ತರಿಸಿ.

1. ಸಂಯೋಜನಾ ಶಿಕ್ಷಣ ಎಂದರೇನು?
2. ಶ್ರವಣ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
3. ದೃಷ್ಟಿ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
4. ಮಾನಸಿಕ ಸವಾಲುಗಳುಳ್ಳ ಮಕ್ಕಳೆಂದರೆ ಯಾರು?
5. ಕಲಿಕಾ ನ್ಯೂನತೆ ಎಂದರೇನು?
6. ಡಿಸ್ಲೆಕ್ಸಿಯಾ ಎಂದರೇನು?
7. ಡಿಸ್‌ಕ್ಯಾಲ್ಕ್ಯುಲಿಯಾ ಯಾವ ದೌರ್ಬಲ್ಯವನ್ನು ಸೂಚಿಸುತ್ತದೆ?
8. ಡಿಸ್‌ಗ್ರಾಫಿಯಾ ಯಾವ ದೌರ್ಬಲ್ಯವನ್ನು ಸೂಚಿಸುತ್ತದೆ ?

### II. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ.

1. ಸಂಪ್ರದಾಯಿಕ ಮತ್ತು ಸಂಯೋಜಿತ ಶಿಕ್ಷಣ ಮಾರ್ಗಗಳ ಎರಡು ವ್ಯತ್ಯಾಸಗಳನ್ನು ಬರೆಯಿರಿ.
2. ದೃಷ್ಟಿ ದೋಷಗಳುಳ್ಳ ಮಕ್ಕಳ ದೃಷ್ಟಿ ತೀಕ್ಷ್ಣತೆಯ ಮಟ್ಟವನ್ನು ತಿಳಿಸಿ.
3. ಕಲಿಕಾ ನ್ಯೂನತೆಯ ಎರಡು ವಿಧಗಳನ್ನು ತಿಳಿಸಿ.
4. ಮಾನಸಿಕ ಸವಾಲುಗಳುಳ್ಳ ಮಕ್ಕಳ ವ್ಯಕ್ತಿತ್ವದ ಮೇಲೆ ಮನೋವೈಜ್ಞಾನಿಕ ಪರಿಣಾಮ ತಿಳಿಸಿ.
5. ಮೂಳೆ ಕೀಲು ಸವಾಲುಗಳುಳ್ಳ ಮಕ್ಕಳಿಗೆ ಸಂಬಂಧಿಸಿದಂತೆ ಶಿಕ್ಷಕರ ಪಾತ್ರವನ್ನು ತಿಳಿಸಿ.
6. ದೃಷ್ಟಿ ಸವಾಲುಗಳುಳ್ಳ ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕನ ಪಾತ್ರ ತಿಳಿಸಿ.
7. ಮಾನಸಿಕ ಸವಾಲುಗಳುಳ್ಳ ಮಕ್ಕಳನ್ನು ವರ್ಗೀಕರಿಸಿ.

### III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಒಂದು ಪುಟ ಮೀರದಂತೆ ಉತ್ತರಿಸಿ.

1. ಸಂಪ್ರದಾಯಿಕ ಮತ್ತು ಸಂಯೋಜಿತ ಶಿಕ್ಷಣ ಮಾರ್ಗಗಳ ವ್ಯತ್ಯಾಸಗಳನ್ನು ಬರೆಯಿರಿ.
2. ಸಂಯೋಜನಾ ಶಿಕ್ಷಣದ ಮಹತ್ವವನ್ನು ವಿವರಿಸಿರಿ.
3. ವಿಶೇಷ ಅಗತ್ಯತೆಯ ಮಕ್ಕಳನ್ನು ವರ್ಗೀಕರಿಸಿ.
4. ದೃಷ್ಟಿ ಸವಾಲುಗಳುಳ್ಳ ಮಕ್ಕಳ ಲಕ್ಷಣಗಳನ್ನು ಪಟ್ಟಿ ಮಾಡಿ.
5. ದೃಷ್ಟಿ ಸವಾಲುಗಳುಳ್ಳ ಮಕ್ಕಳಿಗೆ ಒದಗಿಸುವ ಶೈಕ್ಷಣಿಕ ಕ್ರಮಗಳನ್ನು ವಿವರಿಸಿ
6. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣಗಳನ್ನು ತಿಳಿಸಿ.
7. ಶ್ರವಣ ಸಾಮರ್ಥ್ಯದ ಸವಾಲುಗಳುಳ್ಳ ಮಕ್ಕಳ ಶೈಕ್ಷಣಿಕ ಕ್ರಮಗಳನ್ನು ವಿವರಿಸಿ
8. ಮಾನಸಿಕ ಸವಾಲುಗಳುಳ್ಳ ಮಕ್ಕಳ ಲಕ್ಷಣಗಳನ್ನು ಬರೆಯಿರಿ.
9. ಮಾನಸಿಕ ಸವಾಲುಗಳುಳ್ಳ ಮಕ್ಕಳಿಗೆ ಒದಗಿಸುವ ಶೈಕ್ಷಣಿಕ ಕ್ರಮಗಳನ್ನು ವಿವರಿಸಿ

### IV. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೆ ಎರಡು ಪುಟಗಳು ಮೀರದಂತೆ ಉತ್ತರಿಸಿ.

1. ಮೂಳೆ ಕೀಲು ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣಗಳು ಹಾಗೂ ಅವರಿಗೆ ಒದಗಿಸುವ ಶೈಕ್ಷಣಿಕ ಕ್ರಮಗಳನ್ನು ಕುರಿತು ಬರೆಯಿರಿ.
2. ಕಲಿಕಾ ಸವಾಲುಗಳುಳ್ಳ ಮಕ್ಕಳ ಗುಣಲಕ್ಷಣಗಳು ಹಾಗೂ ಅವರಿಗೆ ಒದಗಿಸುವ ಶೈಕ್ಷಣಿಕ ಕ್ರಮಗಳನ್ನು ವಿವರಿಸಿರಿ.

*******

ಘಟಕ–5

# ಶಿಕ್ಷಣದಲ್ಲಿ ಪ್ರಚಲಿತ ಒಲವುಗಳು

# Current Trends in Education

**5.1 ಮಾನವ ಹಕ್ಕುಗಳ ಶಿಕ್ಷಣ**

**5.1.1 ಮಾನವ ಹಕ್ಕುಗಳು**– ಪರಿಕಲ್ಪನೆ– ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ(UDHR).

**5.1.2 ಮಾನವ ಹಕ್ಕುಗಳ ಶಿಕ್ಷಣ**– ಪರಿಕಲ್ಪನೆ–ಮಹತ್ವ–ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ(NHRC).

**5.2 ಮಕ್ಕಳ ಹಕ್ಕುಗಳು**– ಪರಿಕಲ್ಪನೆ– ಮಕ್ಕಳ ಹಕ್ಕುಗಳ ಒಡಂಬಡಿಕೆ–ಪ್ರಮುಖ ಹಕ್ಕುಗಳು–ಮಹತ್ವ–ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ(NCPCR).

**5.3 ಶಿಕ್ಷಣ ಹಕ್ಕು ಕಾಯ್ದೆ (RTE)–2009** – ಪರಿಕಲ್ಪನೆ–ಮುಖ್ಯಾಂಶಗಳು.

**5.4. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (NCF–2005)**–ಐತಿಹಾಸಿಕ ಹಿನ್ನೆಲೆ, ಮಾರ್ಗದರ್ಶಿ ತತ್ವಗಳು–ಮುಖ್ಯ ಲಕ್ಷಣಗಳು ಹಾಗೂ ಪ್ರಮುಖ ಶಿಫಾರಸ್ಸುಗಳು.

**5.5 ಮಹಿಳಾ ಸಬಲೀಕರಣ**– ಪರಿಕಲ್ಪನೆ– ಅವಶ್ಯಕತೆ– ಕಾರ್ಯತಂತ್ರಗಳು– ರಾಷ್ಟ್ರೀಯ ಮಹಿಳಾ ಆಯೋಗ (NWC).

**5.6 ಉದಾರೀಕರಣ, ಖಾಸಗೀಕರಣ, ಜಾಗತೀಕರಣ (LPG)**-ಪರಿಕಲ್ಪನೆ–ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವ.

**5.7 ಜೀವನ ಕೌಶಲಗಳು**–ಪರಿಕಲ್ಪನೆ ಮತ್ತು ಮಹತ್ವ–WHO-1997 ಸೂಚಿಸಿದ ಜೀವನ ಕೌಶಲಗಳು.

********************

**ಉದ್ದೇಶಗಳು:**

ಈ ಘಟಕದ ಬೋಧನೆಯ ನಂತರ ವಿದ್ಯಾರ್ಥಿಗಳು,

- ಮಾನವ ಹಕ್ಕುಗಳ ಹಾಗೂ ಮಕ್ಕಳ ಹಕ್ಕುಗಳ ಪರಿಕಲ್ಪನೆಗಳನ್ನು ವಿವರಿಸುವರು.
- ಸಾರ್ವತ್ರಿಕ ಘೋಷಣೆಯಾದ ಮಾನವ ಹಕ್ಕುಗಳನ್ನು ಪಟ್ಟಿ ಮಾಡುವರು.
- ಮಕ್ಕಳ ಹಕ್ಕುಗಳ ಒಡಂಬಡಿಕೆಯಲ್ಲಿಯ ಪ್ರಮುಖ ಹಕ್ಕುಗಳನ್ನು ಪಟ್ಟಿ ಮಾಡುವರು.
- NHRC, NCPCR, NWC ಇವುಗಳ ಕಾರ್ಯಗಳನ್ನು ಪಟ್ಟಿ ಮಾಡುವರು.
- RTE ಮತ್ತು NCF ಗಳ ಮುಖ್ಯಾಂಶಗಳನ್ನು ವಿವರಿಸುವರು.
- ಮಹಿಳಾ ಸಬಲೀಕರಣದ ಪರಿಕಲ್ಪನೆ, ಅವಶ್ಯಕತೆ ಹಾಗೂ ಕಾರ್ಯತಂತ್ರಗಳನ್ನು ವಿವರಿಸುವರು.
- ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣಗಳ ಪರಿಕಲ್ಪನೆಗಳನ್ನು ಸ್ಮರಿಸುವರು.
- ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವವನ್ನು ವಿವರಿಸುವರು.
- ವಿವಿಧ ಜೀವನ ಕೌಶಲಗಳನ್ನು ತಮ್ಮ ಸಮಸ್ಯಾ ಪರಿಹಾರದಲ್ಲಿ ಬಳಸಿಕೊಳ್ಳುವರು.
- ಜೀವನದ ವಿವಿಧ ಸನ್ನಿವೇಶಗಳಿಗೆ ಅಗತ್ಯವಾದ ಜೀವನ ಕೌಶಲಗಳನ್ನು ರೂಢಿಸಿಕೊಳ್ಳುವರು.

***********

*"ಮಕ್ಕಳ ಮತ್ತು ಯುವಕರ ಶಿಕ್ಷಣದ ಬಗ್ಗೆ ಮುನ್ನೋಟವಿಲ್ಲದ ಹಾಗೂ ಅದಕ್ಕಾಗಿ ತಯಾರಾಗದ ಸಮಾಜಕ್ಕೆ ಸಾವು ಶತಸಿದ್ಧ"* – ಗಾಂಧೀಜಿ

ಘಟಕ–5

# ಶಿಕ್ಷಣದಲ್ಲಿ ಪ್ರಚಲಿತ ಒಲವುಗಳು
# Current Trends in Education

ಶಿಕ್ಷಣ ಜೀವನ ಪರ್ಯಂತ ನಡೆಯುವ ಪ್ರಕ್ರಿಯೆಯಾಗಿದ್ದು, ವ್ಯಕ್ತಿಯ ಸರ್ವತೋಮುಖ ವಿಕಾಸಕ್ಕೆ ಸಹಾಯ ಮತ್ತು ಮಾರ್ಗದರ್ಶನ ಮಾಡುವ ಪ್ರಕ್ರಿಯೆಯಾಗಿದೆ. ಇದು ಜೈವಿಕ ಮಗುವನ್ನು ಸಾಮಾಜಿಕ ಮಗುವನ್ನಾಗಿ ಪರಿವರ್ತಿಸುವ ಉದ್ದೇಶವನ್ನು ಹೊಂದಿದೆ. ಶಿಕ್ಷಣ ಮಾನವನ ಮೂಲಭೂತ ಹಕ್ಕಾಗಿದ್ದು, ಮಾನವ ಸಂಪನ್ಮೂಲ ಅಭಿವೃದ್ಧಿಯ ಕಾರ್ಯತಂತ್ರ ಎಂದು ಪರಿಗಣಿಸಲಾಗಿದೆ. ಶಿಕ್ಷಣವು ಮಾನವ ಸಂಪನ್ಮೂಲದ ಅಭಿವೃದ್ಧಿ ಹಾಗೂ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದೆ. ರಾಷ್ಟ್ರೀಯ ಉದ್ಯಮ ಅಭಿವೃದ್ಧಿಯ ಯಶಸ್ಸು, ಜ್ಞಾನದ ಕ್ರೋಢೀಕರಣ ಹಾಗೂ ಬಳಕೆಯ ಮೇಲೆ ಅವಲಂಬಿಸಿದೆ. ಆದುದರಿಂದ ವಿದ್ಯಾರ್ಥಿಗಳು ಮತ್ತು ಇತರ ವ್ಯಕ್ತಿಗಳಲ್ಲಿ ಶಿಕ್ಷಣದಲ್ಲಿಯ ಪ್ರಚಲಿತ ಒಲವುಗಳಾದ ಮಾನವಹಕ್ಕುಗಳು, ಮಕ್ಕಳ ಹಕ್ಕುಗಳು, ಮಕ್ಕಳ ಶಿಕ್ಷಣದ ಹಕ್ಕುಗಳು, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಮಹಿಳಾ ಸಬಲೀಕರಣ, ಜಾಗತೀಕರಣ, ಜೀವನ ಕೌಶಲಗಳು ಮುಂತಾದವುಗಳ ಬಗ್ಗೆ ತಿಳಿವಳಿಕೆ ಮೂಡಿಸುವ ಅಗತ್ಯವಿದೆ. ಆ ಮೂಲಕ ಅವರಲ್ಲಿ ಮಾನವತೆ, ಏಕತೆ, ಮಹಿಳೆ ಮತ್ತು ಮಕ್ಕಳ ಕುರಿತು ಗೌರವ, ಜೀವನ ಕೌಶಲಗಳ ಬಗ್ಗೆ ಧನಾತ್ಮಕ ಮನೋಭಾವ ಬೆಳೆಸಿ, ಜಾಗತಿಕ ವಿದ್ಯಮಾನಗಳ ಕುರಿತು ತಿಳಿವಳಿಕೆ ನೀಡುವ ಮೂಲಕ ಅಂತರ್‌ರಾಷ್ಟ್ರೀಯ ತಿಳಿವಳಿಕೆ ಮತ್ತು ವಿಶ್ವಶಾಂತಿ ಕುರಿತು ಜಾಗೃತಿ ಮೂಡಿಸಬಹುದಾಗಿದೆ. ಈ ಅರ್ಥದಲ್ಲಿ ವಿದ್ಯಾರ್ಥಿಗಳು ಹಾಗೂ ಯುವಕರಲ್ಲಿ ಶಿಕ್ಷಣದ ಪ್ರಚಲಿತ ಒಲವುಗಳ ಬಗ್ಗೆ ಜಾಗೃತಿ ಮೂಡಿಸುವುದು ಇಂದಿನ ಅಗತ್ಯವಾಗಿದೆ.

## 5.1 ಮಾನವ ಹಕ್ಕುಗಳ ಶಿಕ್ಷಣ (Human Rights Education)




ಮಾನವ ತನ್ನ ಬದುಕಿನ ಎಲ್ಲ ಹಂತಗಳಲ್ಲೂ ಹಾಗೂ ಕ್ಷೇತ್ರಗಳಲ್ಲೂ ಸಂತೋಷ ಹಾಗೂ ಸಂತೃಪ್ತಿಯನ್ನು ಕಾಣಬಯಸುತ್ತಾನೆ. ಇವುಗಳು ಇಲ್ಲದಿದ್ದಲ್ಲಿ ಬದುಕು ಅರ್ಥವಿಲ್ಲದ್ದು. ಸುಖ ಸಂತೋಷ ಹಾಗೂ ಮಾನಸಿಕ ನೆಮ್ಮದಿ ಇವು ಮಾನವನ ಸ್ವಾಭಾವಿಕ ಹಕ್ಕುಗಳಾಗಿದ್ದು, ಈ ಹಕ್ಕುಗಳನ್ನು ಪಡೆಯಲು ಮಾನವ ಎರಡು ಪ್ರಮುಖ ಜವಾಬ್ದಾರಿಗಳನ್ನು ನಿರ್ವಹಿಸಬೇಕಾಗುತ್ತದೆ. ಮೊದಲನೆಯದಾಗಿ ತನ್ನನ್ನು ತಾನು ಗೌರವದಿಂದ ಕಾಣುವುದು, ಇದನ್ನೇ ಆತ್ಮಗೌರವ ಎನ್ನುವರು. ಎರಡನೆಯದಾಗಿ ಮತ್ತೊಬ್ಬರನ್ನು ಗೌರವದಿಂದ ಕಾಣುವುದು. ಒಂದು ವೇಳೆ ತನ್ನನ್ನು ತಾನು ಹಾಗೂ ಇತರರನ್ನು ಗೌರವಿಸದಿದ್ದರೆ ಮಾನಸಿಕ ಉದ್ವೇಗ, ಒತ್ತಡ ಮತ್ತು ಘರ್ಷಣೆಗಳಿಂದ ಬಳಲಬೇಕಾಗುತ್ತದೆ. ಪ್ರತಿಯೊಬ್ಬರು ಮತ್ತೊಬ್ಬರ ಹಕ್ಕುಗಳನ್ನು ಗೌರವಿಸಿದಾಗ ಮಾತ್ರ ಜಾಗತಿಕ ಸಾಮರಸ್ಯ ಕಾಣಲು ಸಾಧ್ಯವಾಗುವದು. ಮಾನವರೆಲ್ಲರೂ ಒಂದೇ ವರ್ಗದವರೆಂಬುದನ್ನು ಪ್ರತಿಯೊಬ್ಬರೂ ಮನಗಾಣಬೇಕು. ಸಮಾಜದ ಪ್ರತಿಯೊಬ್ಬ ಸದಸ್ಯರೂ ಒಬ್ಬರಿಗೊಬ್ಬರು ಅವಲಂಬಿತರಾಗಿದ್ದು, ಸಮಾನ ಹಕ್ಕುಗಳನ್ನು ಹೊಂದಿರುವರು. ಆದುದರಿಂದ ಮಾನವರು ಪರಸ್ಪರ ಗೌರವಭಾವನೆಯಿಂದ ನೋಡುವದು ಎಂದರೆ ಮಾನವ ಘನತೆಯ ರಕ್ಷಣೆ ಎಂದರ್ಥ. ಇದೇ ಮಾನವ ಹಕ್ಕುಗಳ ಪರಿಕಲ್ಪನೆಯ ಮೂಲಾಧಾರವಾಗಿದೆ.

ಪ್ರಾಚೀನ ಕಾಲದ ಚಕ್ರವರ್ತಿಗಳಿಂದ ಆಧುನಿಕ ಕಾಲದಲ್ಲಿಯ ಅನೇಕ ಆಡಳಿತಗಾರರು ಜನರನ್ನು ಹಾಗೂ ಜನರ ಹಕ್ಕುಗಳನ್ನು ಉದಾಸೀನತೆ ಮತ್ತು ಅಗೌರವದಿಂದ ಕಂಡಿರುವುದು ಅನೇಕ ಯದ್ಧಗಳು ಹಾಗೂ ಕ್ರಾಂತಿಗಳಿಗೆ ಕಾರಣವಾಗಿದೆ. ಇದು ಮನುಕುಲಕ್ಕೆ ಅಸಂಖ್ಯಾತ ತೊಂದರೆಗಳನ್ನುಂಟು ಮಾಡಿ, ಸಾಮಾನ್ಯ ವ್ಯಕ್ತಿಯ ಮನಸ್ಸಿನಲ್ಲಿ ಅಸ್ತಿತ್ವದ ಬಗ್ಗೆ ಭಯ ಮೂಡಿಸಿತು. ಇದಕ್ಕಾಗಿ ಭಯದಿಂದ ತಮ್ಮ ರಾಜರುಗಳಿಗೆ ಪ್ರೀತಿ–ವಾತ್ಸಲ್ಯದ ಬದಲಾಗಿ ಗೌರವ ಮತ್ತು ಬೆಂಬಲ ತೋರಿಸಿದರು. ಇದು ಆಡಳಿತಗಾರರು ಮತ್ತು ಜನರ ಮಧ್ಯೆ ಅಂತರವನ್ನುಂಟು ಮಾಡಿತು. ಆಡಳಿತಾಧಿಕಾರಿಗಳ ನಿರಂಕುಶ ಮಹತ್ವಾಕಾಂಕ್ಷೆಗಳು ಅಂತಿಮವಾಗಿ ಪ್ರಜಾಪ್ರಭುತ್ವ ಮತ್ತು ಮಾನವಹಕ್ಕುಗಳ ಬೆಳವಣಿಗೆಗೆ ಕಾರಣವಾಯಿತು. ಪ್ರತಿಯೊಬ್ಬ ವ್ಯಕ್ತಿಗೆ ಜೀವಿಸಲು ನೀರು, ಗಾಳಿ, ಆಹಾರ ಹೇಗೆ ಅವಶ್ಯಕವಾಗಿವೆಯೋ ಹಾಗೆ ಸಮಾಜ ಜೀವಿಯಾದ ಮಾನವನು ಬದುಕಿ ಬಾಳಲು ಹಕ್ಕುಗಳು ಅಷ್ಟೇ ಮುಖ್ಯವಾಗಿರುತ್ತವೆ. ಸಮಾಜದಲ್ಲಿ ತನ್ನ ಬೇಕು ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಹಾಗೂ ಎಲ್ಲರೊಡನೆ ಸಮಾನವಾಗಿ ಬದುಕಿ ಬಾಳಲು, ಹಕ್ಕುಗಳು ಅವಶ್ಯಕವಾಗಿವೆ.

### 5.1.1 ಮಾನವ ಹಕ್ಕುಗಳ ಪರಿಕಲ್ಪನೆ (Concept of Human Rights)

ಎರಡನೆಯ ಜಾಗತಿಕ ಸಮರದಲ್ಲಿ ನಡೆದ ಸಾಮೂಹಿಕ ಕಗ್ಗೊಲೆಯಿಂದ ತತ್ತರಿಸಿದ ಮಾನವ ಜನಾಂಗವನ್ನು ಸಂತೈಸಲು 10ನೇ ಡಿಸೆಂಬರ 1948 ರಂದು ವಿಶ್ವ ಸಂಸ್ಥೆಯ ಮಹಾಅಧಿವೇಶನದಲ್ಲಿ ಘೋಷಣೆಯಾದ ಚಾರಿತ್ರಿಕ ದಾಖಲೆಯೇ **ಮಾನವ ಹಕ್ಕುಗಳಾಗಿವೆ.**

"ತಾಯಿಯ ಗರ್ಭದಲ್ಲಿ ಜನ್ಮ ತಳೆದ ಕ್ಷಣದಿಂದಲೇ ಅಂತರ್ಗತವಾಗಿರುವ ಪ್ರತಿಯೊಬ್ಬನ ಮೂಲಭೂತ ಹಕ್ಕುಗಳೇ **ಮಾನವ ಹಕ್ಕುಗಳಾಗಿವೆ.**"

"ಯಾವ ಹಕ್ಕುಗಳಿಲ್ಲದೇ ಮಾನವರು ಘನತೆ ಗೌರವಗಳಿಂದ ಬದುಕಲಾರರೋ ಆ ಹಕ್ಕುಗಳೇ **ಮಾನವ ಹಕ್ಕುಗಳು**".

"ಒಬ್ಬ ವ್ಯಕ್ತಿ ಮಾನವ ಜೀವಿಯಾಗಿರುವ ಸರಳ ಕಾರಣಕ್ಕೆ ಅವನು ಹೊಂದಿರುವ ಹಕ್ಕುಗಳನ್ನು **ಮಾನವ ಹಕ್ಕುಗಳು** ಎನ್ನುವರು" **– ಜ್ಯಾಕ್ ಡೊನೆಲಿ**

"ಸಂವಿಧಾನದ ಮೂಲಕ ಖಾತರಿಪಡಿಸಿದ ಅಥವಾ ಅಂತರಾಷ್ಟ್ರೀಯ ಸಾರ್ವತ್ರಿಕ ಘೋಷಣೆಯಲ್ಲಿ ಒಳಗೊಂಡಿರುವ ಮತ್ತು ಭಾರತದ ನ್ಯಾಯಾಲಯಗಳ ಮೂಲಕ ಜಾರಿಗೊಳಿಸಲ್ಪಡುವ ಸ್ವಾತಂತ್ರ್ಯ, ಸಮಾನತೆ, ಗೌರವಗಳಂತ ವ್ಯಕ್ತಿಯ ಜೀವನಕ್ಕೆ ಸಂಬಂಧಿಸಿದ ಹಕ್ಕುಗಳನ್ನು **ಮಾನವ ಹಕ್ಕುಗಳೆನ್ನುವರು**". – **ಮಾನವ ಹಕ್ಕುಗಳ ರಕ್ಷಣಾ ಕಾಯ್ದೆ–1993**

"ಯಾವ ಹಕ್ಕುಗಳು ನಮ್ಮ ಸ್ವಭಾವದಲ್ಲಿಯೇ ಅಂತರ್ಗತವಾಗಿಯೋ ಮತ್ತು ಆ ಹಕ್ಕುಗಳಿರದೇ ನಾವು ಮಾನವರಾಗಿ ಜೀವಿಸಲು ಸಾಧ್ಯವಿಲ್ಲವೋ ಆ ಹಕ್ಕುಗಳೇ **ಮಾನವ ಹಕ್ಕಗಳು.**" **–ಕೆ.ಎಚ್. ಪ್ರಭು**

"ರಾಷ್ಟ್ರೀಯತೆ, ಲಿಂಗ, ವರ್ಣ, ಧರ್ಮ, ಭಾಷೆ, ಅಥವಾ ಸಾಮಾಜಿಕ ಸ್ಥಾನಮಾನಗಳ ಭೇದಭಾವವಿಲ್ಲದೇ ಪ್ರತಿಯೊಬ್ಬರೂ ಹೊಂದಬೇಕಾದ ಮೂಲಹಕ್ಕುಗಳನ್ನು ಮತ್ತು ಸ್ವಾತಂತ್ರ್ಯವನ್ನು **ಮಾನವ ಹಕ್ಕುಗಳು** ಎನ್ನುವರು."

ಅಂತಿಮವಾಗಿ ಮಾನವರ ಸರ್ವತೋಮುಖ ಬೆಳವಣಿಗೆಗೆ ಸಹಾಯಕವಾಗುವ ರೀತಿಯಲ್ಲಿ ಸಮಾಜ ಅಥವಾ ಸರಕಾರದ ಸ್ವಭಾವದಲ್ಲಿ ಅಂತರ್ಗತವಾಗಿರುವ ಹಾಗೂ ಅವಿಲ್ಲದೇ ಅವರು ಮಾನವರಾಗಿ ಬದುಕಲು ಸಾಧ್ಯವಿಲ್ಲವೋ ಆ ಎಲ್ಲ ಹಕ್ಕುಗಳೇ **ಮಾನವ ಹಕ್ಕುಗಳು.**

### ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (Universal Declaration of Human Rights-(UDHR)

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ ಎರಡನೆಯ ಜಾಗತಿಕ ಮಹಾಯುದ್ದದ ಭಯಾನಕತೆಯ ನೇರ ಪರಿಣಾಮ. ಈ ಸಮರದಿಂದಾದ ಅಪಾರ ನೋವು ಮತ್ತು ನಷ್ಟದಿಂದಾಗಿ ಅಭದ್ರತೆ, ಭೇದಭಾವ, ದಬ್ಬಾಳಿಕೆ ನ್ಯಾಯಯುತವಲ್ಲದ ಸಾಮಾಜಿಕ ಹಾಗೂ ಆರ್ಥಿಕ ಸನ್ನಿವೇಶಗಳು ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟಗಳೆರಡರಲ್ಲೂ ನೆಲೆಯೂರಿತ್ತು. ಇದನ್ನು ಹೋಗಲಾಡಿಸಲು 1941ರ ಜನೇವರಿ 6 ರಂದು ಅಮೇರಿಕಾದ ಅಧ್ಯಕ್ಷ ರೂಸವೆಲ್ಟ್ ಅವರು ಕಾಂಗ್ರೇಸ್ಸನ್ನು ಉದ್ದೇಶಿಸಿ ಮಾಡಿದ ಭಾಷಣ ಮಾನವ ಹಕ್ಕುಗಳ ಬೆಳವಣಿಗೆಯಲ್ಲಿ ಒಂದು ಮೈಲಿಗಲ್ಲಾಗಿದೆ. ಎರಡನೆಯ ಮಹಾಯುದ್ಧದ ಪರಿಣಾಮವನ್ನು ಅರಿತು ವಿಶ್ವದಲ್ಲಿ ಶಾಂತಿ ಕಾಪಾಡಿಕೊಂಡು ಹೋಗಲು 24ನೇ ಅಕ್ಟೋಬರ 1945 ರಂದು ವಿಶ್ವಸಂಸ್ಥೆಯನ್ನು ಸ್ಥಾಪನೆ ಮಾಡಲಾಯಿತು. ಜಗತ್ತಿನ ಎಲ್ಲ ರಾಷ್ಟ್ರಗಳ ಪರವಾಗಿ ಮಾನವ ಹಕ್ಕುಗಳ ಕರಡು ತಯಾರಿಸಿ ವಿಶ್ವ ಸಂಸ್ಥೆಗೆ ಒಪ್ಪಿಸಲು 18 ಜನ ಸದಸ್ಯರನ್ನು ಹೊಂದಿದ ಸಮಿತಿಯನ್ನು ರೂಪಿಸಿ ಅಧ್ಯಕ್ಷರನ್ನಾಗಿ ಅಮೇರಿಕಾ ಅಧ್ಯಕ್ಷರ ಪತ್ನಿಯಾದ **ಇಲೆನಾರ್ ರೂಸವೆಲ್ಟ್‌ರನ್ನು** ನೇಮಿಸಿತು. 1948ರಲ್ಲಿ ಸಮಿತಿಯು ಮಾನವ ಹಕ್ಕುಗಳ ಕರಡು ತಯಾರಿಸಿ ವಿಶ್ವ ಸಂಸ್ಥೆಗೆ ಒಪ್ಪಿಸಿತು. **ವಿಶ್ವಸಂಸ್ಥೆಯು ಡಿಸೆಂಬರ 10ನೇ 1948** ರಂದು ಸರ್ವಾನುಮತದಿಂದ ಅಂಗೀಕರಿಸಿ ತನ್ನ ಮಹಾ ಅಧಿವೇಶನದಲ್ಲಿ "**ಮಾನವ ಹಕ್ಕುಗಳ**"ನ್ನು ಘೋಷಣೆ ಮಾಡಿತು. ವಿಶ್ವ ಸಂಸ್ಥೆಯ ಈ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯು ಮನುಕುಲದ ಇತಿಹಾಸದಲ್ಲಿ ಒಂದು ಮೈಲುಗಲ್ಲಾಗಿದೆ. ಇದರಿಂದ ಮಾನವನು ಶೋಷಣೆ ಮುಕ್ತ ಜೀವನ ಸಾಗಿಸಲು ಮತ್ತು ಬದುಕಲು ಅವಕಾಶ ದೊರೆತಂತಾಯಿತು. ಈ ದಿನದ ಸ್ಮರಣಾರ್ಥವಾಗಿ **ಡಿಸೆಂಬರ 10 ನ್ನು ಅಂತರಾಷ್ಟ್ರೀಯ ಮಾನವ ಹಕ್ಕುಗಳ ದಿನ**ವಾಗಿ ಆಚರಿಸಲಾಗುತ್ತಿದೆ.

1993 ಜೂನ್‌ನಲ್ಲಿ ಆಸ್ಟ್ರೀಯಾದ ವಿಯೆನ್ನಾದಲ್ಲಿ ನಡೆದ ವಿಶ್ವ ಅಧಿವೇಶನದಲ್ಲಿ ಮಾನವ ಹಕ್ಕುಗಳ ಬಗ್ಗೆ ಮರು ಚರ್ಚೆ ನಡೆಯಿತು. ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳಿಂದ ಒಟ್ಟು 7,000 ಪ್ರತಿನಿಧಿಗಳು ಈ ಸಭೆಯಲ್ಲಿ ಭಾಗವಹಿಸಿದ್ದರು.

ಇದೇ ಅಧಿವೇಶನದಲ್ಲಿ, 1995–2004 ರದಶಕವನ್ನು ಮಾನವ ಹಕ್ಕುಗಳ ದಶಕವನ್ನಾಗಿ ಆಚರಿಸಲು ನಿರ್ಧರಿಸಲಾಯಿತು. ಭಾರತವನ್ನೊಳಗೊಂಡಂತೆ ಪ್ರಪಂಚದ ಹಲವಾರು ರಾಷ್ಟ್ರಗಳು ಮಾನವ ಹಕ್ಕುಗಳ ಸಂಬಂಧವಾಗಿ ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ಇದರ ತತ್ವಗಳನ್ನು ವಿಶ್ವಸಂಸ್ಥೆಯ 185 ಸದಸ್ಯ ರಾಷ್ಟ್ರಗಳು ತಮ್ಮ ಸಂವಿಧಾನಗಳಲ್ಲಿ ಅಳವಡಿಸಿಕೊಂಡಿವೆ.

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಪೀಠಿಕೆಯಲ್ಲಿ **"ಮಾನವ ಘನತೆ, ಸಾರ್ಥಕತೆ, ಹಾಗೂ ಮಾನವನ ಮೂಲಭೂತ ಹಕ್ಕುಗಳಲ್ಲಿ ನಂಬಿಕೆಯನ್ನು ಪುನಃ ಸ್ಥಾಪಿಸುವುದಕ್ಕಾಗಿ"** ಎಂದು ಪ್ರಸ್ತಾಪಿಸಲಾಗಿದೆ. ಘೋಷಣೆಯಾದ 30 ಮಾನವ ಹಕ್ಕುಗಳನ್ನು ನಾಲ್ಕು ರೀತಿಯಾಗಿ ವಿಂಗಡಿಸಲಾಗಿದೆ. 1 ರಿಂದ 11 ರವರೆಗಿನ ಹಕ್ಕುಗಳು **ನಾಗರಿಕ**, 12 ರಿಂದ 17 ರವರೆಗಿನ ಹಕ್ಕುಗಳು **ಸಾಮಾಜಿಕ**, 18 ರಿಂದ 21 ರವರೆಗಿನ ಹಕ್ಕುಗಳು **ರಾಜಕೀಯ,** 22 ರಿಂದ 27 ರವರೆಗಿನ ಹಕ್ಕುಗಳು **ಆರ್ಥಿಕ** ಹಕ್ಕುಗಳಾಗಿದ್ದರೆ, 28 ರಿಂದ 30 ರವರೆಗಿನ ಹಕ್ಕುಗಳು ಅವುಗಳ **ಅನುಷ್ಠಾನಕ್ಕೆ** ಸಂಬಂಧಿಸಿವೆ.

## ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿನ ಹಕ್ಕುಗಳು (Rights in UDHR)

### ನಾಗರಿಕ ಹಕ್ಕುಗಳು(1 ರಿಂದ 11)

1. ಎಲ್ಲ ಮಾನವರು ಜನ್ಮತಃ ಸ್ವತಂತ್ರರು ಮತ್ತು ಘನತೆ ಹಾಗೂ ಹಕ್ಕುಗಳ ದೃಷ್ಟಿಯಿಂದ ಸಮಾನರು. ಅವರು ವಿವೇಚನೆ ಆತ್ಮಸಾಕ್ಷಿ ಹೊಂದಿದ್ದು ಪರಸ್ಪರ ಸಹೋದರ ಭಾವನೆಯಿಂದ ವರ್ತಿಸಬೇಕು.
2. ಯಾವುದೇ ರೀತಿಯ ಜನಾಂಗ, ವರ್ಣ, ಲಿಂಗ, ಭಾಷೆ, ಧರ್ಮ, ರಾಜಕೀಯ ಇತರ ಅಭಿಪ್ರಾಯಗಳು, ರಾಷ್ಟ್ರ ಅಥವಾ ಸಾಮಾಜಿಕ ಮೂಲ, ಆಸ್ತಿ, ಜನನ ಅಥವಾ ಸ್ಥಾನಮಾನಗಳ ಭೇದ ಭಾವವಿಲ್ಲದೇ ಎಲ್ಲರೂ ಈ ಘೋಷಣೆ ಅಡಿಯಲ್ಲಿ ತಿಳಿಸಿರುವ ಎಲ್ಲ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಅರ್ಹರು.
3. ಪ್ರತಿಯೊಬ್ಬರಿಗೂ ಜೀವನದಲ್ಲಿ ವ್ಯಕ್ತಿ ಸ್ವಾತಂತ್ರ್ಯ ಹಾಗೂ ಭದ್ರತೆಯ ಹಕ್ಕು ಇದೆ.
4. ಯಾರೊಬ್ಬರೂ ಗುಲಾಮಗಿರಿಯಲ್ಲಿರುವಂತಿಲ್ಲ. ಗುಲಾಮಗಿರಿ ಮತ್ತು ಗುಲಾಮ ವ್ಯಾಪಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.
5. ಯಾರೊಬ್ಬರೂ ಚಿತ್ರಹಿಂಸೆ, ಕ್ರೌರ್ಯ ಹಾಗೂ ಅಮಾನವೀಯ ಶಿಕ್ಷೆಗೆ ಒಳಗಾಗುವಂತಿಲ್ಲ.
6. ಪ್ರತಿಯೊಬ್ಬರಿಗೂ ಕಾನೂನಿನ ದೃಷ್ಟಿಯಲ್ಲಿ ಎಲ್ಲಿಯಾದರೂ ಒಬ್ಬ ವ್ಯಕ್ತಿಯೆಂದು ಗುರುತಿಸಿಕೊಳ್ಳುವ ಹಕ್ಕು ಇದೆ.
7. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸಮಾನರು ಮತ್ತು ಯಾವುದೇ ಭೇದಭಾವವಿಲ್ಲದೆ ಎಲ್ಲರೂ ಕಾನೂನಿನ ರಕ್ಷಕರಾಗಿರುವರು.
8. ಸಮರ್ಥನೀಯವಾದ ನ್ಯಾಯ ವಿಚಾರಣೆಯ ಮೂಲಕ ಪರಿಹಾರ ಕಂಡುಕೊಳ್ಳುವ ಹಕ್ಕು ಎಲ್ಲರಿಗೂ ಇದೆ.
9. ಯಾರೊಬ್ಬರೂ ಕ್ರಮವಲ್ಲದ ಬಂಧನ ಹಾಗೂ ಗಡಿಪಾರಿಗೆ ಒಳಗಾಗುವಂತಿಲ್ಲ.
10. ಯಾವುದೇ ವ್ಯಕ್ತಿ ಕ್ರಿಮಿನಲ್ ಮೊಕದ್ದಮೆಗೆ ಗುರಿಯಾಗಿದ್ದರೆ ನ್ಯಾಯ ಮಂಡಳಿಗಳ ಮೂಲಕ ನ್ಯಾಯಯುತವಾದ ವಿಚಾರಣೆಗೆ ಒತ್ತಾಯಿಸುವ ಹಕ್ಕಿದೆ.
11. ದೋಷಿಯೆಂದು ಆಪಾದಿತನಾಗಿರುವ ವ್ಯಕ್ತಿ ಅವನ ಅಪರಾಧ ಸಾಬೀತಾಗುವವರೆಗೆ ಅವನನ್ನು ನಿರ್ದೋಷಿಯೆಂದೇ ಪರಿಗಣಿಸುವ ಹಕ್ಕಿದೆ.

### ಸಾಮಾಜಿಕ ಹಕ್ಕುಗಳು (12 ರಿಂದ 17)

12. ಯಾರೊಬ್ಬರ ಗೌಪ್ಯತೆ, ಕುಟುಂಬ ಮತ್ತು ಪತ್ರ ವ್ಯವಹಾರದಲ್ಲಿ ಅಥವಾ ಒಬ್ಬರ ಗೌರವ ಮತ್ತು ಘನತೆಯ ವಿಷಯದಲ್ಲಿ ಮತ್ತೊಬ್ಬರು ಹಸ್ತಕ್ಷೇಪ ಮಾಡುವಂತಿಲ್ಲ.
13. ಅ. ಪ್ರತಿಯೊಬ್ಬರಿಗೂ ಅವರ ರಾಜ್ಯದ ಗಡಿಯೊಳಗೆ ಸಂಚರಿಸಲು ಮತ್ತು ನಿವಾಸ ಹೊಂದಲು ಸ್ವಾತಂತ್ರ್ಯವಿದೆ.
    ಆ. ಸ್ವದೇಶ ಸೇರಿದಂತೆ ಯಾವುದೇ ದೇಶ ಬಿಟ್ಟು ಹೋಗುವ ಮತ್ತು ಮರಳಿ ಸ್ವದೇಶಕ್ಕೆ ಬರುವ ಹಕ್ಕಿದೆ.
14. ಅ. ರಾಜಕೀಯ ಕಿರುಕುಳ ತಪ್ಪಿಸಿಕೊಳ್ಳಲು, ಬೇರೊಂದು ರಾಷ್ಟ್ರದಲ್ಲಿ ಆಶ್ರಯ ಪಡೆಯುವ ಹಕ್ಕು ಇದೆ.
    ಆ. ವಿಶ್ವ ಸಂಸ್ಥೆಯ ತತ್ವಗಳು ಮತ್ತು ಉದ್ದೇಶಗಳಿಗೆ ವಿರುದ್ಧವಾದ ಕೃತ್ಯಗಳು ಅಥವಾ ರಾಜಕೀಯೇತರ ಅಪರಾಧಗಳಿಗೆ ಸಂಬಂಧಿಸಿದಂತೆ ಈ ನಿಯಮವನ್ನು ಅನ್ವಯಿಸಲಾಗುವುದಿಲ್ಲ.
15. ಅ. ಎಲ್ಲರಿಗೂ ರಾಷ್ಟ್ರೀಯತೆಯ ಹಕ್ಕಿದೆ.

ಆ. ಯಾರೊಬ್ಬರ ರಾಷ್ಟ್ರೀಯತೆಯನ್ನು ನಿರಾಕರಿಸುವಂತಿಲ್ಲ. ರಾಷ್ಟ್ರೀಯತೆ ಬದಲಿಸಿಕೊಳ್ಳುವ ಹಕ್ಕನ್ನು ನಿರಾಕರಿಸುವಂತಿಲ್ಲ.

16. ಅ. ಅರ್ಹ ವಯಸ್ಸಿನ ಪುರುಷ ಮತ್ತು ಮಹಿಳೆಗೆ ಜನಾಂಗ, ರಾಷ್ಟ್ರೀಯತೆ ಅಥವಾ ಧರ್ಮ ಇವುಗಳ ತಾರತಮ್ಯವಿಲ್ಲದೇ ಮದುವೆಯಾಗುವ ಮತ್ತು ಕುಟುಂಬ ರೂಪಿಸುವ ಹಕ್ಕಿದೆ, ಅಲ್ಲದೇ ಅವರಿಗೆ ವಿಚ್ಛೇದನ ಪಡೆಯುವ ಹಕ್ಕಿದೆ.
ಆ. ಮದುವೆ ಸ್ತ್ರೀಪುರುಷರಿಬ್ಬರ ಮುಕ್ತ ಮತ್ತು ಪೂರ್ಣ ಸಮ್ಮತಿಯಿಂದಲೇ ಆಗಬೇಕು.
ಇ. ಕುಟುಂಬವು ಸಮಾಜದ ಸ್ವಾಭಾವಿಕ ಹಾಗೂ ಮೂಲಭೂತ ಘಟಕವಾಗಿದೆ ಮತ್ತು ಸಮಾಜ ಹಾಗೂ ರಾಜ್ಯದಿಂದ ರಕ್ಷಣೆ ಪಡೆಯುತ್ತದೆ.

17. ಅ. ಪ್ರತಿಯೊಬ್ಬರಿಗೂ ವೈಯಕ್ತಿಕವಾಗಿ ಹಾಗೂ ಜಂಟಿಯಾಗಿ ಆಸ್ತಿ ಹೊಂದುವ ಹಕ್ಕಿದೆ.
ಆ. ಯಾರೊಬ್ಬರೂ ಇನ್ನೊಬ್ಬರ ಆಸ್ತಿಗೆ ಅಡ್ಡಬರುವಂತಿಲ್ಲ.

### ರಾಜಕೀಯ ಹಕ್ಕುಗಳು (18 ರಿಂದ 21)

18. ಪ್ರತಿಯೊಬ್ಬರಿಗೂ ಮುಕ್ತವಾದ ಆಲೋಚನೆ ಆತ್ಮಸಾಕ್ಷಿ ಮತ್ತು ಧರ್ಮಾಚರಣೆಯ ಹಕ್ಕಿದೆ. ಈ ಹಕ್ಕಿನಲ್ಲಿ ಅವರಿಗೆ ವೈಯಕ್ತಿಕವಾಗಿ ಅಥವಾ ಸಮುದಾಯಿಕವಾಗಿ ಧರ್ಮ ಅಥವಾ ನಂಬಿಕೆ ಬದಲಿಸುವ ಸ್ವಾತಂತ್ರ್ಯವೂ ಇದೆ.
19. ಪ್ರತಿಯೊಬ್ಬರಿಗೂ ಅಭಿಪ್ರಾಯ ತಿಳಿಸುವ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿದೆ. ಇದಕ್ಕಾಗಿ ಯಾವುದೇ ಮಾಧ್ಯಮ ಬಳಸುವ ಹಕ್ಕಿದೆ.
20. ಅ. ಪ್ರತಿಯೊಬ್ಬರಿಗೂ ಶಾಂತಿಯುತ ಸಭೆ ಹಾಗೂ ಸಂಘ ಸೇರುವ ಸ್ವಾತಂತ್ರ್ಯದ ಹಕ್ಕಿದೆ.
ಆ. ಯಾರೊಬ್ಬರನ್ನೂ ಬಲವಂತವಾಗಿ ಸಂಘಟನೆಗೆ ಸೇರುವಂತೆ ಒತ್ತಾಯಿಸುವಂತಿಲ್ಲ.
21. ಅ. ಪ್ರತಿಯೊಬ್ಬರಿಗೂ ಅವರ ದೇಶದ ಸರಕಾರದಲ್ಲಿ ನೇರವಾಗಿ ಅಥವಾ ಚುಣಾಯಿತ ಪ್ರತಿನಿಧಿಗಳ ಮೂಲಕ ಭಾಗವಹಿಸುವ ಹಕ್ಕಿದೆ.
ಆ. ಪ್ರತಿಯೊಬ್ಬರಿಗೂ ಅವರ ರಾಷ್ಟ್ರದಲ್ಲಿಯ ಸಾರ್ವಜನಿಕ ಸೇವೆಗಳನ್ನು ಸಮಾನವಾಗಿ ಪಡೆಯುವ ಹಕ್ಕಿದೆ.
ಇ. ಸರ್ಕಾರದ ಅಧಿಕಾರಕ್ಕೆ ಜನಸಮ್ಮತಿಯೇ ಆಧಾರ. ಇದನ್ನು ಮತ ಚಲಾಯಿಸುವ ಮೂಲಕ ಸಾರ್ವತ್ರಿಕ ಚುನಾವಣೆಗಳಲ್ಲಿ ಪ್ರಕಟಪಡಿಸಬಹುದು.

### ಆರ್ಥಿಕ ಹಕ್ಕುಗಳು (22 ರಿಂದ 27)

22. ಪ್ರತಿಯೊಬ್ಬರೂ ಸಮಾಜದ ಸದಸ್ಯರಾಗಿದ್ದು, ಅವನಿಗೆ ರಾಷ್ಟ್ರೀಯ ಸಾಮರ್ಥ್ಯ ಅಂತರ್‌ರಾಷ್ಟ್ರೀಯ ಸಂಘಟನೆಗಳ ಪಾತ್ರ ಮತ್ತು ರಾಜ್ಯದ ಸಂಪನ್ಮೂಲಗಳನ್ನಾಧರಿಸಿ ಆರ್ಥಿಕ, ಸಾಮಾಜಿಕ, ಸುರಕ್ಷತೆಯನ್ನು ಪಡೆಯುವ, ಆ ಮೂಲಕ ಗೌರವದಿಂದ ಮುಕ್ತ ವ್ಯಕ್ತಿತ್ವ ವಿಕಸನ ಸಾಧಿಸುವ ಹಕ್ಕು ಹೊಂದಿರುತ್ತಾರೆ.
23. ಅ. ಪ್ರತಿಯೊಬ್ಬರೂ ತಮ್ಮ ಮುಕ್ತ ಆಯ್ಕೆಯಾನುಸಾರ ಉದ್ಯೋಗವಕಾಶವನ್ನು ಮುಕ್ತ ಪರಿಸರದಲ್ಲಿ ಕಾರ್ಯ ನಿರ್ವಹಿಸುವ ಅವಕಾಶವನ್ನು ಹಾಗೂ ನಿರುದ್ಯೋಗದ ವಿರುದ್ಧ ರಕ್ಷಣಾ ಹಕ್ಕನ್ನು ಹೊಂದಿರುತ್ತಾರೆ.
ಆ. ಯಾವೂದೇ ತಾರತಮ್ಯವಿಲ್ಲದೇ ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವ ಹಕ್ಕು ಎಲ್ಲರಿಗೂ ಇದೆ.
ಇ. ಪ್ರತಿಯೊಬ್ಬರಿಗೂ ತನ್ನ ಹಾಗೂ ತನ್ನ ಕುಟುಂಬದ ಗೌರವಯುತ ಬದುಕಿಗೆ ಅರ್ಹವಾದ ವೇತನ ಪಡೆಯುವ ಹಕ್ಕಿದೆ. ಈ ಪ್ರತಿಯೊಬ್ಬರಿಗೂ ಕಾರ್ಮಿಕ ಸಂಘ ರಚಿಸುವ ಹಾಗೂ ತನ್ನ ರಕ್ಷಣೆಗೆ ಸಂಘ ಸೇರುವ ಹಕ್ಕಿದೆ.
24. ಪ್ರತಿಯೊಬ್ಬರಿಗೂ ವಿಶ್ರಾಂತಿ ಹಾಗೂ ಬಿಡುವಿನ ವೇಳೆಯ ಹಕ್ಕು ಮತ್ತು ವೇತನದೊಡನೆ ರಜೆಯ ಹಕ್ಕಿದೆ.
25. ಅ. ಪ್ರತಿಯೊಬ್ಬ ವ್ಯಕ್ತಿಗೂ ತನ್ನ ಹಾಗೂ ತನ್ನ ಕುಟುಂಬದ ಆರೋಗ್ಯಕರ ಹಾಗೂ ಜೀವನ ಮಟ್ಟಕ್ಕೆ ತಕ್ಕಂತೆ ಬದುಕುವ ಹಕ್ಕಿದೆ.
ಆ. ತಾಯಿ ಮತ್ತು ಮಗುವಿಗೆ ಸಾಮಾಜಿಕ ರಕ್ಷಣೆ ಹಾಗೂ ವಿಶೇಷ ಯೋಗಕ್ಷೇಮದ ಹಕ್ಕಿದೆ.
26. ಅ. ಪ್ರತಿಯೊಬ್ಬರಿಗೂ ಶಿಕ್ಷಣದ ಹಕ್ಕಿದೆ. ಪ್ರಾಥಮಿಕ ಹಂತದ ಶಿಕ್ಷಣ ಉಚಿತ ಹಾಗೂ ಕಡ್ಡಾಯವಿರಬೇಕು. ತಾಂತ್ರಿಕ ಹಾಗೂ ವೃತ್ತಿಪರ ಶಿಕ್ಷಣ ಎಲ್ಲರಿಗೂ ದೊರಕುವಂತಿರಬೇಕು. ಉನ್ನತ ಶಿಕ್ಷಣ ವ್ಯಕ್ತಿಗಳ ಸಾಮರ್ಥ್ಯ ಆಧರಿಸಿ ಸಮಾನವಾಗಿ ಲಭ್ಯವಾಗಬೇಕು.
ಆ. ಶಿಕ್ಷಣವು ಮಾನವಾಭಿವೃದ್ಧಿಗೆ ಪೂರಕವಾಗಿದ್ದು, ಮಾನವ ಹಕ್ಕುಗಳ ಗೌರವ ಮತ್ತು ಮೂಲಭೂತ ಸ್ವಾತಂತ್ರ್ಯ ಬಲಪಡಿಸುವಂತಿರಬೇಕು. ಶಿಕ್ಷಣ ಎಲ್ಲ ರಾಷ್ಟ್ರಗಳ ಜನಾಂಗಗಳ ಹಾಗೂ ಧಾರ್ಮಿಕ ಸಮೂಹಗಳ ನಡುವೆ ತಿಳಿವಳಿಕೆ ಸಹಿಷ್ಣುತೆ, ಸ್ನೇಹ ಬಾಂಧವ್ಯ ಮೂಡಿಸುವಂತಿರಬೇಕು.
ಇ. ತಮ್ಮ ಮಕ್ಕಳಿಗೆ ಬೇಕಾದ ಶಿಕ್ಷಣವನ್ನು ಪೋಷಕರೇ ನಿರ್ಧರಿಸುವ ಹಕ್ಕಿದೆ.

27. ಅ. ಪ್ರತಿಯೊಬ್ಬರಿಗೂ ಸಮುದಾಯದ ಸಾಂಸ್ಕೃತಿಕ ಬದುಕಿನಲ್ಲಿ ಪಾಲ್ಗೊಳ್ಳುವ ಕಲಾ ಸಂತೃಪ್ತಿ ಹೊಂದುವ ಮತ್ತು ವೈಜ್ಞಾನಿಕ ಸಾಧನೆ ಮತ್ತು ಅದರ ಪ್ರಯೋಜನಗಳನ್ನು ಹೊಂದುವ ಹಕ್ಕಿದೆ.

ಆ. ಪ್ರತಿಯೊಬ್ಬರಿಗೂ ಯಾವುದೇ ವೈಜ್ಞಾನಿಕ ಸಾಹಿತ್ಯಿಕ ಹಾಗೂ ಕಲಾಉತ್ಪನ್ನದಿಂದ ಉಂಟಾದ ನೈತಿಕ ಹಾಗೂ ಲೌಕಿಕ ಆಸಕ್ತಿಗಳ ರಕ್ಷಣಾ ಹಕ್ಕಿದೆ.

**ಅನುಷ್ಠಾನಕ್ಕೆ ಸಂಬಂಧಿಸಿದ ಹಕ್ಕುಗಳು (28 ರಿಂದ 30)**

28. ಪ್ರತಿಯೊಬ್ಬರೂ ಒಂದು ಸಾಮಾಜಿಕ ಹಾಗೂ ಅಂತರ್‌ರಾಷ್ಟ್ರೀಯ ನೀತಿಗೆ ಬದ್ಧರಾಗಿರುತ್ತಾರೆ.

29. ಅ. ಪ್ರತಿಯೊಬ್ಬರಿಗೂ ಸಮುದಾಯ ಸಂಬಂಧಿತ ಕರ್ತವ್ಯಗಳಿದ್ದು, ಅವುಗಳಿಂದ ಮಾತ್ರ ಅವನ ಮುಕ್ತ ಹಾಗೂ ಸಂಪೂರ್ಣ ವ್ಯಕ್ತಿತ್ವ ವಿಕಾಸ ಸಾಧ್ಯ.

ಆ. ಎಲ್ಲರೂ ಕಾನೂನಿನ ಮಿತಿಯೊಳಗೆ ಹಕ್ಕು ಮತ್ತು ಸ್ವಾತಂತ್ರ್ಯವನ್ನನುಭವಿಸಬೇಕು. ಇದರಿಂದ ಮತ್ತೊಬ್ಬರ ಹಕ್ಕು ಮತ್ತು ಸ್ವಾತಂತ್ರ್ಯ ಕಾಪಾಡಲು ಮತ್ತು ನೈತಿಕ ಅವಶ್ಯಕತೆ ಪೂರೈಸಲು ಸಾಧ್ಯ ಹಾಗೂ ಪ್ರಜಾಪ್ರಭುತ್ವ ಸಮಾಜದಲ್ಲಿ ಸಾರ್ವಜನಿಕ ಶಿಸ್ತು ಕಾಪಾಡಿದಂತಾಗುತ್ತದೆ.

30. ಈ ಘೋಷಣೆಯಡಿಯಲ್ಲಿ ಉಲ್ಲೇಖಿಸಲಾಗಿರುವ ಯಾವುದೇ ಸ್ವಾತಂತ್ರ್ಯ ಅಥವಾ ಹಕ್ಕುಗಳನ್ನು ಯಾವುದೇ ರಾಜ್ಯ ಗುಂಪು ಅಥವಾ ವ್ಯಕ್ತಿ ಈ ಘೋಷಣೆಯಲ್ಲಿ ಉಕ್ತವಾಗಿರುವ ಸ್ವಾತಂತ್ರ್ಯ ಹಾಗೂ ಹಕ್ಕುಗಳಿಗೆ ವಿರುದ್ಧವಾಗುವಂತೆ ವ್ಯಾಖ್ಯಾನಿಸಲಾಗದು.

## 5.1.2 ಮಾನವ ಹಕ್ಕುಗಳ ಶಿಕ್ಷಣದ ಪರಿಕಲ್ಪನೆ (Concept of Human Rights Education)

ಈ ಮೇಲೆ ನಮೂದಿಸಿದ ಮಾನವ ಹಕ್ಕುಗಳು ವ್ಯಕ್ತಿಯ ಸರ್ವತೋಮುಖ ಬೆಳಣಿಗೆಯನ್ನು ಸೂಚಿಸುತ್ತವೆ. ಈ ಹಕ್ಕುಗಳ ಸಾಕಾರವಾಗಬೇಕೆಂದರೆ, ಶಿಕ್ಷಣದ ಮೂಲಕ ವ್ಯಕ್ತಿ ಪಡೆದುಕೊಳ್ಳುವ ಸ್ಥೈರ್ಯ–ಅರಿವುಗಳೇ ಕಾರಣವಾಗುತ್ತವೆ. ಈ ದೃಷ್ಟಿಯಿಂದ ಮಾನವ ಹಕ್ಕುಗಳ ಈಡೇರಿಕೆ ಶಿಕ್ಷಣವನ್ನೇ ಅವಲಂಬಿಸಿದೆ. ವಿಶ್ವ ಸಂಸ್ಥೆಯ ಹಲವಾರು ಉದ್ದೇಶಗಳಲ್ಲಿ ಒಂದೆಂದರೆ, ಅದರ 55ನೇ ವಿಧಿ ಹೇಳುವ ಹಾಗೆ ಮಾನವೀಯ ಹಕ್ಕುಗಳ ಬಗೆಗೆ ಪ್ರಪಂಚದ ಜನರಲ್ಲಿ ಗೌರವ ಭಾವನೆಗಳನ್ನು ಬೆಳೆಸುವುದು. ಹಾಗೂ ಜಾತಿ, ಜನಾಂಗ, ಲಿಂಗ, ಭಾಷೆಗಳ ಭೇದ ಭಾವವನ್ನು ಮಾಡದೇ ಎಲ್ಲರಿಗೂ ಮೂಲಭೂತ ಸ್ವಾತಂತ್ರ್ಯಗಳನ್ನೊದಗಿಸುವುದೇ ಆಗಿದೆ. 1993ರ ಜೂನ್‌ನಲ್ಲಿ ಆಸ್ಟ್ರೀಯಾದ ವಿಯೆನ್ನಾದದಲ್ಲಿ ನಡೆದ ಮಾನವ ಹಕ್ಕುಗಳ ವಿಶ್ವ ಅಧಿವೇಶನವು ವಿವಿಧ ಸಮುದಾಯಗಳಲ್ಲಿ ಸ್ಥಿರ ಹಾಗೂ ಮಧುರ ಬಾಂಧವ್ಯ ಬೆಳೆಸುವಲ್ಲಿ ಮಾನವ ಹಕ್ಕುಗಳ ಶಿಕ್ಷಣ ಅತ್ಯಂತ ಮಹತ್ವದ್ದು ಎಂದಿದೆ. ಇದರ ಫಲವಾಗಿ ಮಾನವ ಹಕ್ಕುಗಳ ಶಿಕ್ಷಣದ ಸಾಹಿತ್ಯವನ್ನು ಪ್ರಕಟಿಸಲು, ಏಷಿಯಾ ಮಾನವ ಹಕ್ಕುಗಳ ಶಿಕ್ಷಣ ಸಂಸ್ಥೆಯನ್ನು 1995ರಲ್ಲಿ ಸ್ಥಾಪಿಸಲಾಯಿತು. ಭಾರತದಲ್ಲಿ ರಾಷ್ಟ್ರೀಯ ಶಿಕ್ಷಣ, ಸಂಶೋಧನೆ ಮತ್ತು ತರಬೇತಿ ಸಂಸ್ಥೆಯೂ(NCERT) ಸಹ ಶಾಲಾ ಪಠ್ಯಕ್ರಮದಲ್ಲಿ ಮಾನವ ಹಕ್ಕುಗಳ ಶಿಕ್ಷಣವನ್ನು ಅಳವಡಿಸಿದೆ.

"ಸಮಾಜದ ಬೆಳವಣಿಗೆಯ ಎಲ್ಲ ಸ್ಥರದಲ್ಲಿರುವ ಜನರು, ಸಮಾಜದ ಇತರ ಜನರ ಘನತೆ ಗೌರವಗಳನ್ನು ಕಾಪಾಡುವಂತೆ, ಜೀವನ ಪರ್ಯಂತ ಕಲಿಯುವ ಪ್ರಕ್ರಿಯೆಯೆ **ಮಾನವ ಹಕ್ಕುಗಳ ಶಿಕ್ಷಣ**".

**–1995–2004 ಮಾನವ ಹಕ್ಕುಗಳ ದಶಕದ ದಾಖಲೆ**

"ಮಾನವ ಹಕ್ಕುಗಳನ್ನು ಸಂರಕ್ಷಿಸಲು ಅಗತ್ಯವಿರುವ ಜ್ಞಾನ, ಕೌಶಲ್ಯ, ಮನೋಭಾವ ಮತ್ತು ವರ್ತನೆಗಳನ್ನು ಅಭಿವೃದ್ಧಿಪಡಿಸುವ ಜೀವನ ಪರ್ಯಂತ ಶಿಕ್ಷಣವನ್ನು **ಮಾನವ ಹಕ್ಕುಗಳ ಶಿಕ್ಷಣ** ಎನ್ನುವರು".

"ಮಾನವ ಸಮತೆ ಮತ್ತು ಘನತೆಯ ತತ್ವಗಳನ್ನು ತಿಳಿದುಕೊಂಡು ಅಪ್ಪಿಕೊಳ್ಳುವ ಹಾಗೂ ಎಲ್ಲ ವ್ಯಕ್ತಿಗಳ ಹಕ್ಕುಗಳನ್ನು ಗೌರವಿಸುವ, ಸಂರಕ್ಷಿಸುವ ಶಿಕ್ಷಣವನ್ನು **ಮಾನವ ಹಕ್ಕುಗಳ ಶಿಕ್ಷಣ** ಎನ್ನುವರು"

"ಮಾನವ ಹಕ್ಕುಗಳ ಇತಿಹಾಸ, ಸಿದ್ಧಾಂತ, ನಿಯಮಗಳನ್ನು ಶಾಲೆಗಳು ಮತ್ತು ಶಿಕ್ಷಣ ಸಂಸ್ಥೆಗಳಲ್ಲದೇ ಸಾರ್ವಜನಿಕರಿಗೂ ಬೋಧಿಸುವುದನ್ನು **ಮಾನವ ಹಕ್ಕುಗಳ ಶಿಕ್ಷಣ** ಎನ್ನುವರು".

"ಮಾನವರಲ್ಲಿ ಮಾನವ ಹಕ್ಕುಗಳ ಪರಿಕಲ್ಪನೆ ಮೂಡಿಸಿ ಅದನ್ನು ಸಂರಕ್ಷಿಸುವಂತೆ ಮಾರ್ಗದರ್ಶಿಸುವ ಶಿಕ್ಷಣವನ್ನು **ಮಾನವ ಹಕ್ಕುಗಳ ಶಿಕ್ಷಣ** ಎನ್ನುವರು".

ಸಹಭಾಗಿತ್ವ ಪ್ರಜಾಪ್ರಭುತ್ವವನ್ನು ಪ್ರೋತ್ಸಾಹಿಸುವ ಸಾಮಾಜಿಕ ಮತ್ತು ರಾಜಕೀಯ ವ್ಯತ್ಯಾಸಗಳನ್ನು ಪರಿಹರಿಸಲು ಹಾಗೂ ಸಾಂಸ್ಕೃತಿಕ ವೈವಿಧ್ಯತೆಯನ್ನು ಆಚರಿಸಲು ಸಾಮಾನ್ಯ ತಿಳಿವಳಿಕೆಯನ್ನು ನೀಡುವಲ್ಲಿ ಮಾನವ ಹಕ್ಕುಗಳ ಶಿಕ್ಷಣವು ಪ್ರಮುಖ ಪಾತ್ರವಹಿಸುತ್ತದೆ.

## ಮಾನವ ಹಕ್ಕುಗಳ ಶಿಕ್ಷಣದ ಮಹತ್ವ (Importance of Human Rights Education)

- ಮಾನವ ಹಕ್ಕುಗಳ ಶಿಕ್ಷಣ ಎಲ್ಲ ವ್ಯಕ್ತಿಗಳಲ್ಲಿ ಮಾನವ ಹಕ್ಕುಗಳ ಬಗ್ಗೆ ಗೌರವವನ್ನು ಮೂಡಿಸುತ್ತದೆ.
- ಇದು ಮಾನವ ಹಕ್ಕುಗಳ ಜ್ಞಾನ, ಕೌಶಲ್ಯ ಮತ್ತು ಮೌಲ್ಯಗಳನ್ನು ಅಭಿವೃದ್ಧಿಪಡಿಸುತ್ತದೆ.
- ಮನುಕುಲದ ಎಲ್ಲ ಸದಸ್ಯರು ಗೌರವಯುತವಾಗಿ ಬಾಳುವಂತೆ ಮಾಡುತ್ತದೆ.
- ವಿಶ್ವದ ಯಾವುದೇ ವ್ಯಕ್ತಿಯ ಶೋಷಣೆಯಾಗದಂತೆ ನೋಡಿಕೊಳ್ಳುತ್ತದೆ.
- ಪ್ರತಿಯೊಬ್ಬ ವ್ಯಕ್ತಿಯನ್ನು ಭಯ, ದಬ್ಬಾಳಿಕೆ, ಶೋಷಣೆ, ಅನ್ಯಾಯಗಳಿಂದ ಮುಕ್ತನನ್ನಾಗಿ ಮಾಡುತ್ತದೆ.
- ಸ್ತ್ರೀ–ಪುರುಷರು ಸಮಾನರು, ಇಬ್ಬರಿಗೂ ವಿಕಾಸ ಹೊಂದಲು ಸಮರ್ಪಕ ಅವಕಾಶಗಳನ್ನು ಒದಗಿಸುತ್ತದೆ.
- ವಿಶ್ವದಲ್ಲಿ ಅಮಾನವೀಯ ಕೃತ್ಯಗಳನ್ನು ತಡೆಯುತ್ತದೆ.
- ಮಾನವ ಜೀವಿಗಳು ಸ್ವತಂತ್ರರು ಹಾಗೂ ಸಮಾನರು ಎಂದು ಖಾತ್ರಿಪಡಿಸುತ್ತದೆ.
- ಜನಾಂಗೀಯ, ವರ್ಣಬೇಧ, ಸಾಮ್ರಾಜ್ಯಶಾಹಿ ಗುಲಾಮಗಿರಿ ನೀತಿಯನ್ನು ನಿರ್ಮೂಲಗೊಳಿಸುತ್ತದೆ.
- ಲಿಂಗ ತಾರತಮ್ಯ ಅಂತ್ಯಗೊಳಿಸುವುದು.
- ಮಗುವಿನ ಹಕ್ಕುಗಳನ್ನು ಖಾತ್ರಿಗೊಳಿಸುವುದು.
- ಮಾನವ ಹಕ್ಕುಗಳ ಬಗೆಗೆ ಜನರಲ್ಲಿ ವಿಶ್ವಾಸ ವರ್ಧಿಸುತ್ತದೆ.
- ಮಾನವೀಯ ಸಮಸ್ಯೆಗಳನ್ನು ಶಾಂತಿಯುತವಾಗಿ ಇತ್ಯರ್ಥಗೊಳಿಸುತ್ತದೆ.
- ಜನತೆಯ ಜೀವನ ಮಟ್ಟವನ್ನು ಎತ್ತರಿಸುವುದು.
- ಪರಸ್ಪರರು ಗೌರವವನ್ನು ಕೊಟ್ಟು ಗೌರವವನ್ನು ಪಡೆಯುವ ಮನೋಭಾವವನ್ನು ಮೂಡಿಸುತ್ತದೆ.
- ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವ ಮೌಲ್ಯ ರೂಢಿಸುವಲ್ಲಿ ನೆರವಾಗುತ್ತದೆ.
- ಸರ್ವರಿಗೂ ಸಮಪಾಲು ಹಾಗೂ ಸಮಬಾಳು ಎಂಬ ಜೀವನ ತತ್ವವನ್ನು ಅನುಷ್ಠಾನಕ್ಕೆ ತರುವಲ್ಲಿ ನೆರವಾಗುತ್ತದೆ.
- ಮಾನವರೆಲ್ಲರ ಕ್ರಿಯಾಶೀಲ ಬದುಕಿಗೆ ಕಾರಣವಾಗುತ್ತದೆ.

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ (National Human Rights Commission)(NHRC)

1993 ರಲ್ಲಿ ಜರುಗಿದ ಮಾನವ ಹಕ್ಕುಗಳ ಜಾಗತಿಕ ಸಮ್ಮೇಳನದಲ್ಲಿ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ರಚನೆಯ ಆಸಕ್ತಿಯನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮುಂದೆ ವ್ಯಕ್ತಪಡಿಸಿತು. ಹಾಗೆಯೇ ಇದರ ಕರುಡು ಪ್ರತಿಯನ್ನು ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಅದರ ಅಂಗೀಕಾರಕ್ಕೆ ಅನುಮೋದನೆಯನ್ನು ಕೇಳಿತು. ಇದರನ್ವಯ 1993 ಅಕ್ಟೋಬರ್ 12 ರಂದು ರಾಷ್ಟ್ರೀಯ ಮಾನವ ಹಕ್ಕಗಳ ರಕ್ಷಣಾ ಕಾಯ್ದೆ 28 ಸೆಪ್ಟಂಬರ 1993 ರ ಅನ್ವಯ ರಾಷ್ಟ್ರಪತಿಯವರ ಅಂಕಿತದೊಂದಿಗೆ **"ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ"** ಸ್ಥಾಪನೆಯಾಯಿತು. ಹಾಗೆಯೇ ರಾಜ್ಯಗಳಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗ ಸ್ಥಾಪನೆಗಾಗಿ ಸುಗ್ರೀವಾಜ್ಞೆಯಲ್ಲಿ ಅವಕಾಶ ಮಾಡಿಕೊಡಲಾಗಿದೆ.


## NHRCಯ ಅಧಿಕಾರ ಹಾಗೂ ಕಾರ್ಯಗಳು (Powers and functions of NHRC)

ಮಾನವ ಹಕ್ಕುಗಳ ರಕ್ಷಣಾ ಕಾನೂನಿನ ಕಲಮು 12 ರಲ್ಲಿ ಆಯೋಗದ ಅಧಿಕಾರ ಹಾಗೂ ಕಾರ್ಯಗಳನ್ನು ಗೊತ್ತುಪಡಿಸಲಾಗಿದೆ.

- ಮಾನವ ಹಕ್ಕುಗಳ ಉಲ್ಲಂಘನೆಯಿಂದ ಶೋಷಣೆಗೊಳಗಾದ ವ್ಯಕ್ತಿಯ ದೂರಿನ ಮೇರೆಗೆ ಅಥವಾ ಸ್ವ ಇಚ್ಛೆಯಿಂದ ಆಯೋಗವು ವಿಚಾರಣೆ ನಡೆಸುವ ಅಧಿಕಾರ ಹೊಂದಿರುತ್ತದೆ.
- ಯಾವುದೇ ನ್ಯಾಯಾಲಯದಲ್ಲಿ ಇತ್ಯರ್ಥವಾಗದೇ ಉಳಿದ ಮಾನವ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದ ಯಾವುದೇ ಆಪಾದನೆಯ ವಿಚಾರಣೆಯಲ್ಲಿ ಆಯೋಗವು ಆ ನ್ಯಾಯಾಲಯದ ಸಮ್ಮತಿ ಪಡೆದು ನ್ಯಾಯಾಲಯದ ನಡಾವಳಿಯಲ್ಲಿ ಭಾಗವಹಿಸಬಹುದು.

- ರಾಜ್ಯ ಸರಕಾರದ ನಿಯಂತ್ರಣಕ್ಕೆ ಒಳಪಟ್ಟ ಯಾವುದೇ ಕಾರಾಗೃಹ ಅಥವಾ ಸಂಸ್ಥೆಗೆ, ಸರಕಾರದ ಸಮ್ಮತಿ ಪಡೆದು ಭೇಟಿ ನೀಡಿ ಅಲ್ಲಿರುವ ಖೈದಿಗಳ ಸ್ಥಿತಿಗತಿ ಹಾಗೂ ಸೌಲಭ್ಯಗಳನ್ನು ಕುರಿತು ತಿಳಿದುಕೊಂಡು ಅವುಗಳ ಸುಧಾರಣೆಗಾಗಿ ಸರಕಾರ ಅಥವಾ ಸಂಸ್ಥೆಗಳಿಗೆ ಸಲಹೆಗಳನ್ನು ನೀಡುವುದು.
- ಮಾನವ ಹಕ್ಕುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು, ಅಸ್ತಿತ್ವದಲ್ಲಿರುವ ಸಂವಿಧಾನಾತ್ಮಕ ನಿಯಮಗಳು ಹಾಗೂ ಕಾನೂನುಗಳನ್ನು ಪರಿಶೀಲಿಸಿ ಅವುಗಳನ್ನು ಪುನರುಜ್ಜೀವನಗೊಳಿಸಿ ಪರಿಣಾಮಕಾರಿಯಾಗಿ ಜಾರಿಗೆ ತರುವುದು.
- ಭಯೋತ್ಪಾದನೆ ಕೃತ್ಯಗಳನ್ನೊಳಗೊಂಡು, ಮಾನವ ಹಕ್ಕುಗಳ ಉಪಭೋಗ ಮಾಡಲು ಅಡ್ಡಿಯನ್ನುಂಟು ಮಾಡುವ ಎಲ್ಲ ಘಟನೆಗಳನ್ನು ಪರಿಶೀಲಿಸಿ ಸೂಕ್ತ ಪರಿಹಾರೋಪಾಯಗಳನ್ನು ಸೂಚಿಸುವುದು.
- ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಮಾಡಿಕೊಂಡ ಎಲ್ಲ ಅಂತರರಾಷ್ಟ್ರೀಯ ಒಪ್ಪಂದಗಳನ್ನು ಅಧ್ಯಯನ ಮಾಡಿ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಂತೆ ಶಿಫಾರಸ್ಸು ಮಾಡುವುದು.
- ಮಾನವ ಹಕ್ಕಗಳ ಉಲ್ಲಂಘನೆಗೆ ಪ್ರಚೋದಿಸಿದ ಹಾಗೂ ಉಲ್ಲಂಘನೆಯನ್ನು ತಡೆಯಲು ನಿರ್ಲಕ್ಷಿಸಿದ ವ್ಯಕ್ತಿಗಳ ಮೇಲೆ ತನಿಖೆ ನಡೆಸುವುದು.
- ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಸಂಶೋಧನೆಯನ್ನು ಕೈಕೊಳ್ಳುವುದು.
- ವಿಚಾರ ಸಂಕೀರ್ಣದ ಮೂಲಕ, ಪ್ರಕಟನೆಗಳ ಮೂಲಕ, ವಿವಿಧ ಪ್ರಕಾರದ ಮಾಧ್ಯಮಗಳ ಮೂಲಕ ಹಾಗೂ ಲಭ್ಯವಿರುವ ಇತರ ಸಾಧನಗಳ ಮೂಲಕ ಸಮಾಜದ ವಿವಿಧ ಜನಾಂಗಕ್ಕೆ ತಿಳಿವಳಿಕೆ, ಶಿಕ್ಷಣ ಹಾಗೂ ರಕ್ಷಣಾ ಮಾರ್ಗಗಳನ್ನು ಕುರಿತು ಪ್ರಚಾರ ಮಾಡುವುದು.
- ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸರಕಾರೇತರ ಸಂಘಟನೆಗಳಿಗೆ ಹಾಗೂ ಸಂಸ್ಥೆಗಳಿಗೆ ಪ್ರೋತ್ಸಾಹಿಸುವುದು.
- ಮಾನವ ಹಕ್ಕುಗಳಿಗೆ ಸಂಬಂಧಿಸಿದಂತೆ ಯಾವುದೇ ಕಾರ್ಯವನ್ನು ಅವುಗಳ ರಕ್ಷಣೆ ಹಾಗೂ ಅಭಿವೃದ್ಧಿಗಾಗಿ ಆಯೋಗ ಕೈಕೊಳ್ಳಬಹುದು.
- ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗವು ತನ್ನ ವಾರ್ಷಿಕ ವರದಿಯನ್ನು ಕೇಂದ್ರ ಸರಕಾರಕ್ಕೆ ಒಪ್ಪಿಸುವುದು.

## 5.2 ಮಕ್ಕಳ ಹಕ್ಕುಗಳು (Children's Rights)




"ಇಂದಿನ ಮಕ್ಕಳೇ ನಾಳಿನ ಪ್ರಜೆಗಳು" ಹೀಗಾಗಿ ರಾಷ್ಟ್ರದ ಭವಿಷ್ಯ ಮಕ್ಕಳನ್ನು ಅವಲಂಬಿಸಿದೆ. ಆದರೆ ಇಂದು ಅದೇ ಮಕ್ಕಳ ಸ್ಥಿತಿ ಹೀನಾಯವಾಗಿದೆ. ಮಕ್ಕಳು ದೈಹಿಕವಾಗಿ ದುರ್ಬಲರು ಎಂಬ ಕಾರಣದಿಂದ ಅನೇಕ ರೀತಿಯಿಂದ ಶೋಷಣೆ ಮಾಡಲಾಗುತ್ತಿದೆ. ಪೌಷ್ಟಿಕ ಆಹಾರ, ಶಿಕ್ಷಣ, ಪಾಲನೆ ಇತ್ಯಾದಿ ಅಂಶಗಳು ಸರಿಯಾಗಿ ದೊರೆಯದೇ ಇಂದು ಅನೇಕ ಮಕ್ಕಳು ಬಾಲ್ಯಾವಸ್ಥೆಯಲ್ಲಿಯೇ ಮರಣಕ್ಕೆ ಗುರಿಯಾಗುತ್ತಿದ್ದಾರೆ. ಆದ್ದರಿಂದ ಮಕ್ಕಳನ್ನು **"ಶೋಷಿತ ವರ್ಗ"** ಎಂದು ಪರಿಗಣಿಸಲಾಗಿದೆ. ನಿಜ ಸ್ಥಿತಿ ಹೀಗಿದ್ದರೂ ಅನಾದಿಕಾಲದಿಂದಲೂ ಮಗುವಿನ ಹಕ್ಕುಗಳನ್ನು ಪೂರೈಸದೇ ಇರುವುದು ಶೋಚನಿಯ ಸಂಗತಿಯಾಗಿದೆ. ಮಗುವನ್ನು ನಿಂದನೆಗೆ, ಶೋಷಣೆಗೆ ಹಾಗೂ ಅವಮಾನಕ್ಕೆ ಗುರಿ ಪಡಿಸುತ್ತಿರುವುದು ವಿಷಾದನೀಯ. ಔಷದೋಪಚಾರದ ಕೊರತೆ ಹಾಗೂ ಅಪೌಷ್ಟಿಕ ಆಹಾರದ ಕಾರಣ ಬಹುತೇಕ ಮಕ್ಕಳು ಅಂಗವೈಕಲ್ಯ ಹಾಗೂ ಅನೇಕ ಮಾರಣಾಂತಿಕ ರೋಗಗಳಿಗೆ ತುತ್ತಾಗುತ್ತಿರುವುದು ಆಘಾತಕಾರಿಯಾಗಿದೆ. ಈ ಎಲ್ಲ ಕಾರಣಗಳನ್ನು ಹಾಗೂ ಪರಿಣಾಮಗಳನ್ನು ಅವಲೋಕಿಸಿದಾಗ ಮಕ್ಕಳ ಕಲ್ಯಾಣ ಕಾರ್ಯ ಒಂದು ಸಮಸ್ಯಾತ್ಮಕ ಸವಾಲಾಗಿದೆ. ಬೆಳೆಯುವ ಮುನ್ನವೇ ಕಮರುತ್ತಿರುವ ಮಕ್ಕಳ ಬದುಕಿಗೆ ಹಾಗೂ ಅವರ ಜೀವನಕ್ಕೆ ಒಂದು ಭದ್ರತೆ ಬೇಕಿದೆ. ಆದ್ದರಿಂದ ಮಾನವರ ವ್ಯಕ್ತಿತ್ವ ವಿಕಸನದ ದೃಷ್ಟಿಯಿಂದ ಕೊಡಮಾಡಲ್ಪಟ್ಟ ಮಾನವ ಹಕ್ಕುಗಳಂತೆ ಮಕ್ಕಳಿಗೂ ಪ್ರತ್ಯೇಕ ಹಕ್ಕುಗಳ ಅವಶ್ಯಕತೆ ಇದೆ. ಇದರಿಂದ ಅದೆಷ್ಟೋ ಮಕ್ಕಳಿಗೆ ಸಹಾಯವಾಗಲಿದೆ ಹಾಗೂ ಬೆಳೆಯುವ ಮುನ್ನ ಬಾಡುವ ಆಸೆಗಳಿಗೆ ಉಲ್ಲಾಸ ಬರಲಿದೆ.

ಮಗುವಿನ ಸರ್ವತೋಮುಖ ಬೆಳವಣಿಗೆ ಮಾಡುವುದು ಪ್ರತಿಯೊಂದು ಕುಟುಂಬ, ಸಮಾಜ ಹಾಗೂ ಸರಕಾರದ ಆದ್ಯ ಕರ್ತವ್ಯವಾಗಿದೆ. ಇಂದು ಅದರ ಪರಿಕಲ್ಪನೆಯ ಅರಿವಾಗಿ ಮಾನವ ಹಕ್ಕುಗಳ ಜೊತೆಗೆ ಮಕ್ಕಳ ರಕ್ಷಣೆಯು ಸಾರ್ವತ್ರಿಕ ಜವಾಬ್ದಾರಿ ಎಂಬ ಕಲ್ಪನೆ ಬೆಳೆದು ಬಂದಿದೆ. ಇದರಿಂದ ವಿಶ್ವಸಂಸ್ಥೆ ಘೋಷಿತ ಮಾನವ ಹಕ್ಕುಗಳ "ಸನ್ನದು" ಕಲಂ. 25 ರ ಪ್ರಕಾರ ಮಕ್ಕಳಿಗೆ ವಿಶೇಷ ಕಾಳಜಿ ಹಾಗೂ ಸಹಾಯವನ್ನು ಒದಗಿಸಬೇಕಾದುದು ಅವಶ್ಯಕವೆಂದು ಹೇಳಲಾಗಿದೆ. ಅದರಂತೆ ಅಂತರಾಷ್ಟ್ರೀಯ ಹಲವಾರು ಒಡಂಬಡಿಕೆಯಲ್ಲಿ ಮಕ್ಕಳು ಪ್ರೀತಿ, ವಿಶ್ವಾಸ, ಹಾಗೂ ಉತ್ತಮ ವಾತಾವರಣ ಮತ್ತು ಸಂತೋಷದಾಯಕವಾದ ಕೌಟುಂಬಿಕ ವಾತಾವರಣದಲ್ಲಿ ಬೆಳೆಯಬೇಕೆಂದು ಹೇಳಲಾಗಿದೆ.

**ಮಕ್ಕಳ ಹಕ್ಕುಗಳ ಪರಿಕಲ್ಪನೆ (Concept of Children rights)** ಮಕ್ಕಳ ಹಕ್ಕು ಒಡಂಬಡಿಕೆ 1989ರ ಪ್ರಕಾರ ಮಗು ಎಂದರೆ "ಹುಟ್ಟಿನಿಂದ ಹದಿನೆಂಟು (18) ವರ್ಷದ ಒಳಗಿನವರು" ಎಂದು ಪರಿಗಣಿಸಲಾಗಿದೆ. ಆದ್ದರಿಂದ ಮಗು ಅಂದರೆ ಹದಿನೆಂಟು ವರ್ಷದ ಒಳಗಿನವರು ದೈಹಿಕವಾಗಿ ಹಾಗೂ ಸಾಮಾಜಿಕವಾಗಿ ವಿಕಾಸ ಹೊಂದಲು ಮತ್ತು ಜೀವಿಸಲು ಇರುವ ಹಕ್ಕುಗಳನ್ನು **ಮಕ್ಕಳ ಹಕ್ಕುಗಳು** ಎನ್ನುವರು.

"20 ನವೆಂಬರ 1989 ರಂದು ವಿಶ್ವ ಸಂಸ್ಥೆಯಲ್ಲಿ ಮಕ್ಕಳಿಗಾಗಿ ಅಂಗೀಕೃತಗೊಂಡ ಒಡಂಬಡಿಕೆಯೇ **ಮಕ್ಕಳ ಹಕ್ಕುಗಳು** ಎನ್ನುತ್ತಾರೆ."

"ಮಕ್ಕಳ ಮೇಲೆ ಪರಿಣಾಮ ಬೀರುವ ರಾಜಕೀಯ ಮತ್ತು ಕಾನೂನು ನಿರ್ಧಾರಗಳಲ್ಲಿ ಭಾಗವಹಿಸಲು ಅವಕಾಶ ಅಂದರೆ ವಿಶಾಲ ಅರ್ಥದಲ್ಲಿ ಹಸಿವು, ನಿಂದನೆ, ನಿರ್ಲಕ್ಷ ಮತ್ತು ಇತರೆ ಅಮಾನವೀಯ ಪರಿಸ್ಥಿತಿಗಳಿಂದ ಹೊರತಾಗಿ ಜೀವಿಸುವ ಹಕ್ಕುಗಳನ್ನು **ಮಕ್ಕಳ ಹಕ್ಕುಗಳು**" ಎನ್ನುವರು.

ಮಕ್ಕಳ ಹಕ್ಕುಗಳು ಮಾನವ ಹಕ್ಕುಗಳ ಒಂದು ಭಾಗವಾಗಿದ್ದು, ಮಗುವನ್ನು ಮಾನವರಂತೆ ರಕ್ಷಿಸುತ್ತವೆ. ಮಾನವ ಹಕ್ಕುಗಳಂತೆ ಮಕ್ಕಳ ಹಕ್ಕುಗಳು ಮೂಲಭೂತ ಖಾತರಿಯನ್ನೊದಗಿಸುವ ಮತ್ತು ಅಗತ್ಯ ಹಕ್ಕುಗಳಾಗಿವೆ.

"ಮಕ್ಕಳು ದೈಹಿಕ ಮತ್ತು ಬೌದ್ಧಿಕವಾಗಿ ವಿಕಾಸ ಹೊಂದಲು ಹಾಗೂ ಬದುಕಲು ಅಗತ್ಯವಿರುವ ಹಕ್ಕುಗಳನ್ನು **ಮಕ್ಕಳ ಹಕ್ಕುಗಳು** ಎನ್ನುವರು".

"ನಿರಾಕರಿಸದೇ, ತಡೆಹಿಡಿಯದೇ ಒದಗಿಸಿಕೊಡಬೇಕಾಗಿದ್ದ ಮಕ್ಕಳ ನ್ಯಾಯಸಮ್ಮತ ಸಹಜ ಅಗತ್ಯತೆಗಳನ್ನು **ಮಕ್ಕಳ ಹಕ್ಕುಗಳು** ಎನ್ನುತ್ತಾರೆ."

"ಅಪ್ರಾಪ್ತರಿಗಾಗಿ ಒದಗಿಸಬೇಕಾದ ಕಾಳಜಿ, ಅವಧಾನ, ಮತ್ತು ವಿಶೇಷ ರಕ್ಷಣೆಗಳನ್ನು **ಮಕ್ಕಳ ಹಕ್ಕುಗಳು** ಎನ್ನುತ್ತಾರೆ".

## ಮಕ್ಕಳ ಹಕ್ಕುಗಳ ಒಡಂಬಡಿಕೆ (Convention of the rights of the child)

ಪ್ರಥಮ ಜಾಗತಿಕ ಸಮರದ ನಂತರ ಜಿನೇವಾ ಒಡಂಬಡಿಕೆ 1924ರ ಪ್ರಕಾರ ಮಕ್ಕಳ ಹಕ್ಕುಗಳನ್ನು ಗುರುತಿಸುವ ಕಾರ್ಯ ಪ್ರಾರಂಭವಾಯಿತು. ನಂತರ ವಿಶ್ವ ಸಂಸ್ಥೆಯಲ್ಲಿ 1959 ರಲ್ಲಿ ಮಕ್ಕಳ ಹಕ್ಕುಗಳ ಒಡಂಬಡಿಕೆಯು ಅಂಗೀಕಾರವಾಯಿತು. ಈ ಘೋಷಣೆಯ ನಂತರವೂ ಮಕ್ಕಳ ಹಕ್ಕುಗಳ ಅನುಷ್ಠಾನ ಸಾಧ್ಯವಾಗದಿರುವುದರಿಂದ 20 ನವೆಂಬರ 1989 ರಂದು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಅಂತರಾಷ್ಟ್ರೀಯ ಕಾನೂನಿನ ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು. ಈ ಒಡಂಬಡಿಕೆಯಲ್ಲಿ ಜಗತ್ತಿನ 191 ರಾಷ್ಟ್ರಗಳು ಭಾಗಿಯಾಗಿದ್ದವು. ಈ ಒಡಂಡಿಕೆಯು ಒಟ್ಟು 54 ವಿಧಿಗಳನ್ನು ಒಳಗೊಂಡಿದ್ದು ನಾಲ್ಕು ಭಾಗಗಳನ್ನಾಗಿ ವಿಂಗಡಿಸಲಾಗಿದೆ.

1. **ಬದುಕುವ ಹಕ್ಕುಗಳು :** ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ ಪಡೆಯುವ, ಪೌಷ್ಠಿಕ ಅಹಾರ ಪಡೆಯುವ, ಒಂದು ಹೆಸರು ಹೊಂದುವ, ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕುಗಳನ್ನು ಮಕ್ಕಳ ಬದುಕುವ ಹಕ್ಕುಗಳೆಂದು ಪರಿಗಣಿಸಲಾಗಿದೆ.

2. **ರಕ್ಷಣೆಯ ಹಕ್ಕುಗಳು :** ದಬ್ಬಾಳಿಕೆ, ತೊಂದರೆ, ಕಿರುಕುಳ, ಹಿಂಸೆಗಳ ವಿರುದ್ಧ, ತುರ್ತು ಸಂದರ್ಭಗಳಲ್ಲಿ ಮತ್ತು ಸಶಸ್ತ್ರ ಘರ್ಷಣೆಗಳಾದಾಗ ಮಕ್ಕಳಿಗೆ ಆದ್ಯತೆಯಿಂದ ರಕ್ಷಣೆ ಪಡೆಯುವ ಹಕ್ಕು ಇದಾಗಿದೆ.

3. **ವಿಕಾಸ ಹೊಂದುವ ಹಕ್ಕುಗಳು :** ಎಲ್ಲ ಮಕ್ಕಳಿಗೆ ಶೈಶವದಲ್ಲಿ ಬೆಳೆಯಲು ಅವಕಾಶ, ಯಾವುದೇ ತಾರತಮ್ಯವಿಲ್ಲದೇ ಶಿಕ್ಷಣ, ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ವಿರಾಮ, ಮನರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗಿತ್ವದ ಅವಕಾಶ ಹೊಂದುವ ಹಕ್ಕುಗಳನ್ನು ಮಕ್ಕಳ ವಿಕಾಸ ಹೊಂದುವ ಹಕ್ಕುಗಳು ಎಂದು ಪರಿಗಣಿಸಲಾಗಿದೆ.

4. **ಭಾಗವಹಿಸುವ ಹಕ್ಕುಗಳು :** ಮಕ್ಕಳ ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿಯ ಲಭ್ಯತೆ, ಚಿಂತನೆಗೆ ಹಾಗೂ ಬುದ್ಧಿಬೆಳವಣಿಗೆಗೆ ಅವಕಾಶ, ಸಂಘಟಿತರಾಗುವ ಮತ್ತು ಧಾರ್ಮಿಕ ನಂಬುಗೆಯ ಹಕ್ಕುಗಳನ್ನು ಮಕ್ಕಳ ಭಾಗವಹಿಸುವ ಹಕ್ಕುಗಳೆಂದು ಪರಿಗಣಿಸಲಾಗಿದೆ.

### ಮಕ್ಕಳ ಹಕ್ಕುಗಳ ಒಡಂಬಡಿಕೆಯ ಪ್ರಮುಖ ಹಕ್ಕುಗಳು

ಈ ಒಡಂಬಡಿಕೆಯಲ್ಲಿ 54 ಮಕ್ಕಳ ಹಕ್ಕುಗಳನ್ನು ಸೇರಿಸಲಾಗಿದೆ. ಅವುಗಳಲ್ಲಿ ಪ್ರಮುಖವಾಗಿರುವವು ಈ ಕೆಳಗಿನಂತಿವೆ;



- ಜೀವಿಸುವ ಹಕ್ಕು
- ಶಿಕ್ಷಣ ಪಡೆಯಲು ಹಕ್ಕು
- ಅಭಿಪ್ರಾಯ ವ್ಯಕ್ತಪಡಿಸುವ ಹಕ್ಕು
- ರಾಷ್ಟ್ರೀಯತೆಯನ್ನು ಪಡೆಯುವ ಹಕ್ಕು
- ಧಾರ್ಮಿಕ ಹಕ್ಕು
- ಪೌಷ್ಠಿಕತೆಯ ಹಕ್ಕು
- ಆರೋಗ್ಯ ಮತ್ತು ರಕ್ಷಣೆಯ ಹಕ್ಕು
- ನಿಂದನೆಯಿಂದ ರಕ್ಷಿಸಿಕೊಳ್ಳುವ ಹಕ್ಕು
- ಶೋಷಣೆಯಿಂದ ರಕ್ಷಣೆ ಪಡೆಯುವ ಹಕ್ಕು
- ನಿರ್ಲಕ್ಷ್ಯದಿಂದ ರಕ್ಷಿಸಿಕೊಳ್ಳುವ ಹಕ್ಕು
- ವಿಕಾಸ ಹೊಂದುವ ಹಕ್ಕು.
- ಮನರಂಜನೆಯ ಹಕ್ಕು
- ಸಾಮಾಜಿಕ ಭದ್ರತೆಯ ಹಕ್ಕು
- ಗುರುತಿಸಿಕೊಳ್ಳುವ ಹಕ್ಕು
- ಪಾಲಕರೊಂದಿಗೆ ಬದುಕುವ ಹಕ್ಕು
- ಪ್ರಶ್ನಿಸುವ ಹಕ್ಕು
- ಮಾಹಿತಿ ಪಡೆಯುವ ಹಕ್ಕು
- ಸ್ವಾತಂತ್ರ್ಯದ ಹಕ್ಕು

### ಮಕ್ಕಳ ಹಕ್ಕುಗಳ ಮಹತ್ವ (Importance of Children rights)

- ಉತ್ತಮ ಗುಣಮಟ್ಟದ ಜೀವನ ಸಾಗಿಸಲು ಮಕ್ಕಳ ಹಕ್ಕುಗಳು ಅವಕಾಶ ಕಲ್ಪಿಸುತ್ತವೆ.
- ಮಕ್ಕಳನ್ನು ಎಲ್ಲತರದ ಕ್ರೌರ್ಯ ಮತ್ತು ಶೋಷಣೆಯಿಂದ ರಕ್ಷಿಸುತ್ತವೆ.
- ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಸಹಾಯಕವಾಗಿವೆ.
- ಹಕ್ಕುಗಳು ಮಕ್ಕಳ ಸರ್ವಾಂಗೀಣ ಪ್ರಗತಿಗೆ ಸಹಾಯಕವಾಗಿದೆ.
- ಮಗುವಿನ ಆರೋಗ್ಯ ಮತ್ತು ಬೆಳವಣಿಗೆಯಲ್ಲಿ ಕುಟುಂಬದ ಪಾತ್ರ ಮಹತ್ವದ್ದು ಎಂದು ಒತ್ತಿ ಹೇಳುತ್ತವೆ.
- ಮಕ್ಕಳು ಸಮಾಜದಲ್ಲಿ ತಮ್ಮ ಸಾಮರ್ಥ್ಯ ಬೆಳೆಸಿಕೊಳ್ಳಲು ಸಹಾಯಕವಾಗಿವೆ.
- ಮಗುವಿಗೆ ಮುಕ್ತ ಸ್ವಾತಂತ್ರ್ಯ ಮತ್ತು ರಕ್ಷಣೆ ಒದಗಿಸಿವೆ.
- ಮಕ್ಕಳ ಸರಳ ಜೀವನಕ್ಕೆ ರಾಜ್ಯ ಸರಕಾರಗಳ ಹೊಣೆಗಾರಿಕೆಯನ್ನು ತಿಳಿಸಿವೆ.
- ಮಕ್ಕಳ ಹಕ್ಕುಗಳ ಪಾಲನೆ ಮತ್ತು ಪೋಷಣೆ ಸರಕಾರ ಮತ್ತು ಸಮಸ್ತ ಜನರ ಕರ್ತವ್ಯವಾಗಿದೆ.
- ಮಕ್ಕಳು ಸುರಕ್ಷತೆಯಿಂದ ಬದುಕಲು ಅವಕಾಶ ಕಲ್ಪಿಸಿವೆ.

### ಮಕ್ಕಳ ಹಕ್ಕುಗಳ ಪೋಷಣೆಯಲ್ಲಿ ಶಾಲೆಯ ಪಾತ್ರ (Role of School in child right Protection)

- ಮಕ್ಕಳ ಹಕ್ಕುಗಳ ಕುರಿತು ಸಮ್ಮೇಳನ, ಭಾಷಣ, ಮುಂತಾದ ಕಾರ್ಯಕ್ರಮ ಏರ್ಪಡಿಸುವುದರ ಮೂಲಕ ಮಕ್ಕಳಿಗೆ ಅವರ ಹಕ್ಕುಗಳ ಅರಿವು ಮೂಡಿಸುವುದು.
- ಶಿಕ್ಷಣದಿಂದ ವಂಚಿತರಾದ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಪುನಃ ಶಾಲೆಗೆ ಕರೆತರುವುದು.
- ಮಕ್ಕಳ ಬೌದ್ಧಿಕ ಹಾಗೂ ದೈಹಿಕ ಬೆಳವಣಿಗೆಗೆ ಪೂರಕವಾದ ಪೌಷ್ಠಿಕ ಆಹಾರ ದೊರೆಯುವಂತೆ ಮಾಡುವುದು.
- ಸಾಮಾಜಿಕವಾಗಿ ಅವಕಾಶ ವಂಚಿತ ಮಕ್ಕಳಿಗೆ "ಸೇತು ಬಂಧ ಶಿಕ್ಷಣ" ನೀಡುವುದು.
- ಮಕ್ಕಳಿಗೆ ವಾಕ್ ಸ್ವಾತಂತ್ರ್ಯ ನೀಡುವುದು.
- ಶಾಲೆಯ ಒಳಗೆ ಮತ್ತು ಹೊರಗೆ ಮಕ್ಕಳ ವಿಚಾರಗಳಿಗೆ ಗೌರವ ನೀಡುವುದು.

- ಮಕ್ಕಳಿಗೆ ಸ್ವತಂತ್ರವಾಗಿ ಕಲಿಯಲು ಅವಕಾಶ ಕಲ್ಪಿಸಿಕೊಡುವುದು.
- ಮಕ್ಕಳನ್ನು ಸ್ವತಂತ್ರ ವ್ಯಕ್ತಿಯೆಂದು ಗೌರವಿಸುವುದು.
- ಲಿಂಗ, ಜಾತಿ, ಧರ್ಮ ಎಂಬ ತಾರತಮ್ಯ ಮಾಡದೆ ಸಮಾನ ಕಲಿಕೆಯ ಅವಕಾಶ ಕಲ್ಪಿಸಿಕೊಡುವುದು.
- ಮಕ್ಕಳಿಗೆ ಆಟ, ಪಾಠ, ಮನರಂಜನೆಗೆ ಅವಕಾಶ ಕಲ್ಪಿಸಿಕೊಡುವುದು.
- ಮಗುವನ್ನು ನಿಂದಿಸದೇ ಅವರ ಘನತೆಯನ್ನು ಎತ್ತಿ ಹಿಡಿಯುವುದು.
- ಶಾಲೆಯು ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವುದು.

## ಮಕ್ಕಳ ಹಕ್ಕುಗಳ ರಾಷ್ಟ್ರೀಯ ರಕ್ಷಣಾ ಆಯೋಗ (National Commission for Protection of Children Rights- NCPCR)

ಭಾರತವು ಮಕ್ಕಳ ಹಕ್ಕುಗಳ ರಕ್ಷಣೆಗೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡಲು ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು ಸಂಸತ್ತಿನ ಕಾಯ್ದೆಯ ಮೂಲಕ 29 ಡಿಸೆಂಬರ್ 2006 ರಂದು ಸ್ಥಾಪಿಸಲಾಯಿತು.

ಅದರಂತೆ ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗವನ್ನು(KSCPCR) ಜುಲೈ 2009 ರಲ್ಲಿ ಸ್ಥಾಪಿಸಲಾಯಿತು.

## ಮಕ್ಕಳ ಹಕ್ಕುಗಳ ರಾಷ್ಟ್ರೀಯ ರಕ್ಷಣಾ ಆಯೋಗದ ಕಾರ್ಯಗಳು(Functions of NCPCR)

1. ಮಕ್ಕಳ ಹಕ್ಕುಗಳನ್ನು ರಕ್ಷಿಸಲು ಸದ್ಯ ಚಾಲ್ತಿಯಲ್ಲಿರುವ ಯಾವುದೇ ಕಾನೂನುಗಳನ್ನು ಪರಿಶೀಲಿಸಿ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಶಿಫಾರಸ್ಸು ಮಾಡುವುದು.
2. ಇಂತಹ ರಕ್ಷಣೆಗಳ ವಿಚಾರದಲ್ಲಿ ಮಾಡಿದ ಕೆಲಸಗಳ ಬಗೆಗಿನ ವರದಿಗಳನ್ನು ವಾರ್ಷಿಕವಾಗಿ ಅಥವಾ ಆಯೋಗವು ಸೂಕ್ತವೆಂದು ಭಾವಿಸುವ ಅವಧಿಗಳಲ್ಲಿ ಸರ್ಕಾರಕ್ಕೆ ಸಲ್ಲಿಸುವುದು.
3. ಮಕ್ಕಳ ಹಕ್ಕುಗಳ ಉಲ್ಲಂಘನೆಯ ಬಗ್ಗೆ ತನಿಖೆ ಮಾಡಿ ಅಂತಹ ಪ್ರಕರಣಗಳಲ್ಲಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಶಿಫಾರಸ್ಸು ಮಾಡವುದು.
4. ಭಯೋತ್ಪಾದನೆ, ಕೋಮು ಗಲಭೆ, ಹಿಂಸಾಚಾರ, ಪ್ರಾಕೃತಿಕ ವಿಕೋಪ, ಕೌಟುಂಬಿಕ ಹಿಂಸೆ, ಎಚ್.ಐ.ವಿ/ ಏಡ್ಸ್ ಮಕ್ಕಳ ಸಾಗಣೆ ಮತ್ತು ಮಾರಾಟ, ಮಕ್ಕಳ ಮೇಲೆ ದುರ್ವರ್ತನೆ, ಚಿತ್ರ ಹಿಂಸೆ ಮತ್ತು ಶೋಷಣೆ, ಲೈಂಗಿಕ ಚಿತ್ರ ತೆಗೆಯುವದು ಮತ್ತು ಲೈಂಗಿಕ ಶೋಷಣೆ ಮೊದಲಾದವುಗಳಿಂದ ಮಕ್ಕಳ ಹಕ್ಕುಗಳಿಗೆ ಧಕ್ಕೆಯಾಗುತ್ತಿರುವ ಎಲ್ಲ ವಿಚಾರಗಳನ್ನು ಪರಿಶೀಲಿಸಿ ಕೈಗೊಳ್ಳಬೇಕಾದ ಸೂಕ್ತ ಪರಿಹಾರ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವುದು.
5. ವಿಶೇಷ ಕಾಳಜಿ ಮತ್ತು ರಕ್ಷಣೆಯ ಅಗತ್ಯವಿರುವ ಮಕ್ಕಳ ಬಗ್ಗೆ ಪರಿಶೀಲನೆ ನಡೆಸುವುದು. ಇದರಲ್ಲಿ ಸಂಕಷ್ಟದಲ್ಲಿರುವ ಮಕ್ಕಳು, ನಿರ್ಲಕ್ಷ್ಯಕ್ಕೆ ಒಳಗಾದ ಮತ್ತು ಅವಕಾಶ ವಂಚಿತ ಮಕ್ಕಳು, ಕಾನೂನಿನೊಡನೆ ಸಂಘರ್ಷಕ್ಕೆ ಇಳಿದ ಮಕ್ಕಳು, ಕುಟುಂಬ ರಹಿತ ಮಕ್ಕಳು ಮತ್ತು ಕಾರಾಗೃಹವಾಸಿಗಳ ಮಕ್ಕಳು ಸೇರಿದ್ದಾರೆ. ಈ ವಿಚಾರದಲ್ಲಿ ಕೈಗೊಳ್ಳಬೇಕಾದ ಸೂಕ್ತ ಕ್ರಮಗಳ ಬಗ್ಗೆ ಶಿಫಾರಸ್ಸು ಮಾಡುವುದು.
6. ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಒಪ್ಪಂದಗಳು ಮತ್ತು ಇತರ ಅಂತರ್‌ರಾಷ್ಟ್ರೀಯ ಕಾನೂನುಗಳ ಬಗ್ಗೆ ಅಧ್ಯಯನ ನಡೆಸಿ, ಈಗಿರುವ ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಇತರ ಚಟುವಟಿಕೆಗಳ ಬಗ್ಗೆ ಕಾಲಕಾಲಕ್ಕೆ ಪರಾಮರ್ಶೆ ಕೈಗೊಂಡು ಮಕ್ಕಳ ಹಿತಾಸಕ್ತಿಯ ಹಿನ್ನೆಲೆಯಲ್ಲಿ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಶಿಫಾರಸ್ಸುಗಳನ್ನು ಮಾಡುವುದು.
7. ಮಕ್ಕಳ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆಯನ್ನು ಕೈಗೊಳ್ಳುವುದು ಮತ್ತು ಸಂಶೋಧನಾ ಕಾರ್ಯಗಳಿಗೆ ಉತ್ತೇಜನ ನೀಡುವುದು.
8. ಸಮಾಜದ ವಿವಿಧ ವರ್ಗಗಳಲ್ಲಿ ಮಕ್ಕಳ ಹಕ್ಕುಗಳನ್ನು ಮತ್ತು ಮಕ್ಕಳ ರಕ್ಷಣೆಗಾಗಿ ಇರುವ ವ್ಯವಸ್ಥೆಗಳನ್ನು ಕುರಿತು ಅರಿವು, ಜಾಗೃತಿ ಉಂಟು ಮಾಡಲು ಪ್ರಕಟಣೆಗಳು, ಮಾದ್ಯಮಗಳ ಬಳಕೆ, ವಿಚಾರ ಸಂಕಿರಣಗಳು ಮತ್ತು ಲಭ್ಯವಿರುವ ಇತರ ಮಾರ್ಗಗಳನ್ನು ಬಳಸುವುದು.

9. ಕೇಂದ್ರ ಅಥವಾ ರಾಜ್ಯ ಸರ್ಕಾರಗಳ ಅಡಿಯಲ್ಲಿ ಅಥವಾ ಸಾಮಾಜಿಕ ಸಂಸ್ಥೆಗಳು ಮಕ್ಕಳನ್ನು ಚಿಕಿತ್ಸೆ, ಪುನರ್ವಸತಿ, ಸುಧಾರಣೆ ಅಥವಾ ರಕ್ಷಣೆಗಾಗಿ ಮಕ್ಕಳನ್ನು ಯಾವುದೇ ರೀತಿಯ ಮಕ್ಕಳ ನಿಲಯಗಳಲ್ಲಿ ಅಥವಾ ಇನ್ನಿತರ ಸ್ಥಳಗಳಲ್ಲಿ ಇರಿಸಿಕೊಂಡಿದ್ದಲ್ಲಿ ಅಂತಹ ನಿಲಯಗಳನ್ನು ಪರಿಶೀಲಿಸುವುದು ಅಥವಾ ಪರಿಶೀಲನೆಗೆ ಸೂಚಿಸಿ ಅವಶ್ಯಕತೆ ಇದ್ದಲ್ಲಿ ಅಲ್ಲಿನ ವ್ಯವಸ್ಥೆಗಳನ್ನು ಸುಧಾರಿಸಲು ಸೂಚಿಸುವುದು.
10. ಈ ಕೆಳಕಂಡ ವಿಷಯಗಳಿಗೆ ಸಂಬಂಧಿಸಿದ ದೂರುಗಳ ಬಗ್ಗೆ ತನಿಖೆ ನಡೆಸುವದು ಮತ್ತು ಸ್ವಯಂ ಪ್ರೇರಿತವಾಗಿ ಗಮನ ಹರಿಸುವುದು:
    - ಮಕ್ಕಳ ಹಕ್ಕುಗಳ ಹರಣ ಮತ್ತು ಉಲ್ಲಂಘನೆ,
    - ಮಕ್ಕಳ ರಕ್ಷಣೆ ಮತ್ತು ಅಭಿವೃದ್ಧಿಗಾಗಿಯೇ ಇರುವ ಕಾನೂನುಗಳನ್ನು ಜಾರಿಗೆ ತಾರದೇ ಇರುವುದು,
    - ಮಕ್ಕಳ ಸಂಕಷ್ಟಗಳನ್ನು ನಿವಾರಿಸುವ ಮತ್ತು ಮಕ್ಕಳ ಕಲ್ಯಾಣದ ಭರವಸೆ ನೀಡುವ, ಮಕ್ಕಳಿಗೆ ಪರಿಹಾರ ಕಲ್ಪಿಸುವ ಗುರಿ ಹೊಂದಿರುವ ಕಾರ್ಯನೀತಿ ನಿರ್ಧಾರಗಳು, ಮಾರ್ಗಸೂಚಿಗಳು ಅಥವಾ ನಿರ್ದೇಶನಗಳನ್ನು ಜಾರಿಗೆ ತರದೇ ಇರುವುದು ಅಥವಾ ಇಂತಹ ವಿಷಯಗಳಿಂದ ಉದ್ಭವಿಸುವ ವಿವಾದಗಳನ್ನು ಸೂಕ್ತ ಪ್ರಾಧಿಕಾರಗಳೊಂದಿಗೆ ಕ್ರಮ ಕೈಗೊಳ್ಳಲು ಮುಂದಾಗುವುದು.

## 5.3 ಶಿಕ್ಷಣ ಹಕ್ಕು ಕಾಯಿದೆ Right to Education-2009 (RTE)




### ಐತಿಹಾಸಿಕ ಹಿನ್ನೆಲೆ

ಶಿಕ್ಷಣ ಹಕ್ಕು ಕಾಯ್ದೆ–2009 ಇದು 1ನೇ ಎಪ್ರೀಲ್ 2010 ರಿಂದ ಭಾರತದಲ್ಲಿ ಜಾರಿಗೆ ಬಂದಿದೆ. ಜಾಗತಿಕ ಶೈಕ್ಷಣಿಕ ವರದಿಯನ್ವಯ ಜಗತ್ತಿನ ಅನಕ್ಷರತೆಯಲ್ಲಿ ಭಾರತ ಶೇ.32.3 ಪಾಲನ್ನು ಹೊಂದಿದೆ. ಶಿಕ್ಷಣಕ್ಕಾಗಿ ಭಾರತವು ರಾಷ್ಟ್ರದ ಆರ್ಥಿಕತೆಯ ಶೇ.16.3 ಭಾಗವನ್ನು ವಿನಿಯೋಗಿಸಿದರೆ ಜಗತ್ತಿನ ಷೇರು ಶೇ.23.3 ಆಗಿದೆ. ಸ್ವಾತಂತ್ರ್ಯನಂತರ 1950 ರಲ್ಲಿ ಅಳವಡಿಸಿಕೊಳ್ಳಲಾದ ಭಾರತದ ಸಂವಿಧಾನವು ದೇಶದಲ್ಲಿ ಶಿಕ್ಷಣದ ಬೆಳವಣಿಗೆ ಮತ್ತು ನಿರ್ವಹಣೆಗೆ ಹಲವು ಅವಕಾಶಗಳನ್ನು ಕಲ್ಪಿಸಿದೆ.

ಸಂವಿಧಾನದ 45 ನೇ ವಿಧಿಯು " ಸಂವಿಧಾನ ಜಾರಿಗೆ ಬಂದ ಹತ್ತು ವರ್ಷದ ಒಳಗಾಗಿ ಆರರಿಂದ ಹದಿನಾಲ್ಕು ವಯೋಮಾನದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವದು". ಎಂಬ ಆಶಯವನ್ನು ಹೊಂದಲಾಗಿತ್ತಾದರೂ, ಇದು ರಾಜ್ಯ ನಿರ್ದೇಶಕ ತತ್ವಗಳಲ್ಲಿ ಬರುವದರಿಂದ ಕಾನೂನಿನ ಮನ್ನಣೆ ನೀಡಲು ಸಂವಿಧಾನಾತ್ಮಕವಾಗಿ ಅವಕಾಶವಿರಲಿಲ್ಲವಾಗಿದ್ದರಿಂದ ಪರಿಪೂರ್ಣವಾದ ಯಶಸ್ಸು ಸಾಧ್ಯವಾಗಿಲ್ಲವೆಂಬುದು ವಾಸ್ತವ ಸತ್ಯ. ಸಂವಿಧಾನ ಜಾರಿಗೆ ಬಂದ ಸಂದರ್ಭದಲ್ಲಿ 365 ಮಿಲಿಯನ್ ಜನಸಂಖ್ಯೆಯಲ್ಲಿ ನಮ್ಮ ರಾಷ್ಟ್ರದ ಸಾಕ್ಷರತಾ ಪ್ರಮಾಣ ಶೇ.16 ರಷ್ಟು ಇದ್ದು ಪ್ರಾಥಮಿಕ ಶಿಕ್ಷಣದ ದಾಖಲಾತಿ ಪ್ರಮಾಣ ಶೇ.40 ಆಗಿತ್ತು. ಆರ್ಥಿಕ ಕೊರತೆಯಿಂದಾಗಿ ಈ ಅವಧಿಯಲ್ಲಿ ಸಂವಿಧಾನದ ಆಶಯ ಈಡೇರಿಸಲು ಸಾದ್ಯವಾಗಲಿಲ್ಲ.

1966ರ ಕೊಠಾರಿ ಆಯೋಗದ ಶಿಫಾರಸ್ಸಿನ ಆಧಾರದ ಮೇಲೆ ಪ್ರಥಮ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಲಾಯಿತು. 1976 ರಲ್ಲಿ ಸಂವಿಧಾನಕ್ಕೆ 42ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿ ಪಟ್ಟಿಗೆ ಸೇರಿಸಲಾಯಿತು. ಇದರಂತೆ ಶಿಕ್ಷಣ ನೀತಿಗಳನ್ನು ಕೇಂದ್ರ ಮತ್ತು ರಾಜ್ಯಗಳು ಪರಸ್ಪರ ಹೊಂದಾಣಿಕೆ ಮತ್ತು ಸಹಭಾಗಿತ್ವದಲ್ಲಿ ನಿರ್ವಹಿಸುವಂತಾಯಿತು.

1986ರ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಂತೆ( NPE-1986) ಶಿಕ್ಷಣದ ಸಾರ್ವತ್ರೀಕರಣವು 1990ರ ಅಂತ್ಯಕ್ಕೆ ಎಲ್ಲಾ ಮಕ್ಕಳಿಗೆ ಐದು ವರ್ಷಗಳ ಶಾಲಾ ಶಿಕ್ಷಣ ಮತ್ತು 1993 ರ ವೇಳೆಗೆ ಎಲ್ಲಾ ಮಕ್ಕಳು 8 ವರ್ಷಗಳ ಶಾಲಾ ಶಿಕ್ಷಣ ಪೂರೈಸಬೇಕೆಂಬ ಹೊಸ ಕಾಲಮಿತಿಯ ಗುರಿಯನ್ನು ನಿಗದಿಗೊಳಿಸಲಾಗಿತ್ತು.

ಭಾರತ ಸಂವಿಧಾನದ ಪರಿಚ್ಛೇದ 21ರ ವಿಧಿಯ ಮೂಲಕ ಈ ದೇಶದ ಪ್ರತಿಯೊಬ್ಬ ನಾಗರಿಕನೂ ಜೀವಿಸುವ ಮೂಲಭೂತ ಹಕ್ಕನ್ನು ಹೊಂದಿರುವನು. 1993ರಲ್ಲಿ ಜೆ.ಪಿ.ಉನ್ನಿಕೃಷ್ಣನ್‌ರವರಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸರ್ವೋಚ್ಛ

ನ್ಯಾಯಾಲಯವು ಜೀವಿಸುವ ಹಕ್ಕು ಮೂಲಭೂತ ಹಕ್ಕಾದರೆ ಶಿಕ್ಷಣ ಹಕ್ಕು ಕೂಡ ಪ್ರತಿಯೊಬ್ಬ ನಾಗರಿಕನ ಮೂಲಭೂತ ಹಕ್ಕು ಎಂದು ತೀರ್ಪು ಕೊಟ್ಟಿದ್ದರಿಂದ 2002 ರಲ್ಲಿ ಸಂವಿಧಾನದ 86 ನೇ ತಿದ್ದುಪಡಿಯ ಮೂಲಕ 21(A) ವಿಧಿಯನ್ನು ಜಾರಿಗೊಳಿಸಿ ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಅಂಗೀಕರಿಸಲಾಯಿತು. ಇದಕ್ಕೆ ಪೂರ್ವಾನ್ವಯವಾಗುವಂತೆ 2001 ರಿಂದಲೇ ಸರ್ವ ಶಿಕ್ಷಣ ಅಭಿಯಾನ ಯೋಜನೆಯು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಸಮರ್ಪಕ ಅನುಷ್ಠಾನಕ್ಕೆ ಹತ್ತು ಹಲವು ಕಾರ್ಯ ಯೋಜನೆಗಳ ಮೂಲಕ ಪ್ರಯತ್ನಿಸುತ್ತಲೇ ಸಾಗಿದೆ.

"ಈ ಮೇಲಿನ ಮೂಲಭೂತ ಹಕ್ಕನ್ನು ಅನುಷ್ಠಾನಗೊಳಿಸುವ ನಿಮಿತ್ಯ ರೂಪುಗೊಂಡ ಕಾಯ್ದೆಯೇ ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಕ್ಕಳ ಹಕ್ಕುಗಳ ಅಧಿನಿಯಮ–2009.".

## ಶಿಕ್ಷಣದ ಹಕ್ಕು ಕಾಯಿದೆ–2009–ಪರಿಕಲ್ಪನೆ (The Right to Education Act 2009)-Concept

"ಭಾರತದಲ್ಲಿ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸಲು ಭಾರತ ಸಂವಿಧಾನದ 21(A) ವಿಧಿಯಡಿಯಲ್ಲಿ ಭಾರತ ಸಂಸತ್ತಿನಿಂದ ಅನುಮೋದನೆಗೊಂಡು 26 ನೇ ಆಗಸ್ಟ್ 2009 ರಾಷ್ಟ್ರಪತಿಯವರಿಂದ ಅಂಗೀಕಾರವಾಗಿ ದಿನಾಂಕ 1 ನೇ ಎಪ್ರೀಲ್ 2010 ರಿಂದ ಜಾರಿಗೊಳಿಸಲಾದ ಶಿಕ್ಷಣ ಮಸೂದೆಯೇ **ಶಿಕ್ಷಣದ ಹಕ್ಕು ಕಾಯಿದೆ–2009**".

ಈ ಅಧಿನಿಯಮವು "6 ರಿಂದ 14 ವರ್ಷದೊಳಗಿನ ವಯೋಮಿತಿಯ ಪ್ರತಿಯೊಂದು ಮಗುವೂ, ತಾನಿರುವ ಪ್ರದೇಶದ ಶಾಲೆಯಲ್ಲಿ, ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳಿಸುವವರೆಗೂ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು." ಎಂದು ಹೇಳುತ್ತದೆ.

ಈ ಮಸೂದೆಯು ಕೇವಲ ಮಕ್ಕಳ ಶಿಕ್ಷಣದ ಹಕ್ಕು ಮಾತ್ರವಾಗಿರದೇ, ಬದುಕುವ ಹಕ್ಕು, ರಕ್ಷಣೆಯ ಹಕ್ಕು, ವಿಕಾಸ ಹೊಂದುವ ಹಕ್ಕು ಮತ್ತು ಮಕ್ಕಳ ಭಾಗವಹಿಸುವ ಹಕ್ಕುಗಳ ಹಿತರಕ್ಷಣೆಯ ಮೂಲ ಆಶಯದೊಂದಿಗೆ ರೂಪಗೊಂಡದ್ದಾಗಿದೆ. ಈ ಕಾಯ್ದೆಯನ್ನು **ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕಿನ ಕಾಯಿದೆ–2009** ಎಂತಲೂ ಕರೆಯುವರು. ಈ ಕಾಯ್ದೆಯು ಏಳು ಅಧ್ಯಾಯಗಳು ಮತ್ತು 38 ವಿಧಿಗಳನ್ನು ಒಳಗೊಂಡಿದೆ. ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಸಮಗ್ರ ಭಾರತ ದೇಶವು ಈ ಕಾಯಿದೆಯ ವ್ಯಾಪ್ತಿಗೊಳಪಡತಕ್ಕದ್ದು.

## ಶಿಕ್ಷಣದ ಹಕ್ಕು ಕಾಯಿದೆ–2009 ರ ಮುಖ್ಯಾಂಶಗಳು. (Salient features of RTE)

### 1. ಮಗುವಿನ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ( Right of Child to Free and Compulsory Education)

- 6 ರಿಂದ 14 ವರ್ಷದೊಳಗಿನ ವಯೋಮಿತಿಯ ಪ್ರತಿಯೊಂದು ಮಗುವೂ, ತಾನಿರುವ ಪ್ರದೇಶದ ಹತ್ತಿರದ ಶಾಲೆಯಲ್ಲಿ, ಪ್ರಾಥಮಿಕ ಶಿಕ್ಷಣದ ಹಂತ ಪೂರ್ಣಗೊಳಿಸುವವರೆಗೂ, ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪಡೆಯುವ ಹಕ್ಕನ್ನು ಹೊಂದಿರತಕ್ಕದ್ದು.
- ಶಾಲೆಯನ್ನು ಬದಲಾಯಿಸುವ ಅಥವಾ ವರ್ಗಾವಣೆ ಹೊಂದುವ ಸಂದರ್ಭದಲ್ಲಿ ಮಗುವಿನ ಇಚ್ಛೆಗನುಗುಣವಾಗಿ ಉಚಿತವಾಗಿ ಪ್ರವೇಶ ಹೊಂದುವ ಹಕ್ಕನ್ನು ಹೊಂದಿರತಕ್ಕದ್ದು.
- ಶಾಲೆಗೆ ಸೇರಿಲ್ಲದ ಮಗುವನ್ನು ವಯಸ್ಸಿಗನುಗುಣವಾಗಿ ಸೂಕ್ತ ತರಗತಿಗೆ ದಾಖಲಿಸಿಕೊಳ್ಳುವುದು ಹಾಗೂ 14 ವರ್ಷ ಮುಗಿದರೂ 8 ವರ್ಷದ ಪ್ರಾಥಮಿಕ ಶಿಕ್ಷಣ ಪೂರೈಸಲು ಅವಕಾಶ ನೀಡುವುದು.
- ಪ್ರಾಥಮಿಕ ಶಿಕ್ಷಣ ಪೂರೈಸಿದ ಮಗುವಿಗೆ ಪ್ರಮಾಣ ಪತ್ರ ನೀಡುವುದನ್ನು ಕಡ್ಡಾಯಗೊಳಿಸುವುದು ಮತ್ತು ಪರೀಕ್ಷೆಯನ್ನು 8ನೇ ತರಗತಿವರೆಗೆ ಯಾವುದೇ ಮಂಡಳಿಗಳಿಂದ ಪರೀಕ್ಷೆ ನಡೆಸದಿರುವುದು.

### 2. ಸರ್ಕಾರ, ಸ್ಥಳೀಯ ಪ್ರಾಧಿಕಾರದ ಕರ್ತವ್ಯಗಳು (Duties of Government and local authority)

- ಈ ಕಾಯಿದೆ ಜಾರಿಯಾದಂದಿನಿಂದ ಮೂರು ವರ್ಷಗಳ ಅವಧಿಯೊಳಗೆ ಎಲ್ಲ ಜನವಸತಿ ಪ್ರದೇಶಗಳಲ್ಲಿ ಶಾಲೆಗಳನ್ನು ಕಡ್ಡಾಯವಾಗಿ ಸ್ಥಾಪಿಸತಕ್ಕದ್ದು.
- ಅಗತ್ಯವಾದ ಧನಸಹಾಯವನ್ನು ಒದಗಿಸುವ ಸಮಾನ ಜವಾಬ್ದಾರಿಯು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳದ್ದಾಗಿದೆ.
- 1:30 ಶಿಕ್ಷಕ–ವಿದ್ಯಾರ್ಥಿ ಅನುಪಾತವನ್ನು ನಿಗದಿಪಡಿಸುವುದು.

- ಚುನಾವಣಾ ಕಾರ್ಯ, ಜನಗಣತಿ, ನೈಸರ್ಗಿಕ ವಿಕೋಪ ಪರಿಹಾರ ಕಾರ್ಯಗಳನ್ನು ಹೊರತುಪಡಿಸಿ ಶಿಕ್ಷಣೇತರ ಕೆಲಸಗಳಿಗೆ ಶಿಕ್ಷಕರ ನಿಯೋಜನೆಯನ್ನು ನಿಷೇಧಿಸಿದೆ.
- ಮಕ್ಕಳ ಶಿಕ್ಷಣ ಹಕ್ಕಿನ ಮೇಲ್ವಿಚಾರಣೆಗಾಗಿ ಕೇಂದ್ರ ಹಾಗೂ ರಾಜ್ಯ ಮಕ್ಕಳ ಹಕ್ಕುಗಳ ಆಯೋಗವನ್ನು ರಚಿಸುವದು. ಅದರ ಮೂಲಕ ದೂರುಗಳ ವಿಚಾರಣೆ ಮಾಡುವುದು.

## 3. ಶಾಲೆಗಳ ಜವಾಬ್ದಾರಿಗಳು (Responsibilities of School)

- ಎಲ್ಲ ಶಾಲೆಗಳು ಯುಕ್ತ ಸರಕಾರ ಅಥವಾ ಸ್ಥಳೀಯ ಪ್ರಾಧಿಕಾರದ ನಿಯಂತ್ರಣದಲ್ಲಿರಬೇಕು, ದಾಖಲಾದ ಎಲ್ಲಾ ಮಕ್ಕಳಿಗೂ ಉಚಿತ ಹಾಗೂ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು.
- ಶಾಲೆಗಳು ಒಂದನೆಯ ತರಗತಿಗೆ, ಕೊನೆಯ ಪಕ್ಷ ಆ ತರಗತಿಯ ಒಟ್ಟು ಮಕ್ಕಳ ಸಂಖ್ಯೆಯ ಶೇಕಡಾ 25 ರಷ್ಟು ಮಕ್ಕಳನ್ನು, ಹತ್ತಿರದ ದುರ್ಬಲ ಮತ್ತು ಪ್ರತಿಕೂಲ ಸ್ಥಿತಿಯ ಗುಂಪಿನಿಂದ ಸೇರಿಸಿಕೊಳ್ಳತಕ್ಕದ್ದು ಹಾಗೂ ಅವರು ಪ್ರಾಥಮಿಕ ಶಿಕ್ಷಣವನ್ನು ಪೂರ್ತಿಗೊಳಿಸುವತನಕ ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ಒದಗಿಸತಕ್ಕದ್ದು.
- ವರ್ಷದ ಯಾವುದೇ ಸಮಯದಲ್ಲಿ, ಯಾವುದೇ ವಿಧದ ಶುಲ್ಕ ಅಥವಾ ಖರ್ಚು ವೆಚ್ಚವನ್ನು, ದೇಣಿಗೆ, ಕ್ಯಾಪಿಟೇಷನ್ ಶುಲ್ಕವನ್ನು ವಸೂಲಿ ಮಾಡುವಂತಿಲ್ಲ.
- ಪ್ರವೇಶ ಸಂದರ್ಭದಲ್ಲಿ ಮಗುವನ್ನು ಅಥವಾ ಪೋಷಕರನ್ನು ಯಾವುದೇ ರೀತಿಯ ಪರಿಶೋಧನಾ ಪ್ರಕ್ರಿಯೆಗಳಿಗೆ ಒಳಪಡಿಸಬಾರದು.
- ದಾಖಲಾತಿಗೆ ವಯಸ್ಸಿನ ಪ್ರಮಾಣಪತ್ರವಾಗಲಿ ಅಥವಾ ಜನನ ಪ್ರಮಾಣ ಪತ್ರವಾಗಲಿ ಇಲ್ಲವೆಂಬ ಕಾರಣಕ್ಕೆ ಪ್ರವೇಶ ನಿರಾಕರಿಸದಿರುವುದು ಮತ್ತು ಮಗುವಿನ ವರ್ಗಾವಣೆಯನ್ನು ವಿಳಂಬ ಮಾಡದಿರುವುದು ಅಥವಾ ತಡೆಹಿಡಿಯದಿರುವುದು.
- ಎಂಟು ವರ್ಷದವರೆಗಿನ ಪ್ರಾಥಮಿಕ ಶಿಕ್ಷಣದಲ್ಲಿ ಮಗುವನ್ನು ತಡೆಹಿಡಿಯದಿರುವುದು, ಹೊರಹಾಕದಿರುವುದು ಅಥವಾ ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣಗೊಳಿಸದಿರುವುದು.
- ದೈಹಿಕ, ಮಾನಸಿಕ ದಂಡನೆ ನಿಷೇಧಿಸಿದೆ.

## 4. ಶಿಕ್ಷಕರ ಕರ್ತವ್ಯಗಳು (Duties of Teachers)

- ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಶಾಲೆಗೆ ಹಾಜರಾಗಬೇಕು.
- ನಿರ್ದಿಷ್ಟಪಡಿಸಲಾದ ಕಾಲಾವಧಿಯೊಳಗೆ ಇಡೀ ಪಠ್ಯವಿಷಯಗಳನ್ನು ಪೂರ್ತಿಗೊಳಿಸಬೇಕು.
- ಪ್ರತಿಯೊಂದು ಮಗುವಿನ ಕಲಿಕಾ ಸಾಮರ್ಥ್ಯವನ್ನು ಮೌಲ್ಯಮಾಪನ ಮಾಡಿ, ಅವಶ್ಯವಿದ್ದಲ್ಲಿ, ಹೆಚ್ಚಿನ ಸಲಹೆ ಸೂಚನೆಗಳನ್ನು ನೀಡಬೇಕು.
- ಮಕ್ಕಳ ಪೋಷಕರು ಮತ್ತು ಪಾಲಕರೊಂದಿಗೆ ನಿಯಮಿತವಾಗಿ ಸಭೆ ನಡೆಸಿ, ಅವರಿಗೆ ಅವರ ಮಕ್ಕಳ ನಿಯಮಿತ ಹಾಜರಾತಿ, ಕಲಿಕಾ ಸಾಮರ್ಥ್ಯ, ಕಲಿಕಾ ಪ್ರಗತಿ ಮತ್ತು ಮಗುವಿನ ಕುರಿತಾದ ಇನ್ನಾವುದೇ ಮಾಹಿತಿಯನ್ನು ತಿಳಿಯಪಡಿಸಬೇಕು.
- ಶಿಕ್ಷಕರು ಖಾಸಗಿ/ಮನೆ ಪಾಠ ಮಾಡುವುದನ್ನು ನಿಷೇಧಿಸಿದೆ.

## 5. ಪೋಷಕರ ಮತ್ತು ಪಾಲಕರ ಕರ್ತವ್ಯಗಳು (Duties of Parents and Guardians)

ಪ್ರತಿಯೊಬ್ಬ ತಂದೆ/ತಾಯಿ/ ಪೋಷಕ ತಮ್ಮ ಮಕ್ಕಳನ್ನು ಅಥವಾ ತಮ್ಮ ಸಂರಕ್ಷಣೆಯಲ್ಲಿರುವ ಪ್ರತಿಯೊಂದು ಮಗುವನ್ನೂ ಪ್ರಾಥಮಿಕ ಶಿಕ್ಷಣಕ್ಕಾಗಿ ಹತ್ತಿರದ ಶಾಲೆಗೆ ಸೇರಿಸುವುದು.

ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ–2009 ನ್ನು ಆಧಾರವಾಗಿಟ್ಟುಕೊಂಡು, ಭಾರತದ ಎಲ್ಲ ರಾಜ್ಯಗಳು ನಿಯಮಗಳನ್ನು ರೂಪಿಸಿಕೊಂಡಿವೆ. ಕರ್ನಾಟಕದಲ್ಲಿ ಸರ್ಕಾರದ ರಾಜ್ಯ ಕರ ಪತ್ರ ದಿನಾಂಕ 28/04/2012 ರ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸಿ 2012–13 ನೇ ಸಾಲಿನಿಂದ ಜಾರಿಗೆ ತಂದು "ಕರ್ನಾಟಕ ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಅಧಿನಿಯಮ" ಎಂದು ಕರೆಯಲಾಗಿದೆ.

## 5.4. ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (National Curriculum Framework(NCF)-2005

**ಐತಿಹಾಸಿಕ ಹಿನ್ನೆಲೆ:** ಭಾರತೀಯ ಹೊಸ ಶಿಕ್ಷಣ ನೀತಿ–1986 ರ ಸಲಹೆಯಂತೆ ಪಠ್ಯಕ್ರಮವನ್ನು ಪ್ರತಿ ಐದು ವರ್ಷಕ್ಕೊಮ್ಮೆ ಪರಿಷ್ಕರಿಸಲಾಗುತ್ತಿದೆ. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರು ಲೋಕಸಭೆಯಲ್ಲಿ ನೀಡಿದ ಹೇಳಿಕೆಯ ನಂತರ ಎನ್.ಸಿ.ಇ.ಆರ್.ಟಿಯ ಪಠ್ಯಕ್ರಮ ಪರಿಷ್ಕರಣೆಯ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ತಿಳಿಸಿದ ಮೇಲೆ ಮಂಡಳಿಯ ಕಾರ್ಯಕಾರಿ ಸಮಿತಿಯು 2004 ಜುಲೈ ತಿಂಗಳ ದಿನಾಂಕ 14ರಿಂದ 19ರವರೆಗೆ ನಡೆದ ಸಭೆಯಲ್ಲಿ, ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟನ್ನು ಪರಿಷ್ಕರಿಸಲು ತೀರ್ಮಾನಿಸಿತು. ಇದಾದ ನಂತರ ಯಶಪಾಲ್ ಶರ್ಮಾರ 'ಲರ್ನಿಂಗ್ ವಿತೌಟ್ ಬರ್ಡನ್ (1993) ವರದಿಯನ್ನು ಆಧರಿಸಿ ರಾಷ್ಟ್ರೀಯ ಶಾಲಾ ಶಿಕ್ಷಣ ಪಠ್ಯಕಮ್ರದ ನೆಲೆಗಟ್ಟನ್ನು (ರಾ. ಶಾ. ಶಿ. ಪ. ನೆ. 2000) ಪರಿಷ್ಕರಿಸುವುದು ಅಗತ್ಯವೆಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ಶಿಕ್ಷಣ ಕಾರ್ಯದರ್ಶಿಗಳು ಎನ್.ಸಿ.ಇ.ಆರ್.ಟಿ.ಯ ನಿರ್ದೇಶಕರಿಗೆ ತಿಳಿಸಿದರು. ಈ ತೀರ್ಮಾನಗಳ ಹಿನ್ನೆಲೆಯಲ್ಲಿ ಪ್ರೊ.ಯಶ್‌ಪಾಲ್‌ರವರ ಅಧ್ಯಕ್ಷತೆಯಲ್ಲಿ ಒಂದು ರಾಷ್ಟ್ರೀಯ ಚಾಲನಾ ಸಮಿತಿ ಮತ್ತು 21 ರಾಷ್ಟ್ರೀಯ ಕೇಂದ್ರ ಗುಂಪುಗಳ ರಚನೆ ಮಾಡಿ ರಾಷ್ಟ್ರದ ಎಲ್ಲೆಡೆ ವಿಚಾರ ವಿಮರ್ಶೆಗಳನ್ನು ಏರ್ಪಡಿಸಿ, ಸಾರ್ವಜನಿಕರ ಅಭಿಪ್ರಾಯಗಳನ್ನು ದಿನಪತಿಕ್ರೆಗಳ ಮೂಲಕ ಪಡೆದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ನ್ನು ರೂಪಿಸಲಾಯಿತು.

ಪರಿಷ್ಕೃತ ರಾಷ್ಟ್ರೀಯ ಪಠ್ಯಕ್ರಮ ನೆಲೆಗೆಟ್ಟು ರವೀಂದ್ರನಾಥ ಟ್ಯಾಗೋರರ **'ಸಿವಿಲೈಜೆಶನ್ ಅಂಡ್ ಪ್ರೋಗ್ರೆಸ್'** ಎಂಬ ಪ್ರಬಂಧದಿಂದ ತೆಗೆದುಕೊಂಡ ಉದ್ಧರಣೆಯೊಂದಿಗೆ ಪ್ರಾರಂಭವಾಗುತ್ತದೆ. ಮಕ್ಕಳ ಬಾಲ್ಯದ ಕೀಲಿಕೈಗಳಾದ **'ಸೃಜನಶೀಲ ಚೈತನ್ಯ'** ಮತ್ತು **'ಧಾರಾಳ ಸಂತಸ'** ಇವೆರಡನ್ನು ಹಿರಿಯರ ಪ್ರಪಂಚವು ಸ್ವಲ್ಪವೂ ಚಿಂತಿಸದೆ ಹಾಳುಗೆಡವುತ್ತದೆ ಎಂದು ಅವರು ನೆನಪಿಸುತ್ತಾರೆ.

### ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ರ ಮಾರ್ಗದರ್ಶಿ ತತ್ವಗಳು (Guiding principles of NCF-2005)

ಮಕ್ಕಳ ಮೇಲೆ ಕಲಿಕೆ ಒಂದು ಹೊರೆಯಾಗದಂತೆ ಮತ್ತು ಒತ್ತಡವನ್ನುಂಟು ಮಾಡದಂತೆ ಪಠ್ಯಕ್ರಮದ ವಿಕಾಸಕ್ಕೆ ಮಾರ್ಗದರ್ಶಿ ತತ್ವಗಳನ್ನು ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು ಪ್ರಸ್ತುತಪಡಿಸುತ್ತಿದೆ.

1. ಜ್ಞಾನವನ್ನು ಶಾಲೆಯ ಹೊರಗಿನ ಜೀವನಕ್ಕೆ ಸಂಬಂಧ ಕಲ್ಪಿಸುವುದು;
2. ಕಂಠಪಾಠದ ಹಳೆಯ ವಿಧಾನ ಕೈಬಿಟ್ಟು ಕಲಿಕೆಯ ವಿಧಾನ ಬದಲಾಗುವಂತೆ ಮಾಡುವುದು;
3. ಪಠ್ಯಕ್ರಮವು ಪಠ್ಯಪುಸ್ತಕಗಳನ್ನು ಮೀರುವಂತೆ ಮಾಡಿ ಅವನ್ನು ಸಮೃದ್ಧಗೊಳಿಸುವುದು;
4. ಪರೀಕ್ಷೆಗಳನ್ನು ಹೆಚ್ಚು ಸುಸಂಗತಗೊಳಿಸುವುದು ಮತ್ತು ಅದನ್ನು ವರ್ಗ ಕೋಣೆಯ ಬದುಕಿನೊಂದಿಗೆ ಒಗ್ಗೂಡಿಸುವುದು.
5. ರಾಷ್ಟ್ರೀಯ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಅನನ್ಯತೆಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವವರ ಬಗ್ಗೆ ಕಳಕಳಿಯಿಂದ ವರ್ತಿಸುವುದು ಅಗತ್ಯ.

### ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ರ ಮುಖ್ಯ ಲಕ್ಷಣಗಳು(Salient Features of NCF-2005)

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ರ ಮುಖ್ಯ ಉದ್ದೇಶ ರಾಷ್ಟ್ರೀಯ ಶಿಕ್ಷಣದ ವ್ಯವಸ್ಥೆಯನ್ನು ಬಲಪಡಿಸುವುದಾಗಿದೆ. ಅದರ ಕೆಲವು ಪ್ರಧಾನ ಲಕ್ಷಣಗಳನ್ನು ಈ ಕೆಳಕಂಡಂತೆ ಗುರುತಿಸಿದೆ.

- ಭಾರತದ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳನ್ನು ಸಾಕಾರಗೊಳಿಸುವುದು.
- ಪಠ್ಯಕ್ರಮದ ಹೊರೆಯನ್ನು ಕಡಿಮೆ ಮಾಡುವುದು.
- ಎಲ್ಲರಿಗೂ ಮೌಲ್ಯಾಧಾರಿತ /ಗುಣಾತ್ಮಕ ಶಿಕ್ಷಣ(ಸರ್ವರಿಗೂ ಶಿಕ್ಷಣ) ದೊರಕಿಸುವುದು.
- ವ್ಯವಸ್ಥಿತ ಸುಧಾರಣೆಗೆ ಅನುವು ಮಾಡಿ ಕೊಡುವುದು.
- ಏಕ ರೀತಿಯ (ಸಮಾನ) ಶಾಲಾ ವ್ಯವಸ್ಥೆ ದೊರಕಿಸಿಕೊಡುವುದು.
- ಸ್ವತಂತ್ರ ಚಿಂತನೆ ಹಾಗೂ ಕ್ರಿಯಾಶೀಲತೆ, ಇತರರ ಭಾವನೆಗಳಿಗೆ ಅಲ್ಲದೇ ಹೊಸ ಸನ್ನಿವೇಶಗಳಿಗೆ ನವ್ಯ ಹಾಗೂ ಸೃಜನಶೀಲ ರೀತಿಯಲ್ಲಿ ಸ್ಪಂದಿಸುವಿಕೆ ಎಂಬ **ಶಿಕ್ಷಣದ ಗುರಿಗಳನ್ನು** ರೂಪಿಸಲಾಗಿದೆ.
- ಕಲಿಕೆಯಲ್ಲಿ ರಚನಾತ್ಮಕ ವಿಧಾನವನ್ನು ಬಳಸಿಕೊಳ್ಳಲು ಪ್ರೋತ್ಸಾಹಿಸುವದು.

## ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಪ್ರಮುಖ ಶಿಫಾರಸ್ಸುಗಳು(Important Recommendations of NCF-2005)

1. **ಶಿಶು ಕೇಂದ್ರಿತ ಶಿಕ್ಷಣ**–ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005 ಶಿಶು ಕೇಂದ್ರಿತ ಶಿಕ್ಷಣವನ್ನು ಶಿಫಾರಸ್ಸು ಮಾಡಿದೆ.
   - ಮಕ್ಕಳ ಅನುಭವವನ್ನು ಆಧರಿಸಿ ಕಲಿಕಾ ವಾತಾವರಣ.
   - ಚಟುವಟಿಕೆ ಆಧಾರಿತ ಕಲಿಕೆ.
   - ಮಗುವಿನ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶ.(ಶಾಲೆಯಲ್ಲಿ ಹಾಗೂ ಶಾಲಾ ವಾತಾವರಣದ ಹೊರಗೆ)
   - ಮಗುವಿಗೆ ಭದ್ರತಾ ಮನೋಭಾವ ಬೆಳೆಸುವುದು.(ದೈಹಿಕ, ಭಾವನಾತ್ಮಕ)

2. **ಜ್ಞಾನ ಮತ್ತು ಅರಿವು ಮೂಡಿಸುವುದು**
   - ಸಂತಸದ ಕಲಿಕೆ ಮತ್ತು ಜ್ಞಾನದ ಸಂಯೋಜನೆಗಾಗಿ ವಿದ್ಯಾರ್ಥಿಗಳಿಂದಲೇ ರಚನಾತ್ಮಕ ಕಲಿಕಾ ವಿಧಾನದಿಂದ ಜ್ಞಾನವನ್ನು ಅಭಿವೃದ್ಧಿಪಡಿಸುವುದು.
   - ಭಾಷಾ ಬೆಳವಣಿಗೆಗೆ ಹೆಚ್ಚಿನ ಅವಕಾಶ ಒದಗಿಸುವುದು.
   - ಜ್ಞಾನವನ್ನು ಭಾಷೆಯ ಮೂಲಕ ಪಡೆದ ಅನುಭವಗಳನ್ನು ರಚನೆಗಳೆಂದು ತಿಳಿಸುವುದು.
   - ಮಕ್ಕಳ ಮೂಲ ಸಾಮರ್ಥ್ಯಗಳ ಬೆಳವಣಿಗೆಗೆ (ಅರಿವು ಮೌಲ್ಯಗಳು ಮತ್ತು ಕೌಶಲ) ಆದ್ಯತೆ ನೀಡುವುದು.
   - ಅರಿವಿನ ವಿವಿಧ ರೂಪಗಳನ್ನು ಮಗುವಿಗೆ ದೊರಕುವಂತೆ ಬೋಧನಾ ಚಟುವಟಿಕೆ ರೂಪಿಸುವುದು.
   - ಜ್ಞಾನದ ಪುನರ್‌ಸೃಷ್ಠಿ: ವಿಷಯಗಳ ಮೂಲಕ ಸಂಗತಿಗಳನ್ನು ಪತ್ತೆ ಹಚ್ಚುವುದು. ಈ ಸಂಗತಿಗಳಿಂದ ಆಳಕ್ಕೆ ಹೋಗಿ ಅವುಗಳಿಗೆ ಅರ್ಥ ಕೊಡುವ ಮತ್ತು ಮಹತ್ವದ ಅಂತರ್ ಸಂಬಂಧಗಳನ್ನು ಗುರುತಿಸುತ್ತದೆ.

3. **ಸ್ಥಳೀಯ ಜ್ಞಾನ ಮತ್ತು ಸಮುದಾಯದೊಡನೆ ಸಂಬಂಧ ಹೊಂದುವುದಕ್ಕೆ ಆದ್ಯತೆ ನೀಡುವುದು**
   - ಸ್ಥಳೀಯ ಪರಿಸರ ಮತ್ತು ಮಗುವಿನ ಸ್ವ ಅನುಭವಗಳಿಗೆ ಆದ್ಯತೆ.
   - ಮಗುವಿನ ಸನ್ನಿವೇಶದಲ್ಲಿ ಕಲಿಕೆಯನ್ನು ಅಳವಡಿಸುವುದು.
   - ಮಗುವಿನ ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಚರಣೆಗಳಿಗೆ ಆದ್ಯತೆ ನೀಡುವುದು.
   - ಮಗುವನ್ನು ಮನೆಯಲ್ಲಿ ಹಾಗೂ ಶಾಲೆಯಲ್ಲಿ ಮಾತನಾಡುವಂತೆ ಪ್ರೇರೇಪಿಸಬೇಕು. ಆಯಾ ಸಮುದಾಯದ ಸ್ಥಳೀಯ ಹಾಡು, ಕಥೆ, ಒಗಟುಗಳು ಕಲೆ ಇತ್ಯಾದಿಗಳನ್ನು ವ್ಯಕ್ತಪಡಿಸಲು ಅವಕಾಶ ನೀಡಬೇಕು.
   - ಸ್ಥಳೀಯ ಜ್ಞಾನ ದೇಶೀಯ ಸಂಪ್ರದಾಯ ಮತ್ತು ವಿಧಾನಗಳೊಡನೆ ವ್ಯವಹರಿಸುವದು. ಎಲ್ಲೆಲ್ಲಿ ಸಾಧ್ಯವೋ ಅಲ್ಲಲ್ಲಿ, ಶಾಲಾ ಜ್ಞಾನಕ್ಕೆ ಹೊಂದಿಸುವುದು.

4. **ವಿವಿಧ ಶೈಕ್ಷಣಿಕ ವಿಷಯಗಳ ಕುರಿತಂತೆ ಮಾಡಿರುವ ಶಿಫಾರಸ್ಸುಗಳು**

ವಿವಿಧ ಶೈಕ್ಷಣಿಕ ಕ್ಷೇತ್ರಗಳನ್ನು ಕುರಿತಂತೆ ಮಾಡಿರುವ ಶಿಫಾರಸ್ಸುಗಳಿಗೆ ಸೈದ್ಧಾಂತಿಕ ಆಧಾರಗಳನ್ನು ಒದಗಿಸಲಾಗಿದೆ. ಇಂದು ಮಕ್ಕಳು ಅನುಭವಿಸುತ್ತಿರುವ ಒತ್ತಡವನ್ನು ಕಡಿಮೆ ಮಾಡಲು ಮತ್ತು ಶಿಕ್ಷಣವನ್ನು ಇಂದಿನ ಮತ್ತು ಭವಿಷ್ಯದ ಅಗತ್ಯತೆಗಳಿಗೆ ಸೂಕ್ತವಾಗಿ ರೂಪಿಸಲು ಶಾಲಾ ಪಠ್ಯಕ್ರಮದ ನಾಲ್ಕು ಪಮುಖ ಕ್ಷೇತ್ರಗಳಾದ ಭಾಷೆ, ಗಣಿತ, ವಿಜ್ಞಾನ ಮತ್ತು ಸಮಾಜ ವಿಜ್ಞಾನ ಇವುಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ಮಾಡುವಂತೆ ಶಿಫಾರಸ್ಸು ಮಾಡಲಾಗಿದೆ. ಮಗುವು ಸಂಯೋಜಿತ ಜ್ಞಾನದ ರುಚಿಯನ್ನು ಪಡೆಯಲು ಮತ್ತು ಅರಿವಿನ ಆನಂದ ಸವಿಯಲು ವಿಷಯ–ವಿಷಯಗಳ ನಡುವಿನ ಮೇರೆಗಳನ್ನು ಸಡಿಲಿಸುವಂತೆ ಶಿಫಾರಸ್ಸು ಮಾಡಿದೆ.

### ಭಾಷೆ

- ಭಾಷೆಯಲ್ಲಿ ಮುಖ್ಯವಾಗಿ ಆಲಿಸುವುದು, ಮಾತನಾಡುವುದು, ಓದುವುದು, ಮತ್ತು ಬರೆಯುವುದು ಇವುಗಳ ಅಭಿವೃದ್ಧಿ ಮಾಡುವುದು. ಮಗುವಿನ ಪರಿಸರದಲ್ಲಿನ ಆಡು ಭಾಷೆಯಿಂದಲೇ ಇದರ ಬೆಳವಣಿಗೆ ಆದ್ಯತೆ ನೀಡುವುದು.
- ಮಕ್ಕಳ ಮಾತೃಭಾಷೆ ಬೋಧನಾ ಮಾಧ್ಯಮವಾಗಿರಬೇಕು.
- ಮಕ್ಕಳು ಪೂರ್ವ ಜ್ಞಾನದಿಂದ ಕಲಿತಿರುವ ಪದವನ್ನು ಬಳಸುತ್ತಾರೆ. ಈ ಸಾಮರ್ಥ್ಯವನ್ನು ಉತ್ತಮಪಡಿಸಬೇಕು.
- ಪ್ರಧಾನ ವಿಷಯಗಳ ಮೂಲಕವೂ ಭಾಷೆಯನ್ನು ಕಲಿಸಬಹುದು.
- ತ್ರಿಭಾಷಾ ಸೂತ್ರಕ್ಕನುಗುಣವಾಗಿ ಮೂರು ಭಾಷೆಗಳನ್ನು ಕಲಿಸಬೇಕು.

**ಗಣಿತ** ಗಣಿತವನ್ನು ಕಲಿಸುವ ಉದ್ದೇಶ ಕೇವಲ ಲೆಕ್ಕದ 'ಜ್ಞಾನ' ಅಂದರೆ ಸೂತ್ರಗಳು ಮತ್ತು ಯಾಂತ್ರಿಕ ವಿಧಿವಿಧಾನಗಳನ್ನು ಕಲಿಸುವುದಲ್ಲ. ಬದಲಾಗಿ ಗಣಿತದ ಮೂಲಕ ತಾರ್ಕಿಕ ಚಿಂತನೆ, ಸೂತ್ರೀಕರಿಸುವುದು ಮತ್ತು ಅಮೂರ್ತ ವಿಚಾರಗಳನ್ನು ವ್ಯವಹರಿಸುವ ಜ್ಞಾನ ಪಡೆಯುವುದು. ಉತ್ತಮ ಗುಣಮಟ್ಟದ ಗಣಿತ ಶಿಕ್ಷಣ ಪಡೆಯುವುದು ಪ್ರತಿ ಮಗುವಿನ ಹಕ್ಕು.

**ವಿಜ್ಞಾನ**

- ವಿಜ್ಞಾನವು ಅವರ ಕುತೂಹಲ ಮತ್ತು ಸೃಜನಶೀಲತೆಯನ್ನು ಬೆಳೆಸಬೇಕು.
- ವಿಜ್ಞಾನವು ಚಲನಶೀಲವಾಗಿದ್ದು ಯಾವಾಗಲೂ ತನ್ನ ಜ್ಞಾನ ಪರೀಧಿಯನ್ನು ವಿಸ್ತರಿಸಿಕೊಳ್ಳುವುದು ಮತ್ತು ಹೊಸ ಹೊಸ ಅನುಭವಗಳನ್ನು ಒಳಗೊಂಡಿರಬೇಕು.
- ವೈಜ್ಞಾನಿಕ ಪರಿಕಲ್ಪನೆಗಳನ್ನು ಪ್ರಯೋಗಗಳ ಮೂಲಕ ರೂಪಿಸಬೇಕು.

**ಸಮಾಜ ವಿಜ್ಞಾನ**

- ಪರಿಕಲ್ಪನೆಗಳು, ಸ್ಥಳೀಯ ಸಾಮಾಜಿಕತೆಯನ್ನು ಅರ್ಥೈಸಿಕೊಳ್ಳುವ ರೀತಿಯಲ್ಲಿರಬೇಕು.
- ರಾಷ್ಟ್ರೀಯ ಕಾಳಜಿಯನ್ನು ಉತ್ತೇಜಿಸುವ ದೃಷ್ಟಿಕೋನವನ್ನು ಹೊಂದಿರಬೇಕು.
- ಸ್ಥಳೀಯ ಆಡಳಿತ ಹಾಗೂ ಸಂಘ ಸಂಸ್ಥೆಗಳ ಬಗ್ಗೆ ಮಾಹಿತಿಯನ್ನು ತಿಳಿಸಬೇಕು.
- ಸಾಮಾಜಿಕ ಮೌಲ್ಯಗಳ ಬಗ್ಗೆ ಪರಸ್ಪರ ನಂಬಿಕೆ, ಗೌರವ ಸಹಕಾರ ಮುಂತಾದ ಮೌಲ್ಯಗಳನ್ನು ಅರಿಯಬೇಕು.
- ವಾಸ್ತವತೆಗಳನ್ನು ವಿಮರ್ಶಾತ್ಮಕತೆಯಿಂದ ವಿಶ್ಲೇಷಣೆ ಮಾಡುವ ಸಾಮರ್ಥ್ಯ ಬೆಳೆಸಬೇಕು.

**5. ರಾಷ್ಟ್ರೀಯ ಪಠ್ಯಕ್ರಮ ನೆಲೆಗಟ್ಟು–2005 ಪಠ್ಯಕ್ರಮದಲ್ಲಿ ಪಾರಂಪರಿಕ ಕರಕುಶಲ ಕಲೆಗಳು, ಆರೋಗ್ಯ ಮತ್ತು ದೈಹಿಕ ಶಿಕ್ಷಣ, ಕೆಲಸ ಹಾಗೂ ಶಾಂತಿ ಈ ವಿಷಯಗಳ ಕುರಿತು ಕೆಳಗಿನಂತೆ ಶಿಫಾರಸ್ಸು ಮಾಡಿದೆ.**

- **ಪಾರಂಪರಿಕ ಕರಕುಶಲ ಕಲೆಗಳು:** ಶಿಕ್ಷಣದ ಎಲ್ಲ ಹಂತಗಳಲ್ಲೂ ಕಲೆಯನ್ನು ಒಂದು ವಿಷಯವನ್ನಾಗಿ ಅಭ್ಯಸಿಸಬೇಕು. ಇದರಲ್ಲಿ ಸಂಗೀತ, ನೃತ್ಯ, ದೃಶ್ಯಕಲೆಗಳು ಮತ್ತು ರಂಗಕಲೆ ಎಂಬ ನಾಲ್ಕು ವಿಭಾಗಗಳನ್ನು ಗುರುತಿಸಿದೆ. ಕಲಾ ಶಿಕ್ಷಣದ ಉದ್ದೇಶ ಪಾಠದ ಬದಲು, ಕಲಾಭಿರುಚಿ ಮತ್ತು ವೈಯಕ್ತಿಕ ಅರಿವು ಇವುಗಳಿಗೆ ಒತ್ತಾಸೆ ಕೊಡುವುದು ಮತ್ತು ವಿವಿಧ ರೂಪಗಳಲ್ಲಿ ತನ್ನನ್ನು ತಾನು ಅಭಿವ್ಯಕ್ತಿಸುವ ಸಾಮರ್ಥ್ಯವನ್ನು ಗಳಿಸಿಕೊಳ್ಳುವುದಾದ್ದರಿಂದ ಪರಸ್ಪರ ವಿನಿಮಯ ಸ್ವರೂಪದ ಶಿಕ್ಷಣಕ್ಕೆ ಒತ್ತು ಕೊಡಬೇಕು. ಆರ್ಥಿಕ ಮತ್ತು ಸೌಂದರ್ಯೋಪಾಸಕ ಮೌಲ್ಯಗಳ ದೃಷ್ಟಿಯಿಂದ ಭಾರತೀಯ ಪಾರಂಪರಿಕ ಕಲೆಗಳ ಮಹತ್ವ ಶಾಲಾ ಶಿಕ್ಷಣಕ್ಕೆ ಅಗತ್ಯವೆಂಬುದನ್ನು ಗುರುತಿಸಬೇಕು.

- **ಆರೋಗ್ಯ ಮತ್ತು ದೈಹಿಕ ಶಿಕ್ಷಣ:** ಶಿಕ್ಷಣದಲ್ಲಿ ಕೇವಲ ಕಲಿಕೆಯೊಂದೇ ಸಾಲದು, ಇದರೊಂದಿಗೆ ಮಕ್ಕಳ ಸರ್ವಾಂಗೀಣ ಬೆಳವಣಿಗೆಗಾಗಿ ಆರೋಗ್ಯ ಮತ್ತು ದೈಹಿಕ ಶಿಕ್ಷಣ ಹಾಗೂ ಯೋಗ ಶಿಕ್ಷಣ ಅಗತ್ಯವಾಗಿದೆ. ಶಾಲೆಯಲ್ಲಿ ಮಗುವಿನ ಯಶಸ್ಸು ಪುಷ್ಟಿದಾಯಕ ಆಹಾರ ಮತ್ತು ಸುಯೋಜಿತ ದೈಹಿಕ ಚಟುವಟಿಕೆಗಳನ್ನು ಅವಲಂಬಿಸಿರುತ್ತದೆ. ಆದುದರಿಂದ ಮಧ್ಯಾಹ್ನದ ಊಟದ ಯೋಜನೆಗೆ ಬಲ ನೀಡಬೇಕು. ತಜ್ಞ ವೈದ್ಯರಿಂದ ಆರೋಗ್ಯ ಶಿಕ್ಷಣದ ಬಗ್ಗೆ ಮಾಹಿತಿ ನೀಡುವುದು.

- **ಕೆಲಸ:** ಕೆಲಸವು ಜ್ಞಾನವನ್ನು ಅನುಭವಕ್ಕೆ ಮಾರ್ಪಡಿಸುತ್ತದೆ ಮತ್ತು ಅದು ಸ್ವಾವಲಂಬನೆ, ಸೃಜನಶೀಲತೆ,ಮತ್ತು ಸಹಕಾರ ಇವೇ ಮುಂತಾದ ಪ್ರಮುಖ ವೈಯಕ್ತಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ರೂಪಿಸುತ್ತದೆ. ಆದ್ದರಿಂದ ಪ್ರಾಥಮಿಕ ಹಂತದಿಂದಲೇ ಕೆಲಸಕ್ಕೆ ತಳುಕು ಹಾಕಲು ಸೂಚಿಸಲಾಗಿದೆ. ಜೀವನೋಪಾಯ ಸಂಬಂಧೀ ಶಿಕ್ಷಣವನ್ನು ಆರಿಸಿಕೊಳ್ಳುವ ಪ್ರೌಢ ಹಂತದ ಮಕ್ಕಳ ಅನುಕೂಲಕ್ಕಾಗಿ ಶಾಲೆಯ ಹೊರಗೆ ಕೆಲಸದ ಅವಕಾಶಗಳನ್ನು ಗುರುತಿಸಲು ಔಪಚಾರಿಕವಾಗಿ ತಂತ್ರವನ್ನು ಯೋಜಿಸಲಾಗಿದೆ.

- **ಶಾಂತಿ:** ಅನೇಕ ರೀತಿಯ ಸಂಘರ್ಷಗಳನ್ನು ಪರಿಹರಿಸಿಕೊಳ್ಳಲು ವಿಶ್ವದಾದ್ಯಂತ ಅಸಹನೆ ಮತ್ತು ಹಿಂಸೆಗಳ ಮಾರ್ಗವನ್ನೇ ಅನುಸರಿಸುತ್ತಿರುವ ಇಂದಿನ ದಿನಗಳಲ್ಲಿ ರಾಷ್ಟ್ರೀಯ ವಿಕಾಸಕ್ಕೆ ಪೂರ್ವನಿಬಂಧನೆಯ ಮತ್ತು ಸಾಮಾಜಿಕ ಮನೋಭಾವದ ರೂಪದಲ್ಲಿ ಮಾತ್ರವಲ್ಲ, ವಿಶಾಲ ಮೌಲ್ಯದ ನೆಲೆಗಟ್ಟಿನ ರೂಪದಲ್ಲೂ ಶಾಂತಿ ಇಂದಿನ ಅಗತ್ಯವಾಗಿದೆ. ಎಲ್ಲ ವಿಷಯಗಳಲ್ಲೂ ಎಲ್ಲ ಹಂತಗಳಲ್ಲೂ ಸೂಕ್ತವಾದ ಚಟುವಟಿಕೆಗಳಿಂದ ಮತ್ತು ಆಯ್ಕೆ ಮಾಡಿದ ವಿಷಯಗಳ ಮೂಲಕ ಮಕ್ಕಳನ್ನು ಪ್ರಜಾತಾಂತ್ರಿಕ ಮತ್ತು ನ್ಯಾಯಸಮ್ಮತವಾದ ಸಂಸ್ಕೃತಿಗೆ ಒಗ್ಗಿಸುವ ಸಾಧನವಾಗಿ ಶಾಂತಿ ಶಿಕ್ಷಣದ ಸಾಮರ್ಥ್ಯವನ್ನು ನೋಡಬೇಕಾಗಿದೆ.

ಕೊನೆಯಲ್ಲಿ ಶಾಲಾ ನಡೆನುಡಿಗಳ ಗುಣಮಟ್ಟ ಸುಧಾರಣೆಗೆ ಸೂಕ್ತ ಸಂಪನ್ಮೂಲ ಸೃಷ್ಟಿಯ ಬಗ್ಗೆ ಹಾಗೂ ನಮ್ಮ ಶಾಲಾ ರಚನೆಯಲ್ಲಿ ಗಮನಾರ್ಹ ವ್ಯವಸ್ಥಾತ್ಮಕ ಸುಧಾರಣೆ ಬಗ್ಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು–2005ರಲ್ಲಿ ವಿವರಿಸಲಾಗಿದೆ.


## 5.5 ಮಹಿಳಾ ಸಬಲೀಕರಣ (Women Empowerment)

'ಯತ್ರ ನಾರ್ಯಂತು ಪೂಜ್ಯಂತೆ, ತತ್ರ ರಮಂತೆ ದೇವತಾ..' ಎನ್ನುವ ಸಂಸ್ಕೃತಿ ನಮ್ಮದಾಗಿದ್ದರೂ, ನಾವು ಹಿಂದಿನಿಂದಲೂ ಮಹಿಳೆಯರನ್ನು ದುರ್ಬಲ ವರ್ಗದವರನ್ನಾಗಿ ಹಾಗೂ ದ್ವಿತೀಯ ದರ್ಜೆ ಪೌರರನ್ನಾಗಿ ಪರಗಣಿಸಿದ್ದೇವೆ. ಇದರಿಂದಾಗಿ ಮಹಿಳೆಯನ್ನು ಕುಟುಂಬ ನಿರ್ವಹಣೆಗೆ ಮಾತ್ರ ಸೀಮಿತಳನ್ನಾಗಿ ಮಾಡಿದೆ. 20 ನೇ ಶತಮಾನದ ಆರಂಭದಲ್ಲಿ ಬ್ರಿಟನ್ ಮತ್ತು ಅಮೇರಿಕಾದಲ್ಲಿ ಮಹಿಳೆಯರಿಗೆ ಮತದಾನದ ಅವಕಾಶ ನೀಡಿದ್ದು, ಪಾಶ್ಚಿಮಾತ್ಯ ಜಗತ್ತಿನ ಮಹಿಳೆಯರ ಸ್ಥಾನಮಾನದಲ್ಲಿ ಸಾಕಷ್ಟು ಅಭಿವೃದ್ಧಿಯಾಗಿದೆ. ಅದರಿಂದ ಅವರ ಅನೇಕ ಅಸಮರ್ಥತೆ ಮತ್ತು ಅಸಮಾನತೆಗಳು ಕೊನೆಗೊಳ್ಳಲಾರಂಭಿಸಿದವು.

ಇನ್ನೊಂದೆಡೆ ಏಷಿಯಾ ಮತ್ತು ಆಫ್ರಿಕಾದಲ್ಲಿ ಮಹಿಳೆಯರ ಸ್ಥಾನ ಮಾನ ಮತ್ತು ಅವಕಾಶಗಳಲ್ಲಿ ಯಾವುದೇ ಸುಧಾರಣೆ ಕಾಣದೇ ಅಸಮರ್ಥತೆಗಳಿಂದ ಬಳಲುತ್ತಿರುವದು ಕಂಡು ಬಂದಿತು. ಇಲ್ಲಿ ಲಿಂಗ ಸೂಕ್ಷ್ಮತೆ, ಲಿಂಗ ಅಸಮಾನತೆ ಹೆಮ್ಮರವಾಗಿತ್ತು. ಆದ್ದರಿಂದ ವಿಶ್ವಸಂಸ್ಥೆ ತನ್ನ ಎಲ್ಲ ಸಭೆಗಳಲ್ಲಿ ಹಾಗೂ ಪ್ರಕಟಣೆಗಳಲ್ಲಿ ತನ್ನ ಸದಸ್ಯ ರಾಷ್ಟ್ರಗಳಿಗೆ ಲಿಂಗ ಅಸಮಾನತೆಗಳನ್ನು ಸಾಧ್ಯವಾದಷ್ಟು ಬೇಗ ನಿವಾರಿಸಲು ಕರೆ ನೀಡಿತ್ತು.

ವಿಶ್ವ ಸಂಸ್ಥೆಯ ಪ್ರಯತ್ನದಿಂದ ಮಹಿಳಾ ಸಬಲೀಕರಣ ಅಂತರಾಷ್ಟ್ರೀಯ ವಿಚಾರಾಂಶವಾಗಿದೆ. 1975 ನ್ನು ವಿಶ್ವ ಸಂಸ್ಥೆ ಅಂತರಾಷ್ಟ್ರೀಯ ಮಹಿಳಾ ವರ್ಷವನ್ನಾಗಿ ಹಾಗೂ 1976–85 ನ್ನು ಮಹಿಳಾ ದಶಕವನ್ನಾಗಿ ಘೋಷಿಸಿತು. ಅಂದಿನಿಂದ ಮಾರ್ಚ 8 ನೇ ದಿನಾಂಕವನ್ನು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನಾಗಿ ಆಚರಿಲಾಗುತ್ತಿದೆ. ಈ ಘೋಷಣೆಯಿಂದ ಮಹಿಳಾ ಕಲ್ಯಾಣ ಪರಿಕಲ್ಪನೆಯು, ಮಹಿಳಾ ಅಭಿವೃದ್ಧಿಯಾಗಿ ಬದಲಾವಣೆಯಾಯಿತು. ಮಹಿಳಾ ಸಬಲೀಕರಣದ ಪರಿಕಲ್ಪನೆ 1980 ರ ನಂತರ ಪ್ರಚಲಿತವಾದದ್ದಾಗಿದೆ.

**ಮಹಿಳಾ ಸಬಲೀಕರಣ– ಪರಿಕಲ್ಪನೆ (Women Empowerment- Concept)**ಸಬಲೀಕರಣ ಪದ ಆಂಗ್ಲಭಾಷೆಯ **'Empowerment'** ಎಂಬ ಪದಕ್ಕೆ ಸಮಾನಾರ್ಥ ಪದವಾಗಿದೆ. ವಿವಿಧ ನಿಘಂಟುಗಳ ಪ್ರಕಾರ ಇದರರ್ಥ **'ಅಧಿಕಾರ ಒದಗಿಸು', 'ಶಕ್ತಿ ತಂದುಕೊಡು', 'ಹಕ್ಕು ನೀಡು', 'ಬಲಗೊಳಿಸು'** ಎಂದಾಗುತ್ತದೆ.




ಆದುದರಿಂದ ಶಬ್ದಶಃ ಅರ್ಥದ ಪ್ರಕಾರ ಮಹಿಳೆಯರಿಗೆ ಅವರ ಹಕ್ಕನ್ನು ನೀಡಿ ಅವರನ್ನು ಸಶಕ್ತಗೊಳಿಸುವ ಪರಿಕಲ್ಪನೆಯನ್ನು ಮಹಿಳಾ ಸಬಲೀಕರಣ ಎನ್ನುವರು.

ಮಹಿಳೆಗೆ ಅಧಿಕಾರ ನೀಡಿ ಇತರರ ನಿಯಂತ್ರಣದಿಂದ ಮುಕ್ತಳನ್ನಾಗಿ ಮಾಡುವ ಪ್ರಕ್ರಿಯೆಯನ್ನು ಅಲ್ಲದೇ ಅವಳ ಜೀವನವನ್ನು ತಾನೇ ನಿಯಂತ್ರಿಸಿಕೊಳ್ಳುವ ಹಾಗೂ ತನ್ನ ಸ್ಥಾನಮಾನಗಳನ್ನು ನಿರ್ಧರಿಕೊಳ್ಳುವ ಅಧಿಕಾರವನ್ನು ಹೊಂದುವುದಕ್ಕೆ ಮಹಿಳಾ ಸಬಲೀಕರಣ ಎನ್ನುವರು.

"ಮಹಿಳೆ ತನ್ನನ್ನು ತಾನು ಗುರುತಿಸಿಕೊಂಡು ಬದುಕಿನ ಎಲ್ಲ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯ ಬೆಳೆಸಿಕೊಳ್ಳುವುದೇ ಮಹಿಳಾ ಸಬಲೀಕರಣ" – **ಪಿಳ್ಳೈ.**

"ಮಹಿಳೆ ತನ್ನ ಬೌದ್ಧಿಕ ಮತ್ತು ಭೌತಿಕ ಸಾಮರ್ಥ್ಯದಿಂದ ಸಂಪನ್ಮೂಲಗಳನ್ನು ವೈಜ್ಞಾನಿಕವಾಗಿ ಬಳಸಿಕೊಂಡು ಕುಟುಂಬದ ಆರೋಗ್ಯ, ಆರ್ಥಿಕತೆ, ಉದ್ಯೋಗ, ವಿದ್ಯಾಭ್ಯಾಸ ಮುಂತಾದ ಸಮಸ್ಯೆಗಳನ್ನು ಪರಿಹರಿಸಿಕೊಂಡು ಸ್ವಾವಲಂಬನೆಯಿಂದ ಬದುಕುವ ಕ್ರಮವೇ ಮಹಿಳಾ ಸಬಲೀಕರಣ"

"ಮಹಿಳೆ ತನ್ನ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಹಾಗೂ ಬೌದ್ಧಿಕತೆಗೆ ಸಂಬಂಧಿಸಿದಂತೆ ಶಾಸನಬದ್ಧ ನೈತಿಕ ಶಕ್ತಿ ಪಡೆಯುವುದೇ ಮಹಿಳಾ ಸಬಲೀಕರಣ."

"ಧಮನ, ಅನ್ಯಾಯ ಹಾಗೂ ಲಿಂಗ ತಾರತಮ್ಯದ ವಿರುದ್ಧ ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶಾಸನಾತ್ಮಕವಾಗಿ ಮಹಿಳೆ ಹೋರಾಟ ಮಾಡುವದೇ ಮಹಿಳಾ ಸಬಲೀಕರಣ."

### ಮಹಿಳಾ ಸಬಲೀಕರಣದ ಅಗತ್ಯತೆ (Need of Women Empowerment)

ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಮಹಿಳಾಸಬಲೀಕರಣದ ಅವಶ್ಯಕತೆಯನ್ನು ಈ ಕೆಳಗಿನ ಅಂಶಗಳ ಮೂಲಕ ಸಮರ್ಥಿಸಬಹುದಾಗಿದೆ.

1. **ಶಿಕ್ಷಣ ಅಥವಾ ಸಾಕ್ಷರತೆ:** ಜಗತ್ತಿನ ಉಳಿದೆಲ್ಲ ರಾಷ್ಟ್ರಗಳಗಿಂತ ಭಾರತದಲ್ಲಿ ಅನಕ್ಷರತೆ ಪ್ರಮಾಣ ಹೆಚ್ಚಿದೆ. 2001 ರ ಜನಗಣತಿಯ ವರದಿಯ ಪ್ರಕಾರ ಪುರುಷರ ಶೇ75 ಸಾಕ್ಷರರಿದ್ದರೆ, ಮಹಿಳೆಯರು ಶೇ.54.16 ಸಾಕ್ಷರರಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಇನ್ನೂ ಅನಕ್ಷರತೆಯ ಪ್ರಮಾಣ ಹೆಚ್ಚಿರುತ್ತದೆ. ಈ ಅನಕ್ಷರತೆಯು ಮಹಿಳೆಯರ ದೊಡ್ಡ ದೌರ್ಬಲ್ಯವಾಗಿದೆ. ಆದ್ದರಿಂದ ಶಿಕ್ಷಣದ ಮೂಲಕ ಮಹಿಳೆಯರ ಅನಕ್ಷರತೆಯನ್ನು ಹೋಗಲಾಡಿಸಿ ಅಭಿವೃದ್ಧಿ ಪಥದತ್ತ ತರಲು ಮಹಿಳಾ ಸಬಲೀಕರಣ ಅಗತ್ಯವಾಗಿದೆ.

2. **ಮಹಿಳೆಯ ಆರೋಗ್ಯದ ಸಮಸ್ಯೆ:** ಮಹಿಳೆಯರ ದೌರ್ಬಲ್ಯಗಳಲ್ಲಿ ಅವರ ಆರೋಗ್ಯದ ಅಸ್ವಸ್ಥತೆಯೂ ಒಂದು. ಮಹಿಳೆಯರು ಕಡಿಮೆ ಅಹಾರ ಸೇವಿಸಿ ಹೆಚ್ಚು ಕಾರ್ಯ ಮಾಡುತ್ತಾರೆ ಹಾಗೂ ಅನಾರೋಗ್ಯದ ಬಗ್ಗೆ ಹೇಳಿಕೊಳ್ಳಲು ನಾಚಿಕೆ ಸ್ವಭಾವದವರಾಗಿದ್ದರಿಂದ ವೈದ್ಯರಿಗೆ ತೋರಿಸಿಕೊಳ್ಳದೇ ಮತ್ತಷ್ಟು ಅನಾರೋಗ್ಯಕ್ಕೆ ಈಡಾಗುತ್ತಾರೆ. ಸಾಂಪ್ರದಾಯಿಕವಾಗಿ ಹೆಣ್ಣುಮಕ್ಕಳ ಅನಾರೋಗ್ಯ ಕಡೆಗಣಿಸಿ ಗಂಡುಮಕ್ಕಳ ಆರೋಗ್ಯದ ಕಡೆಗೆ ಒಲವುಗಳನ್ನು ತೋರಿಸುತ್ತಾರೆ. ಆದ್ದರಿಂದ ಆರೋಗ್ಯದ ದೃಷ್ಟಿಯಿಂದಲೂ ಸದೃಢಳನ್ನಾಗಿ ಮಾಡಲು ಮಹಿಳಾ ಸಬಲೀಕರಣ ಅಗತ್ಯವಾಗಿದೆ.

3. **ಮಹಿಳಾ ಅರ್ಥಿಕ ತುರ್ತು ಅವಶ್ಯಕತೆ :**ಈ ಕೆಳಗಿನ ಎರಡು ಸಂದರ್ಭಗಳಿಂದ ಮಹಿಳಾ ಆರ್ಥಿಕತೆ ಕೆಳಮಟ್ಟದ್ದಾಗಿದೆ. 1) ಭಾರತದ ತಲಾ ಆದಾಯ ಕಡಿಮೆ ಇದ್ದು ಹೆಚ್ಚಿನ ಕುಟುಂಬಗಳು ಆರ್ಥಿಕವಾಗಿ ಬಡತನ ರೇಖೆಗಿಂತ ಕೆಳಮಟ್ಟದಲ್ಲಿದ್ದಾರೆ. 2) ಒಂದು ನೂರು ವರ್ಷಗಳಿಂದಲೂ ಭಾರತದಲ್ಲಿ ಹೆಣ್ಣುಮಕ್ಕಳು ಆಸ್ತಿಗಳನ್ನು ತಮ್ಮ ಹೆಸರಿನಲ್ಲಿ ಹೊಂದಬಾರದೆಂಬ ಕಾನೂನು ಮುಂತಾದವುಗಳು. ಆದ್ದರಿಂದ ಹೆಣ್ಣುಮಕ್ಕಳು ಆರ್ಥಿಕವಾಗಿ ದುರ್ಬಲಳಾಗಿರುವಳು. ಉತ್ತಮ ಸ್ವಾವಲಂಬನೆ ಬದುಕನ್ನು ಹೊಂದಲು ಆರ್ಥಿಕವಾಗಿ ಸಶಕ್ತಳಾಗಿ ಸಬಲೀಕರಣ ಹೊಂದುವುದು ಅವಶ್ಯಕವಾಗಿದೆ.

4. **ಮಹಿಳಾ ದೌರ್ಜನ್ಯ :** ಮಹಿಳೆ ದುರ್ಬಲ ಲಿಂಗದವಳಾಗಿದ್ದರಿಂದ ಅವಳ ಮೇಲೆ ನಿರಂತರ ದೌರ್ಜನ್ಯಗಳು ನಡೆಯುತ್ತಿವೆ. ಅವುಗಳಲ್ಲಿ ಅತ್ಯಾಚಾರ, ಕಳ್ಳ ಸಾಗಾಣಿಕೆ, ವರದಕ್ಷಿಣೆ, ಲೈಂಗಿಕ ದೌರ್ಜನ್ಯ, ಅನೈತಿಕ ಸಂಬಂಧ ಹೊಂದುವುದು ಮುಂತಾದವುಗಳಾಗಿವೆ. ಇವುಗಳಿಂದ ಅನೇಕ ರೀತಿಯಲ್ಲಿ ಮಹಿಳೆ ಬಲಿಪಶು ಆಗುತ್ತಿದ್ದಾಳೆ. ಇವುಗಳಿಂದ ರಕ್ಷಣೆ ಹೊಂದುವ ಸಲುವಾಗಿ ಹಾಗೂ ಹೆಣ್ಣು ಮಕ್ಕಳ ವಿರುದ್ಧದ ಎಲ್ಲ ರೀತಿಯ ತಾರತಮ್ಯ ಹಾಗೂ ದೌರ್ಜನ್ಯ ನಿವಾರಣೆ ಮಾಡಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

5. **ಸ್ವಾವಲಂಬಿಯನ್ನಾಗಿಸುವುದು :**ಮಹಿಳೆಯನ್ನು ಆರ್ಥಿಕ ಮತ್ತು ಸಾಮಾಜಿಕವಾಗಿ ಸದೃಢಳನ್ನಾಗಿಸಿ ಸ್ವಾವಲಂಬಿಯನ್ನಾಗಿಸಲು ಮಾಡಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

6. **ಸಮಾಜದ ಮುಖ್ಯ ವಾಹಿನಿಗೆ ತರಲು** : ಮಹಿಳೆಯರನ್ನು ದುರ್ಬಲ ವರ್ಗದವರನ್ನಾಗಿ ಹಾಗೂ ದ್ವಿತೀಯ ದರ್ಜೆ ಪೌರರನ್ನಾಗಿ ಪರಗಣಿಸಲಾಗಿದೆ. ಮತ್ತು ಮಹಿಳೆಯನ್ನು ಕುಟುಂಬ ನಿರ್ವಹಣೆಗೆ ಮಾತ್ರ ಸೀಮಿತಳನ್ನಾಗಿ ಮಾಡಿದೆ. ಈ ಪಟ್ಟವನ್ನು ಹೋಗಲಾಡಿಸಿ ಸಮಾಜದ ಪ್ರಗತಿ ಪಥಕ್ಕೆ ತರಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

7. **ಆರ್ಥಿಕವಾಗಿ ಬಲಿಷ್ಠರನ್ನಾಗಿಸಲು :**ಮನೆ ಮಕ್ಕಳು ಕುಂಟುಂಬ ನಿರ್ವಹಣೆಯಲ್ಲಿ ತೊಡಗಿ ಆರ್ಥಿಕವಾಗಿ ಮತ್ತೊಬ್ಬರನ್ನು ಮಹಿಳೆ ಅವಲಂಬಿತಳಾಗಿರುವದನ್ನು ಹೋಗಲಾಡಿಸಲು ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿ ಆರ್ಥಿಕವಾಗಿ ಬಲಿಷ್ಠಳನ್ನಾಗಿ ಮಾಡಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

8. **ಆತ್ಮವಿಶ್ವಾಸ ಹಾಗೂ ತಮ್ಮ ಘನತೆಯ ಅರಿವು ಮೂಡಿಸಲು** : ಮಹಿಳೆಯು ಎಲ್ಲ ರಂಗಗಳಲ್ಲಿ ಉತ್ತಮ ಸಾಧನೆ ಮಾಡುವಂತಾಗಲು ಅವಳಲ್ಲಿ ಆತ್ಮ ವಿಶ್ವಾಸ ಹಾಗೂ ಘನತೆಯ ಅರಿವು ಮೂಡಿಸಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

9. **ಸ್ತ್ರೀ ಪುರುಷರ ನಡುವಿನ ಅಂತರ ಕಡಿಮೆ ಮಾಡಲು** : ಸ್ತ್ರೀ ಪುರುಷರ ಸ್ಥಾನಮಾನಗಳಲ್ಲಿಯ ಅಂತರ ಹೋಗಲಾಡಿಸಲು ಹಾಗೂ ಪ್ರಮಾಣಗಳಲ್ಲಿರುವ ಅಂತರವನ್ನು ಕಡಿಮೆ ಮಾಡಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

**10. ಸ್ವತಂತ್ರ ನಿರ್ಣಯ ಕೈಗೊಳ್ಳುವಂತೆ ಮಾಡಲು:(Developing decision making capacity):** ವೈಯಕ್ತಿಕ ಆರೋಗ್ಯ, ಶಿಕ್ಷಣ, ಉದ್ಯೋಗ ಹಾಗೂ ಹಕ್ಕುಗಳ ಬಗ್ಗೆ ಸ್ವತಂತ್ರ ನಿರ್ಣಯ ಕೈಗೊಳ್ಳುವಂತೆ ಮಾಡಲು ಮಹಿಳಾ ಸಬಲೀಕರಣ ಅತ್ಯವಶ್ಯಕವಾಗಿದೆ.

**11. ಸ್ವತಂತ್ರವಾಗಿ ಚಿಂತನೆ ಹಾಗೂ ವಿಚಾರಗಳನ್ನು ಅಭಿವ್ಯಕ್ತಪಡಿಸಲು(Able to express ideas and independent thinking):**

ಮಹಿಳೆ ತನ್ನ ಜೀವನ ಮಾರ್ಗ ಆಯ್ದುಕೊಳ್ಳುವಲ್ಲಿ ಸ್ವತಂತ್ರವಾಗಿ ಚಿಂತನೆ ಹಾಗೂ ವಿಚಾರಗಳನ್ನು ಅಭಿವ್ಯಕ್ತಪಡಿಸಲು ಮಹಿಳಾ ಸಬಲೀಕರಣ ಅವಶ್ಯಕವಾಗಿದೆ.

## ಮಹಿಳಾ ಸಬಲೀಕರಣದ ಕಾರ್ಯತಂತ್ರಗಳು (Strategies to Empower Women)

ಜಾಗತಿಕ ಮಹಿಳಾ ಸಮ್ಮೇಳನದ ನಡುವಳಿಗಳ ಆಧಾರದ ಮೇಲೆ ಭಾರತ ಸರಕಾರವು ಮಹಿಳಾ ಅಭಿವದ್ಧಿಗಾಗಿ ರಾಷ್ಟ್ರೀಯ ದಾಖಲೆಯನ್ನು ತಯಾರಿಸಿದೆ. ಅದರಲ್ಲಿ ಸರಕಾರವು 2001 ನ್ನು ಮಹಿಳಾ ಸಬಲೀಕರಣದ ವರ್ಷವಾಗಿ ಘೋಷಿಸಿದೆ ಹಾಗೂ ರಾಷ್ಟ್ರೀಯ ದಾಖಲೆಯು ಈ ಕೆಳಗಿನ ಸಬಲೀಕರಣದ ಕಾರ್ಯತಂತ್ರಗಳನ್ನು ಒಳಗೊಂಡಿದೆ.

1. **ಶೈಕ್ಷಣಿಕ ಅವಕಾಶಗಳನ್ನು ಕಲ್ಪಿಸುವುದು(Providing Educational Opportunities):** ಮಹಿಳಾ ಸಬಲೀಕರಣದ ಪ್ರಬಲ ಅಸ್ತ್ರ ಶಿಕ್ಷಣವಾಗಿದೆ. ಪಾಲಕರ ಬಡತನ, ಅನಕ್ಷರತೆ ಮತ್ತು ಅಜ್ಞಾನದಿಂದ ತಮ್ಮ ಹೆಣ್ಣುಮಕ್ಕಳನ್ನು ಶಾಲೆಗೆ ಕಳುಹಿಸದೇ ಮನೆಗೆಲಸಕ್ಕೆ ಅಥವಾ ದುಡಿಯಲು ಹಚ್ಚುವುದರಿಂದ ಸಾಕ್ಷರತೆಯ ಪ್ರಮಾಣದಲ್ಲಿ ಅಸಮಾನತೆ ಉಂಟಾಗಿರುವದನ್ನು ಶಿಕ್ಷಣದ ಮೂಲಕ ಹೋಗಲಾಡಿಸುವುದು. ಈಗಾಗಲೇ ಸರಕಾರವು ಕಪ್ಪುಹಲಗೆ ಕಾರ್ಯಾಚರಣೆ, ಸರ್ವಶಿಕ್ಷಣ ಅಭಿಯಾನ ಯೋಜನೆಗಳ ಮೂಲಕ ಬಾಲಕಿಯರ ಶಿಕ್ಷಣ ಪ್ರೋತ್ಸಾಹಿಸುವ, ಪಾಲಕರ ಮನಪರಿವರ್ತನೆಗೆ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಿದೆ.

- ಸಂವಿಧಾನದ 14, 15, 16, 39 ಹಾಗೂ 42 ರ ವಿಧಿಗಳ ಮೂಲಕ ಪ್ರಾಥಮಿಕ ಶಿಕ್ಷಣದಿಂದ ಪ್ರೌಢಶಿಕ್ಷಣದವರೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಾಗೂ ವಿಶೇಷ ಸೌಲಭ್ಯಗಳನ್ನು ಒದಗಿಸಿದೆ.
- ಪದವಿ ಪೂರ್ವ ಶಿಕ್ಷಣದಿಂದ ಪದವಿ ಶಿಕ್ಷಣದವರೆಗೆ ಶುಲ್ಕ ವಿನಾಯತಿ ನೀಡುತ್ತಿದೆ.
- ಪದವಿ ಮತ್ತು ವೃತ್ತಿ ಶಿಕ್ಷಣಗಳಲ್ಲಿ ಮೀಸಲಾತಿ ಕಲ್ಪಿಸಿದೆ.
- ಉಚಿತ ಪಠ್ಯಪುಸ್ತಕ, ಸಮವಸ್ತ್ರ ಮತ್ತು ಬೈಸಿಕಲ್ ವಿತರಣೆ.
- ಬಾಲಿಕೆಯರಿಗಾಗಿ ವಿಶೇಷ ಶಾಲೆಗಳ ಸ್ಥಾಪನೆ, ಕಸ್ತೂರಬಾ ಗಾಂಧಿ ಬಾಲಿಕೆಯರ ವಿದ್ಯಾಲಯ, ಕಿತ್ತೂರಾಣಿ ಮಹಿಳಾ ಸೈನಿಕ ಶಾಲೆ, ಬಾಲಿಕೆಯರ ಪ್ರಾಥಮಿಕ ಮತ್ತು ಪೌಢಶಾಲೆ ಮತ್ತು ಕಾಲೇಜುಗಳ ಸ್ಥಾಪನೆ ಮಾಡಲಾಗಿದೆ.
- ಬಿಜಾಪುರದಲ್ಲಿ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ ಸ್ಥಾಪಿತವಾಗಿದೆ.
- ಪ್ರತ್ಯೇಕ ಬಾಲಿಕೆಯರ ವಸತಿ ನಿಲಯಗಳ ಸ್ಥಾಪನೆ ಮಾಡಲಾಗಿದೆ.
- ಹೆಣ್ಣು ಮಕ್ಕಳಿಗೆ ವಿಶೇಷ ಶಿಷ್ಯವೇತನ ನೀಡುವುದು.

2. **ರಾಜಕೀಯದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವದು (Providing opportunities to participate in Politics):** ಈಗಾಗಲೇ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ.33 ಮಹಿಳಾ ಮೀಸಲಾತಿ ಕಲ್ಪಿಸಲಾಗಿದೆ. ಶಾಸನ ಸಭೆಗಳಲ್ಲಿ ಮೀಸಲಾತಿಗಾಗಿ ಪ್ರಯತ್ನ ಮುಂದುವರಿದಿದೆ.

3. **ಆದಾಯ ತರುವ ಯೋಜನೆಗಳು(Income generating schemes):** ಮಹಿಳೆಯನ್ನು ಸಬಲೀಕರಣಗೊಳಿಸಲು ಅವಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸುವುದರ ಜೊತೆಗೆ ಅವಳನ್ನು ಸ್ವಾವಲಂಬಿಯನ್ನಾಗಿ ಮಾಡಲು ಆರ್ಥಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡುವುದು ಅಗತ್ಯವಾಗಿದೆ. ಅದಕ್ಕಾಗಿ ಸರಕಾರವು ಈ ಕೆಳಗಿನ ಚಟುವಟಿಕೆಗಳ ಮೂಲಕ ಪ್ರೋತ್ಸಾಹಿಸುತ್ತಿದೆ.

- ಮಹಿಳಾ ಸ್ವಸಹಾಯ ಸಂಘಗಳಿಗೆ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಆರ್ಥಿಕ ನೆರವು ನೀಡಿ ಸ್ವಯಂ ಉದ್ಯೋಗಗಳಲ್ಲಿ ತೊಡಗುವಂತೆ ಪ್ರೋತ್ಸಾಹ.
- ಮಹಿಳಾ ಬ್ಯಾಂಕುಗಳ ಸ್ಥಾಪನೆಗೆ ಪ್ರೋತ್ಸಾಹ.

- ಸ್ವಯಂ ಉದ್ಯೋಗ ಕೈಗೊಳ್ಳಲು ಉಚಿತ ತರಬೇತಿ.
- ಆದಾಯ ತೆರಿಗೆಯಲ್ಲಿ ವಿನಾಯತಿ.
- ಅಂಚೆ ಕಛೇರಿ ಉಳಿತಾಯ ಸಂಗ್ರಹಣೆಯಲ್ಲಿ ಹೆಚ್ಚಿನ ಕಮೀಷನ್ ಲಭ್ಯ.

4. **ಮಹಿಳಾ ಸಾಕ್ಷರತಾ ಪ್ರಮಾಣವನ್ನು ಹೆಚ್ಚಿಸುವದು. (Increasing Female Literacy Level):** ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳನ್ನು ಸಮನ್ವಯಗೊಳಿಸುವ ಮೂಲಕ ಮಹಿಳಾ ಸಾಕ್ಷರತೆಯ ಮಟ್ಟವನ್ನು ಗರಿಷ್ಠ ಪ್ರಮಾಣದಲ್ಲಿ ಹೆಚ್ಚಿಸುವದು. ಸಾಕ್ಷರತೆಯಿಂದ ಮಹಿಳೆಯರು ಸ್ವಾವಲಂಬಿ ಜೀವನವನ್ನು ನಡೆಸಲು ಸಮರ್ಥರನ್ನಾಗಿಸುವದು.

5. **ಉದ್ಯೋಗದ ಅವಕಾಶಗಳು(Job Opportunities):** ಆರ್ಥಿಕ ಸ್ವಾವಲಂಬನೆಗಾಗಿ ಸರಕಾರಿ ಮತ್ತು ಅರೆಸರಕಾರಿ ಉದ್ಯೋಗಗಳಲ್ಲಿ ಅವಕಾಶ ಕಲ್ಪಿಸಲು ಸರಕಾರ ವಿಶೇಷ ಕಾನೂನು ರೂಪಿಸಿ ಮೀಸಲಾತಿಯನ್ನು ಆರಂಭಿಸಿದೆ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಹಿಳಾ ಉದ್ಯೋಗ ಸೃಷ್ಟಿಗಾಗಿ ವಿವಿಧ ಯೋಜನೆಗಳನ್ನು ರೂಪಿಸುತ್ತಿವೆ. ಅವುಗಳಲ್ಲಿ

- ಎಲ್ಲಾ ಕ್ಷೇತ್ರಗಳಲ್ಲಿ ಮಹಿಳಾ ಉದ್ಯೋಗ ಸೃಷ್ಟಿಗೆ ಅವಕಾಶ ಕಲ್ಪಿಸುವದು.
- ಎಲ್ಲ ಸರಕಾರಿ ನೇಮಕಾತಿಗಳಲ್ಲಿ ಶೇ.33 ರಿಂದ ಶೇ.50 ವರೆಗೆ ಮೀಸಲಾತಿ ಕಲ್ಪಿಸಿದೆ.

6. **ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ(Encouraging Social and Cultural activities):** ಮಹಿಳೆ ಸ್ವಭಾವತಃ ಸೌಂದರ್ಯ ಪ್ರಜ್ಞೆಯುಳ್ಳವಳು, ಕಲಾ ರಸಿಕಳು, ಕಲಾರಾಧಕಳೂ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪ್ರಜ್ಞೆಯುಳ್ಳವಳು ಆಗಿರುವಳು. ಹೀಗಾಗಿ ಅವಳನ್ನು ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಟುವಟಿಕಗಳಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳವಂತೆ ಪ್ರೋತ್ಸಾಹಿಸುವದು ಅವಳ ಸಬಲೀಕರಣಕ್ಕೆ ಉತ್ತಮ ಪ್ರೇರಣೆಯಾಗುತ್ತದೆ. ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ ಮಹಿಳೆ ಆತ್ಮವಿಶ್ವಾಸ ಮೂಡಿಸಿಕೊಳ್ಳಲು ಸಾಧ್ಯ. ನಮ್ಮ ದೇಶ ಸಾಮಾಜಿಕ ಹಾಗೂ ಸಾಂಸ್ಕೃತಿಕವಾಗಿ ಶ್ರೀಮಂತ ಪರಂಪರೆಯನ್ನು ಹೊಂದಿದೆ. ಸಮಾಜದಲ್ಲಿ ಮಹಿಳಾ ಸಂಘಗಳು, ಯುವತಿ ಸಂಘಗಳು, ಸಮಾಜ ಸೇವಾ ಸಂಘ–ಸಂಸ್ಥೆಗಳನ್ನು ಸಂಘಟಿಸುವ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಮಹಿಳೆಯರು ಪಾಲ್ಗೊಳ್ಳುವ ಮೂಲಕ ಅವರಲ್ಲಿ ವಾಕ್ ಚತುರತೆ, ಧೈರ್ಯ, ಅಭಿವ್ಯಕ್ತಿ ಸಾಮರ್ಥ್ಯ, ಮನೋಬಲ, ಸ್ವಾವಲಂಬನೆ, ವೈಚಾರಿಕತೆ ವೃದ್ಧಿಸಿ ಅವಳನ್ನು ಸಶಕ್ತಳನ್ನಾಗಿ ಮಾಡುತ್ತದೆ.

   ಸಾಂಸ್ಕೃತಿಕ ಚಟುವಟಿಕೆಗಳಾದ ಸಂಗೀತ, ಭರತನಾಟ್ಯ, ಗಮಕ, ನಾಟಕ, ಚಿತ್ರಕಲೆ ಮುಂತಾದವುಗಳಲ್ಲಿ ಅವಕಾಶ ಕಲ್ಪಿಸಿ ಕೊಡಬೇಕು. ಸಮಾಜ ಸೇವಾ ಚಟುವಟಿಕೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವಂತೆ ಪ್ರೇರೇಪಿಸಲು ಶಾಲಾ ಕಾಲೇಜಗಳಲ್ಲಿಯೇ ರಾಷ್ಟ್ರೀಯ ಸೇವಾ ಯೋಜನೆ, ಸ್ಕೌಟ್ಸ ಮತ್ತು ಗೈಡ್ಸ, ಎನ್.ಸಿ.ಸಿ, ಮುಂತಾದ ಚಟುವಟಿಕೆಗಳಲ್ಲಿ ಭಾಗವಹಿಸಿ ಧೈರ್ಯ ಸಾಹಸ ಬೆಳೆಸಿಕೊಳ್ಳುವ ಅವಕಾಶ ಕಲ್ಪಿಸಬೇಕು.

7. **ಮಹಿಳೆಯರ ಸಮಾನ ಹಕ್ಕುಗಳ ಹಾಗೂ ಶಾಸನಾತ್ಮಕ ಅಂಶಗಳ ಅನುಷ್ಠಾನ(Implimentation of Equal rights and constitutional provisions concern to women):** ಮಹಿಳೆಯರ ಸ್ಥಾನಮಾನ ಹೆಚ್ಚಿಸಿ ಸಬಲೀಕರಣಗೊಳಿಸಲು, ಸಂವಿಧಾನದ ಹಕ್ಕುಗಳ ಆಧಾರವಾಗಿ ಸರಕಾರ ಕಾನೂನುಗಳನ್ನು ರೂಪಿಸಿದೆ. ಅವುಗಳು ಈ ಕೆಳಗಿನಂತಿವೆ.

- ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ನೀತಿ.
- ಪಿತ್ರಾರ್ಜಿತ ಆಸ್ತಿಯಲ್ಲಿ ಸಮಾನ ಹಕ್ಕು.
- ಹೆಣ್ಣು ಮಕ್ಕಳ ಮೇಲೆ ದೌರ್ಜನ್ಯ ನಿಷೇಧ ಕಾಯ್ದೆ.
- ಬಾಲ್ಯ ವಿವಾಹ, ಬಹುಪತ್ನಿತ್ವ ಮತ್ತು ವರದಕ್ಷಿಣೆ ನಿಷೇಧ ಕಾಯ್ದೆಗಳು.
- ವಿಚ್ಛೇದನ ಹಾಗೂ ಪರಿಹಾರ ಕಾಯ್ದೆ.

## ರಾಷ್ಟ್ರೀಯ ಮಹಿಳಾ ಆಯೋಗ (National Women Council)(NWC)

1957 ರ ಯೋಜನಾ ಆಯೋಗದ ಶಿಫಾರಸ್ಸನ್ನು ರಾಜ್ಯ ಶಿಕ್ಷಣ ಮಂತ್ರಿಗಳ ಸಮಾವೇಶದಲ್ಲಿ ಚರ್ಚಿಸಿ ಒಪ್ಪಿಕೊಂಡು ರಾಷ್ಟ್ರೀಯ ಮಹಿಳಾ ಆಯೋಗವನ್ನು ಭಾರತ ಸರ್ಕಾರವು ಭಾರತೀಯ ಸಂವಿಧಾನದ 1990 ರ ಮಹಿಳಾ ಕಾನೂನಿನನ್ವಯ 31 ಜನೇವರಿ 1992 ರಂದು ಸ್ಥಾಪಿಸಲಾಯಿತು.


### ರಾಷ್ಟ್ರೀಯ ಮಹಿಳಾ ಆಯೋಗದ ಉದ್ದೇಶಗಳು(Objectives of NWC)

- ಮಹಿಳೆಯರ ಸಾಂವಿಧಾನಿಕ ಮತ್ತು ಕಾನೂನು ರಕ್ಷಣೋಪಾಯಗಳ ಅವಲೋಕನ.
- ಮಹಿಳಾ ಸಮಸ್ಯಾ ಪರಿಹಾರಕ್ಕೆ ಶಾಸನಗಳ ಶಿಫಾರಸ್ಸು.
- ಮಹಿಳೆಯರ ಜೀವನ ಮಟ್ಟ ಸುಧಾರಣೆಗೆ ಯೋಜನೆಗಳನ್ನು ಹಮ್ಮಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.

### ರಾಷ್ಟ್ರೀಯ ಮಹಿಳಾ ಆಯೋಗದ ಕಾರ್ಯಚಟುವಟಿಕೆಗಳು (Functions of NWC)

- ಮಹಿಳೆಯರಲ್ಲಿ ತಮ್ಮ ಕಾನೂನು ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿ, ಅವುಗಳನ್ನು ಬಳಸಿಕೊಳ್ಳಲು ಸಶಕ್ತರನ್ನಾಗಿ ಮಾಡುವುದು.
- ಸೇವೆಗಳ ಮೂಲಕ ತಮ್ಮ ಕುಂದುಕೊರತೆಗಳ ಪರಿಹಾರಕ್ಕೆ ನೆರವಾಗುವುದು.
- ದೇಶದ ವಿವಿಧ ಭಾಗಗಳಲ್ಲಿ ಲೋಕ ಅದಾಲತಗಳನ್ನು ಹಮ್ಮಿಕೊಳ್ಳುವುದರ ಮೂಲಕ ಮಹಿಳೆಯರಿಗೆ ಶೀಘ್ರಗತಿಯಲ್ಲಿ ನ್ಯಾಯ ಒದಗಿಸುವಂತೆ ಮಾಡುವುದು.
- ಪ್ರಸ್ತುತ ಸಂವಿಧಾನದಲ್ಲಿರುವ ಮಹಿಳೆಯರ ಪ್ರಾವಧಾನಗಳನ್ನು ಅವಲೋಕಿಸಿ ಅವಶ್ಯವಿದ್ದಲ್ಲಿ ತಿದ್ದುಪಡಿ ಮಾಡಲು ಶಿಫಾರಸ್ಸು ಮಾಡುವುದು.
- ಮಹಿಳೆಯರ ಸಮಸ್ಯೆಗಳಿಗೆ ಪರಿಹಾರ ದೊರಕಿಸಿಕೊಡುವುದು.
- ಮಹಿಳೆಯರ ಮೇಲಾಗುವ ಅತ್ಯಾಚಾರ, ದೌರ್ಜನ್ಯ, ತಾರತಮ್ಯಗಳನ್ನು ಹೋಗಲಾಡಿಸಲು ಹೋರಾಟ ಮಾಡುವುದು.
- ಮಹಿಳೆ ಎದುರಿಸುತ್ತಿರುವ ಕುಟುಂಬ ಕಲಹಗಳು, ಹಕ್ಕುಗಳು ಹಾಗೂ ಆರ್ಥಿಕ ಸಮಸ್ಯೆಗಳ ಪರಿಹಾರಕ್ಕೆ ತಜ್ಞರ ಮೂಲಕ ಸಂಶೋಧನೆ ಮಾಡಿಸಿ ಪರಿಹಾರ ರೂಪಿಸುವುದು.
- ಜೈಲಿನಲ್ಲಿರುವ ಮಹಿಳಾ ಖೈದಿ, ರಿಮ್ಯಾಂಡಹೋಮ್‌ಗಳಲ್ಲಿರುವ ಬಾಲಕಿಯರನ್ನು ಭೇಟಿ ಮಾಡಿ ಕುಂದುಕೊರತೆಗಳನ್ನು ವಿಚಾರಿಸುವುದು.
- ಮಹಿಳಾ ಹಕ್ಕುಗಳ ಸಂರಕ್ಷಣೆ ಕುರಿತಂತೆ ಮೇಲ್ವಿಚಾರಣೆ ಹಾಗೂ ಪರಿಶೀಲನೆ ನಡೆಸುವುದು.
- ಮಹಿಳೆಗೆ ಅವಳ ಹಕ್ಕಿನ ಪ್ರಕಾರ ಎಲ್ಲ ಕ್ಷೇತ್ರಗಳಲ್ಲಿ ಅವಕಾಶಗಳು ಲಭ್ಯವಾಗುವಂತೆ ಜಾಗರೂಕತೆವಹಿಸುವುದು.

### 5.6 ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣ– ಪರಿಕಲ್ಪನೆ–ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವ (Libaralisation, Privatisation,Globalisation)-(LPG)-Concept-Impact of Globalisation on Education)




ಆಧುನಿಕ ಜಗತ್ತಿನಲ್ಲಿ ಯಾವ ದೇಶವೂ ಸ್ವಯಂ ಪರಿಪೂರ್ಣವಲ್ಲ. ತನ್ನ ಅಗತ್ಯಗಳ ಪೂರೈಕೆಗಾಗಿ ಪ್ರತಿಯೊಂದು ದೇಶವೂ ಇತರ ದೇಶಗಳನ್ನು ಅವಲಂಬಿಸಲೇಬೇಕಾಗಿದೆ. ಈ ಹಿನ್ನೆಲೆಯಲ್ಲಿ ದೇಶ–ದೇಶಗಳ ಮಧ್ಯೆ ವ್ಯಾಪಾರ – ವಾಣಿಜ್ಯ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ವಿನಿಮಯಗಳು ಮುಕ್ತವಾಗಿ ಜರುಗುವ ವ್ಯವಸ್ಥೆಯೊಂದು ಅಗತ್ಯವಾಗಿದೆ. ಅದನ್ನು ಸೃಷ್ಟಿಸಲು ಅನುವು ಮಾಡಿಕೊಡುವುದೇ ಜಾಗತೀಕರಣ. ಜಾಗತೀಕರಣವು ಒಂದು ಸಮಗ್ರವಾದ ಹಾಗೂ ಸುದೀರ್ಘ ಪ್ರಕ್ರಿಯೆ. ಅದು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣಗಳೆಂಬ **(LPG )** ಮೂರು ಪ್ರಕ್ರಿಯೆಗಳನ್ನು ಒಳಗೊಂಡಿದೆ.

ಜಾಗತೀಕರಣವು ಇಡೀ ಜಗತ್ತನ್ನು ಒಂದು ಪುಟ್ಟ ಗ್ರಾಮವನ್ನಾಗಿಸಿದೆ. ಇದರಿಂದ ಜಗತ್ತಿನಲ್ಲಿ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಚಟುವಟಿಕೆಗಳು ಬಹುಮುಖಿಯಾಗುತ್ತವೆ ಮತ್ತು ಪರಸ್ಪರ ಬೆಸೆದುಕೊಳ್ಳುತ್ತವೆ.

ಪ್ರಧಾನ ಮಂತ್ರಿಯವರಾಗಿದ್ದ ಪಿ.ವಿ.ನರಸಿಂಹರಾವ್ ಹಾಗೂ ಹಣಕಾಸು ಸಚಿವರಾದ್ದ ಡಾ.ಮನಮೋಹನ ಸಿಂಗರವರು 1991ರಲ್ಲಿ GATT (General Agreement on Trade and Tariff) ಒಪ್ಪಂದಕ್ಕೆ ಸಹಿ ಹಾಕುವುದರ ಮೂಲಕ *ಹೊಸ*

ಆರ್ಥಿಕ ಹಾಗೂ ಕೈಗಾರಿಕಾ ನೀತಿಯ ಸುಧಾರಣೆಗಳ ಹೊಸ ಮಾದರಿಯನ್ನು ಒದಗಿಸಿದರು. ಈ ಮಾದರಿಯು ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದ ಮಾದರಿಯೆಂದೇ ಜನಪ್ರಿಯವಾಗಿದೆ. ಈ ಹೊಸ ಮಾದರಿಯ ಪ್ರಮುಖ ಉದ್ದೇಶವು – ಭಾರತದ ಅರ್ಥ ವ್ಯವಸ್ಥೆಯನ್ನು ಜಗತ್ತಿನ ಅತಿ ವೇಗವಾಗಿ ಬೆಳೆಯುತ್ತಿರುವ ಅರ್ಥ ವ್ಯವಸ್ಥೆಯನ್ನಾಗಿ ರೂಪಿಸುವ ಮತ್ತು ಜಗತ್ತಿನ ಅತಿ ದೊಡ್ಡ ಅರ್ಥ ವ್ಯವಸ್ಥೆಗಳೊಂದಿಗೆ ಸ್ಪರ್ಧಿಸಲು ಅದನ್ನು ಸಮರ್ಥವಾಗಿಸುವುದಾಗಿತ್ತು.

### ಉದಾರೀಕರಣದ ಪರಿಕಲ್ಪನೆ(Concept of Liberalisation):

ಸಾಮಾನ್ಯ ಅರ್ಥದಲ್ಲಿ ಉದಾರೀಕರಣವೆಂದರೆ "ವ್ಯಾಪಾರದಲ್ಲಿ ಮುಕ್ತತೆ ಅಥವಾ ಸಡಿಲಿಕೆ ಎಂದಾಗುವುದು. ಆದ್ದರಿಂದ ಮುಕ್ತ ವ್ಯಾಪಾರಕ್ಕಿರುವ ಎಲ್ಲ ನಿಯಮ, ಕಾನೂನು, ನಿರ್ಬಂಧಗಳನ್ನು, ಅಡೆತಡೆಗಳನ್ನು ಸಡಿಲಗೊಳಿಸಿ ನಿಯಂತ್ರಣದಿಂದ ಮುಕ್ತಗೊಳಿಸುವುದೇ **ಉದಾರೀಕರಣವಾಗಿದೆ.**"

"ಒಂದು ದೇಶದಲ್ಲಿ ಮತ್ತೊಂದು ದೇಶವು ಬಂಡವಾಳ ಹೂಡಿ ವ್ಯಾಪಾರ ಪ್ರಾರಂಭಿಸಲು ಇಚ್ಛಿಸಿದಾಗ, ಆ ದೇಶದ ಕಾನೂನುಗಳನ್ನು ಪಾಲಿಸಲು ಸಾಧ್ಯವಿಲ್ಲದಿದ್ದಾಗ ಅವುಗಳನ್ನು ಮಾರ್ಪಡಿಸಿ, ಸಡಿಲಗೊಳಿಸಿ ಅನುಕೂಲ ಮಾಡಿಕೊಡುವ ಪ್ರಕ್ರಿಯೆಯೇ **ಉದಾರೀಕರಣ**".

"**ಉದಾರೀಕರಣವು** ವಿಶಾಲಾರ್ಥದಲ್ಲಿ ಅರ್ಥವ್ಯವಸ್ಥೆಯಲ್ಲಿ ಖಾಸಗಿ ಪಾಲುದಾರಿಕೆಯನ್ನು ಹೆಚ್ಚಿಸುವುದಕ್ಕಾಗಿ ವ್ಯಾಪಾರ – ವಿನಿಮಯಗಳ ಮೇಲಿನ ಸರ್ಕಾರಿ ನಿಯಮಗಳು ಹಾಗೂ ನಿರ್ಬಂಧಗಳನ್ನು ಕಡಿಮೆಗೊಳಿಸುವುದಾಗಿದೆ."

"ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ನೀತಿಗಳಲ್ಲಿ ಸರ್ಕಾರಿ ನಿಯಂತ್ರಣಗಳನ್ನು ಸಡಿಲಗೊಳಿಸಿ ಹೆಚ್ಚು ಸ್ವಾತಂತ್ರ್ಯ ಒದಗಿಸುವುದೇ ಉದಾರೀಕರಣವಾಗಿದೆ. ಸರ್ಕಾರವು ವ್ಯಾಪಾರವನ್ನು ಉದಾರೀಕರಣಗೊಳಿಸಿದೆಯೆಂದರೆ ಅದು ದೇಶಗಳ ಮಧ್ಯೆ ಸರಕು ಮತ್ತು ಸೇವೆಗಳ ಹರಿವಿನ ಮೇಲಿರುವ ಸುಂಕಗಳು, ಸಹಾಯ ಧನಗಳು ಹಾಗೂ ಇತರ ನಿರ್ಬಂಧಗಳನ್ನು ತೆಗೆದು ಹಾಕಿದೆಯೆಂದೇ ಅರ್ಥ."

ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಸರ್ಕಾರದ ನಿಯಂತ್ರಣಗಳನ್ನು ಕಡಿಮೆಗೊಳಿಸುವುದು ಅಂದರೆ, ಪಠ್ಯಕ್ರಮ ನಿರೂಪಣೆ, ಪ್ರವೇಶ ಪ್ರಕ್ರಿಯೆ, ಬೋಧನೆ, ಶಾಲೆ–ಕಾಲೇಜುಗಳ ಆಡಳಿತ, ಮತ್ತು ಶಿಕ್ಷಕರ ನೇಮಕಾತಿ ಮುಂತಾದವುಗಳಲ್ಲಿ ಸರ್ಕಾರದ ನಿರ್ಬಂಧಗಳಿಂದ ಮುಕ್ತವಾಗಿರುವುದನ್ನು ಶಿಕ್ಷಣದಲ್ಲಿ ಉದಾರೀಕರಣ ಎನ್ನಬಹುದು.

ಒಂದು ದೇಶದ ಶಿಕ್ಷಣ ಸಂಸ್ಥೆಯವರು ಯಾವುದೇ ದೇಶದಲ್ಲಿ ಶೈಕ್ಷಣಿಕ ಸಂಸ್ಥೆಗಳನ್ನು ತಮ್ಮ ಬಂಡವಾಳದ ಮೂಲಕ ಸ್ಥಾಪಿಸಿ, ಪಠ್ಯಕ್ರಮ, ಬೋಧನಾಕ್ರಮ, ಮೌಲ್ಯಮಾಪನದ ಮೂಲಕ ಪದವಿಯನ್ನು ನೀಡಿ ಪ್ರತಿಭಾವಂತರನ್ನು ರೂಪಗೊಳಿಸುವದನ್ನು **ಶಿಕ್ಷಣದಲ್ಲಿ ಉದಾರೀಕರಣ ಎನ್ನುವರು**

### ಖಾಸಗೀಕರಣದ ಪರಿಕಲ್ಪನೆ(Concept of Privatisation):

1980–90 ರ ಹೊಸ ಆರ್ಥಿಕ ನೀತಿಯ ಕೊಡುಗೆ ಹಾಗೂ ಉದಾರೀಕರಣದ ಫಲಶೃತಿಯಾಗಿ ಖಾಸಗೀಕರಣದ ಪರಿಕಲ್ಪನೆ ಆರಂಭವಾಯಿತು. ಇದನ್ನು ಪ್ರಥಮವಾಗಿ 1980 ರಲ್ಲಿ ಬ್ರಿಟನ ದೇಶದ ಪ್ರಧಾನಿ ಮಾರ್ಗರೇಟ್ ಥ್ಯಾಚರ ಬ್ರಿಟೀಷ ಎರ್‌ವೇಸ್, ಟೆಲಿಕಮ್, ಸ್ಟೀಲ್ಸ ಮುಂತಾದವುಗಳನ್ನು ಖಾಸಗಿಯವರ ಒಡೆತನಕ್ಕೆ ನೀಡುವ ಮೂಲಕ **ಖಾಸಗೀಕರಣವನ್ನು** ಆರಂಭಿಸಿದರು.

"ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳ ಒಡೆತನ ಹಾಗೂ ನಿಯಂತ್ರಣಗಳನ್ನು ಖಾಸಗಿ ವ್ಯಕ್ತಿಗಳಿಗೆ ಇಲ್ಲವೇ ಕಂಪನಿಗಳಿಗೆ ವರ್ಗಾಯಿಸುವುದನ್ನು **ಖಾಸಗೀಕರಣ**" ಎನ್ನುವರು.

"ಸರಕಾರ ತನ್ನ ಒಡೆತನದಲ್ಲಿರುವ ಹಾಗೂ ನಷ್ಟ ಅನುಭವಿಸುತ್ತಿರುವ ಸಾರ್ವಜನಿಕ ಉದ್ಯಮ, ಬ್ಯಾಂಕ್, ಹಾಗೂ ಶಿಕ್ಷಣ ಸಂಸ್ಥೆಗಳನ್ನು ಖಾಸಗಿಯವರ ಒಡೆತನಕ್ಕೆ ಮಾರಾಟ ಮಾಡುವುದಕ್ಕೆ ಅಥವಾ ನಿಯಂತ್ರಣಕ್ಕೆ ಒಪ್ಪಿಸುವುದನ್ನು **ಖಾಸಗೀಕರಣ**" ಎನ್ನುವರು.

"ಸರಕಾರವು ಖಾಸಗಿ ವ್ಯಕ್ತಿಗಳಿಗೆ ಇಲ್ಲವೇ ಸಂಸ್ಥೆಗಳಿಗೆ ತಮ್ಮದೇ ಬಂಡವಾಳದೊಂದಿಗೆ ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಲು ಅನುಮತಿಸಿ ಸರಕಾರದಿಂದ ಯಾವುದೇ ಧನಸಹಾಯ ಮಾಡದಿರುವುದನ್ನು(ಶಾಶ್ವತ ಅನುದಾನ ರಹಿತ) **ಖಾಸಗೀಕರಣ**" ಎನ್ನುವರು.

ಪ್ರಸ್ತುತ ಶಿಕ್ಷಣ ರಂಗದಲ್ಲಿ ಶಾಶ್ವತ ಅನುದಾನ ರಹಿತವಾಗಿ ಎಲ್ಲ ನಗರ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿಯೂ ಶಾಲಾ ಕಾಲೇಜುಗಳು, ಇವುಗಳಲ್ಲದೇ ಖಾಸಗಿ ಸ್ವಾಯತ್ತ ವಿಶ್ವವಿದ್ಯಾಲಯಗಳು ಸ್ಥಾಪಿತವಾಗಿರುವದು ಖಾಸಗೀಕರಣದ ಫಲಿತವಾಗಿದೆ.

**ಜಾಗತೀಕರಣದ ಪರಿಕಲ್ಪನೆ(Concept of Globalisation):** ಜಾಗತೀಕರಣ ಎಂಬ ಪದವು 1980ರ ದಶಕದಲ್ಲಿ ಹೆಚ್ಚು




ಬಳಕೆಯಾಗ ತೊಡಗಿತು. ಅದು ತಾಂತ್ರಿಕ ಪ್ರಗತಿಯ ದೆಸೆಯಿಂದಾಗಿ ಅಂತರಾಷ್ಟ್ರೀಯ ವ್ಯಾಪಾರ –ವಹಿವಾಟುಗಳು ಮತ್ತು ಹಣದ ವಿನಿಮಯಗಳು ವೇಗವಾಗಿ ಮತ್ತು ಸುಲಭವಾಗಿ ಜರುಗುವುದನ್ನು ಸೂಚಿಸುತ್ತಿತ್ತು. ಜಾಗತೀಕರಣವು ಶತಮಾನಗಳಿಂದ ಮಾನವನು ವಿವಿಧ ಹಂತಗಳಲ್ಲಿ ನಡೆಸುತ್ತಿದ್ದ ಆರ್ಥಿಕ ಚಟುವಟಿಕೆಗಳನ್ನು ದೇಶಗಳ ಭೌಗೋಳಿಕ ಸೀಮೆಗಳಾಚೆಗೆ ವಿಸ್ತರಿಸುತ್ತದೆ. **"ವಿಶ್ವವೇ ನನ್ನ ಮನೆ, ಮನುಕುಲವೇ ನನ್ನ ಕುಟುಂಬ"** ಎಂಬ ತಾತ್ವಿಕ ತಳಹದಿಯ ಮೇಲೆ ಜಾಗತೀಕರಣ ನಿಂತಿದೆ. **'ವಿಶ್ವ ಗ್ರಾಮ'** ಎಂಬ ಪದವು ಜಾಗತೀಕರಣದ ಮಹತ್ವವನ್ನು ಸೂಚಿಸಲು ಬಳಕೆಯಾಗುತ್ತದೆ. ಈ ಪದವು ವಿದ್ಯುನ್ಮಾನ ಸಂಪರ್ಕದಲ್ಲಿನ ಕ್ರಾಂತಿಯು ಜಗತ್ತನ್ನೇ ಒಂದಾಗಿಸಬಹುದೆಂಬುದನ್ನು ತಿಳಿಸುತ್ತದೆ. ಆದ ಕಾರಣ ಜಾಗತೀಕರಣವು ಕೇವಲ ಪ್ರಸಕ್ತ ಜಗತ್ತಿನ ವಿದ್ಯಮಾನವಷ್ಟೇ ಆಗಿರದೇ ಭವಿಷ್ಯದ ಜಾಗತಿಕ ವ್ಯವಸ್ಥೆಯೂ ಆಗಬಲ್ಲದೆಂಬುದನ್ನು ಯಾವ ಸಂಶಯವಿಲ್ಲದೇ ಒಪ್ಪಬಹುದು.

ಒಂದು ರಾಷ್ಟ್ರದ ಮೇರೆಗಳನ್ನು ದಾಟಿ ಅಂತರಾಷ್ಟ್ರೀಯ ಮಟ್ಟದವರೆಗೂ ವ್ಯಾಪಾರ ಮತ್ತು ವ್ಯವಹಾರಗಳನ್ನು ನಡೆಸುವ ಪ್ರಕ್ರಿಯೆಗೆ **ಜಾಗತೀಕರಣ** ಎನ್ನುವರು.

"**ಜಾಗತೀಕರಣವು** ಜಗತ್ತಿನ ಎಲ್ಲ ಜನರು ಒಂದೇ ಜಾಗತಿಕ ಸಮಾಜ, ಅಂದರೆ ವಿಶ್ವ ಸಮಾಜವಾಗಿ ಒಗ್ಗೂಡುವ ಎಲ್ಲ ಪ್ರಕ್ರಿಯೆಗಳನ್ನು ಸೂಚಿಸುತ್ತದೆ". **– ಮಾರ್ಟಿನ್ ಅಲ್ಬ್ರೊ (1990)**

"ಜಗತ್ತಿನ ಯಾವುದೋ ಮೂಲೆಯಲ್ಲಿ ಜರುಗುವ ಘಟನೆಗಳು ಸ್ಥಳೀಯ ವಿದ್ಯಮಾನಗಳ ಮೇಲೆ ಪ್ರಭಾವ ಬೀರುವ ರೀತಿಯಲ್ಲಿ ದೂರ–ದೂರವಾಗಿರುವ ಸ್ಥಳಗಳ ಮಧ್ಯೆ ಸಾಮಾಜಿಕ ಸಂಬಂಧಗಳನ್ನು ಬಲಿಷ್ಠವಾಗಿ ಬೆಸೆಯುವುದನ್ನು **ಜಾಗತೀಕರಣ** ಎನ್ನಬಹುದು". **– ಆಂಥನಿ ಗಿಡ್ಡೆನ್ಸ್ (1990)**

"ಆರ್ಥಿಕ ಜಾಗತೀಕರಣವು ಮಾನವನ ನವೀನ ಚಿಂತನೆಗಳ ಹಾಗೂ ತಾಂತ್ರಿಕ ಪ್ರಗತಿಯ ಫಲವಾಗಿ ಉಂಟಾದ ಐತಿಹಾಸಿಕ ಪ್ರಕ್ರಿಯೆಯಾಗಿದೆ. ರಾಷ್ಟ್ರಗಳ ನಡುವೆ ಸರಕು, ಸೇವೆಗಳು ಮತ್ತು ಬಂಡವಾಳದ ಚಲನೆಯ ಪರಿಣಾಮವಾಗಿ ಜಗತ್ತಿನ ಅರ್ಥವ್ಯವಸ್ಥೆಗಳು ಒಂದಾಗುತ್ತಿರುವುದನ್ನು ಅದು ಸಂಕೇತಿಸುತ್ತದೆ. ಅಷ್ಟಲ್ಲದೇ ಜಾಗತೀಕರಣವು ಕೆಲವು ಸಲ ಅಂತರಾಷ್ಟ್ರೀಯ ಗಡಿಗಳ ಮಧ್ಯೆ ಶ್ರಮ ಮತ್ತು ತಾಂತ್ರಿಕ ಜ್ಞಾನದ ಚಲನೆಯನ್ನು ಸಹ ಸೂಚಿಸುತ್ತದೆ. ಜಾಗತೀಕರಣಕ್ಕೆ ಸಾಂಸ್ಕೃತಿಕ, ರಾಜಕೀಯ ಮತ್ತು ಪರಿಸರದ ಆಯಾಮಗಳೂ ಇವೆ". **–IMF**

ಯಾವುದೇ ದೇಶದವರು ತಮ್ಮ ಶೈಕ್ಷಣಿಕ ಸಂಸ್ಥೆಗಳನ್ನು ತಮ್ಮ ಬಂಡವಾಳ ಹೂಡಿ ಯಾವುದೇ ದೇಶದಲ್ಲಿ ಅಂತರಾಷ್ಟ್ರೀಯ ಮಟ್ಟದ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸುವ ಪ್ರಕ್ರಿಯೆಯನ್ನು ಶಿಕ್ಷಣದಲ್ಲಿ ಜಾಗತೀಕರಣ ಎನ್ನುವರು.

**ಜಾಗತೀಕರಣದ ನಾಲ್ಕು ಅಂಶಗಳು**

1. ದೇಶಗಳ ಮಧ್ಯೆ ಇರುವ ವ್ಯಾಪಾರೀ ಸಂಬಂಧ ಅಡೆತಡೆಗಳನ್ನು ತೊಡೆದು ಹಾಕಿ ಮುಕ್ತವಾಗಿ ಚಲಿಸುವಂತೆ ಮಾಡುವದು.
2. ಜಾಗತಿಕ ಅರ್ಥವ್ಯವಸ್ಥೆಯ ಸಂಯೋಜನೆ ಅಂದರೆ ಬಂಡವಾಳ ಮುಕ್ತವಾಗಿ ಚಲಿಸುವಂತೆ ಮಾಡುವುದು.
3. ತಂತ್ರಜ್ಞಾನ ಮುಕ್ತವಾಗಿ ಎಲ್ಲರಿಗೂ ದೊರೆಯುವಂತೆ ಮಾಡುವುದು.
4. ಉತ್ತಮ ಗುಣಮಟ್ಟದ ಸೌಲಭ್ಯಗಳು ಎಲ್ಲ ಕಡೆ ದೊರೆಯುವಂತೆ ಮಾಡುವುದು.

## ಶಿಕ್ಷಣದ ಮೇಲೆ ಜಾಗತೀಕರಣದ ಪ್ರಭಾವ (Impact of Globalisation on Education):

ಜಾಗತೀಕರಣವು ಒಂದು ಸಮಗ್ರವಾದ ಮತ್ತು ಸುದೀರ್ಘವಾದ ಪ್ರಕ್ರಿಯೆಯಾಗಿದೆ. ಅದು ಮಾನವ ಜೀವನದ ಎಲ್ಲ ರಂಗಗಳ ಮೇಲೆ ಹಲವು ಗಂಭೀರ ಪರಿಣಾಮಗಳನ್ನು ಬೀರಬಲ್ಲದು.

**ಜಾಗತೀಕರಣದ ಸಕಾರಾತ್ಮಕ ಪರಿಣಾಮಗಳು**

1. **ತಂತ್ರಜ್ಞಾನದ ಲಭ್ಯತೆ(Access to Technology):** ಜಾಗತೀಕರಣವು ಶಿಕ್ಷಣದಲ್ಲಿ ತಂತ್ರಜ್ಞಾನದ ಲಭ್ಯತೆಯನ್ನು ಹೆಚ್ಚಿಸಿದೆ. ಇಂಟರ್‌ನೆಟ್ ಸೌಲಭ್ಯದಿಂದಾಗಿ ಜಗತ್ತಿನ ಇತರೆಡೆಗಳಿಂದ ಜ್ಞಾನ ಹಾಗೂ ಸೇವೆಗಳನ್ನು ಪಡೆಯಲು ಸಾಧ್ಯವಾಗಿದೆ.

ಬಹು ಮಾಧ್ಯಮ ತಾಂತ್ರಿಕತೆಯು ಶಿಕ್ಷಣ ಕ್ಷೇತ್ರದಲ್ಲಿ ದಿನೇ ದಿನೇ ಜನಪ್ರೀಯವಾಗುತ್ತಿದೆ. ಸ್ಮಾರ್ಟ್ ಕ್ಲಾಸ್‌ರೂಮ್‌ಗಳ ಬಳಕೆಯು ಬೋಧನೆ –ಕಲಿಕೆಯಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದೆ.

**2. ಅಂತರರಾಷ್ಟ್ರೀಯ ಶಾಲೆ–ಕಾಲೇಜುಗಳ ಸ್ಥಾಪನೆ(Establishment of international Schools and colleges)**
ಸುಂಕಗಳ ನಿವಾರಣೆಯಿಂದಾಗಿ ದೇಶಗಳ ಮಧ್ಯೆ ಅಂ. ರಾ. ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಸಾಧ್ಯವಾಗಿದೆ. ಜಾಗತಿಕ ಶೈಕ್ಷಣಿಕ ವ್ಯವಹಾರಗಳಿಗೆ GATS(General Agreement on Trade and Services), WTO(World Trade Organisation) ಇತ್ಯಾದಿಗಳು ಅನುವು ಮಾಡಿ ಕೊಟ್ಟಿವೆ.

**3. ಶಿಕ್ಷಣದಲ್ಲಿ ಗುಣಮಟ್ಟದ ಹೆಚ್ಚಳ(Increase Quality in Education)**: ಜಾಗತೀಕರಣದ ಪರಿಣಾಮವಾಗಿ ಶಿಕ್ಷಣದ ಗುಣಮಟ್ಟದಲ್ಲಿ ಹೆಚ್ಚಳ ಸಾಧ್ಯವಾಗಿದೆ. ಖಾಸಗಿ ಹಾಗೂ ವಿದೇಶಿ ಶಿಕ್ಷಣ ಸಂಸ್ಥೆಗಳ ನವೀನ ಚಿಂತನೆ ಹಾಗೂ ಪ್ರಯೋಗಶೀಲತೆಯ ಕಾರಣ ಶಿಕ್ಷಣದ ಗುಣಮಟ್ಟದಲ್ಲಿ ಗಣನೀಯ ಸುಧಾರಣೆಯಾಗಿದೆ. ಸ್ಪರ್ಧೆಯ ಕಾರಣದಿಂದಾಗಿ ಶಿಕ್ಷಣ ಸಂಸ್ಥೆಗಳು ಅಂತರ್‌ರಾಷ್ಟ್ರೀಯ ಗುಣಮಟ್ಟವನ್ನು ಅಳವಡಿಸಿಕೊಳ್ಳುತ್ತಿವೆ.

**4. ಉದ್ಯೋಗಾವಕಾಶಗಳು(Employment opportunities)**: ಬಹುರಾಷ್ಟ್ರೀಯ ಕಂಪನಿಗಳ ಸ್ಥಾಪನೆಯು ಪ್ರತಿಭಾವಂತ ವ್ಯಕ್ತಿಗಳಿಗೆ ಹಾಗೂ ಶಿಕ್ಷಕರಿಗೆ ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ ಮತ್ತು ಅವರು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸೂಕ್ತ ಹುದ್ದೆ ಹಾಗೂ ವೇತನ ಪಡೆಯಲು ಸಾಧ್ಯವಾಗಿದೆ.



**5. ವಿದೇಶಿ ಬಂಡವಾಳದ ಮುಕ್ತ ಹರಿವು(Free flow of foreign capital)**: ಜಾಗತೀಕರಣವು ಶಿಕ್ಷಣ ಹಾಗೂ ಎಲ್ಲ ಕ್ಷೇತ್ರದಲ್ಲಿ ಬಂಡವಾಳದ ಮುಕ್ತ ಹರಿವನ್ನು ಉತ್ತೇಜಿಸಿದೆ. ಪರಿಣಾಮವಾಗಿ ಅಭಿವೃದ್ಧಿಶೀಲ ರಾಷ್ಟ್ರಗಳ ಆರ್ಥಿಕತೆಯಲ್ಲಿ ಸುಧಾರಣೆ ಕಂಡು ಬಂದಿರುವ ಜೊತೆಯಲ್ಲಿ ಹೆಚ್ಚಿನ ಬಂಡವಾಳ ನಿರ್ಮಾಣವೂ ಸಾಧ್ಯವಾಗಿದೆ.

**6. ಸರ್ಕಾರದ ಹೂಡಿಕೆಯಲ್ಲಿ ಇಳಿಕೆ(Reduced funding on part of the Government)**: ಜಾಗತೀಕರಣ ದಿಂದಾಗಿ ಶಿಕ್ಷಣ ಕ್ಷೇತ್ರದಲ್ಲಿ ಸರ್ಕಾರದ ಬಂಡವಾಳ ಹೂಡಿಕೆಯು ಗಮನಾರ್ಹವಾಗಿ ಇಳಿದಿದೆ. ಪರಿಣಾಮವಾಗಿ ಖಾಸಗಿ ಹಾಗೂ ವಿದೇಶೀ ಸಂಸ್ಥೆಗಳಿಗೆ ಅಗತ್ಯ ಮನ್ನಣೆ ಸಿಕ್ಕಿದೆ. ಭಾರತದಲ್ಲಿ ಜಾಗತೀಕರಣವು ಎಲ್ಲ ಕ್ಷೇತ್ರಗಳ ಪ್ರಗತಿಯ ಕ್ಷಿತಿಜವನ್ನು ವಿಸ್ತರಿಸುವ ಮೂಲಕ ಉನ್ನತ ಶಿಕ್ಷಣಕ್ಕೆ ಉತ್ತೇಜನ ನೀಡಿದೆ.

**7. ದೂರ ಶಿಕ್ಷಣದ ಲಭ್ಯತೆ(Access to Distance education)**: ಜಾಗತೀಕರಣವು ವಿದೇಶಗಳಲ್ಲಿ ಮಾತ್ರ ದೊರೆಯಬಹುದಾಗಿದ್ದ ಹೊಸ ಶೈಕ್ಷಣಿಕ ಮಾದರಿಗಳನ್ನು ನಮ್ಮ ಪ್ರತಿಭಾವಂತ ವಿದ್ಯಾರ್ಥಿಗಳು ದೂರ ಶಿಕ್ಷಣದ ಮೂಲಕ ದೇಶದೊಳಗೆಯೇ ಪಡೆಯಲು ಅವಕಾಶ ಕಲ್ಪಿಸಿದೆ.

**8. ವಿಶ್ವ ಗ್ರಾಮ ಮತ್ತು ವಿಶ್ವ ಶಾಲೆ( Global Village and Global School )**: ಜಾಗತೀಕರಣದಿಂದ ವಿಶ್ವ ಗ್ರಾಮ ಮತ್ತು ವಿಶ್ವ ಶಾಲೆಯ ಪರಿಕಲ್ಪನೆಗಳು ಅಭಿವೃದ್ಧಿಗೊಂಡಿವೆ.

**9. ಮಾನವ ಸಂಪನ್ಮೂಲಗಳ ವಿನಿಮಯ(Exchange of Human Resources):** ಜಾಗತೀಕರಣವು ಉತ್ತಮ ಸಂಪನ್ಮೂಲ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ವಿನಿಮಯವನ್ನು ಪ್ರೋತ್ಸಾಹಿಸುತ್ತದೆಯಾದ್ದರಿಂದ ಮಾನವ ಸಂಪನ್ಮೂಲಗಳ ಗರಿಷ್ಠ ಬಳಕೆ ಸಾಧ್ಯವಾಗುತ್ತದೆ.

**10. ವಿಶ್ವ ಭ್ರಾತೃತ್ವ ಹಾಗೂ ವಿಶ್ವಶಾಂತಿ( Universal brotherhood and peace)**: ಜಾಗತೀಕರಣದಿಂದ ವಿವಿಧ ದೇಶಗಳ ಮಧ್ಯೆ ಉತ್ತಮ ಸಂಬಂಧ ಏರ್ಪಟ್ಟು ಅಂತರಾಷ್ಟ್ರೀಯ ವ್ಯಾಪಾರ ವಹಿವಾಟುಗಳು ಮತ್ತು ಹಣದ ವಿನಿಮಯಗಳು ವೇಗವಾಗಿ ಮತ್ತು ಸುಲಭವಾಗಿ ಜರಗುವುದರಿಂದ ವಿಶ್ವಭ್ರಾತೃತ್ವ ಹಾಗೂ ವಿಶ್ವ ಶಾಂತಿ ಉಂಟು ಮಾಡುವದು.

### ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು(Negative effect of globalization)

**1. ದೇಶಗಳ ಮಧ್ಯೆ ಅಸಮಾನತೆ(Inequalities within countries)**: ಜಾಗತೀಕರಣವು ದೇಶ – ದೇಶಗಳ ಮಧ್ಯೆ ಅಸಮಾನತೆಯನ್ನು ಹೆಚ್ಚಿಸಿದೆ. ಜಾಗತೀಕರಣದ ಹಲವು ನೀತಿಗಳು ಅಭಿವೃದ್ಧಿ ಹೊಂದಿದ ದೇಶಗಳಿಗೆ ಹೆಚ್ಚು ಲಾಭದಾಯಕವಾಗಿವೆ. ಹಿಂದುಳಿದ ಹಾಗೂ ಅಭಿವೃದ್ಧಿಶೀಲ ಅರ್ಥವ್ಯವಸ್ಥೆಗಳು ಜಾಗತೀಕರಣದ ಲಾಭ ಪಡೆಯುವಲ್ಲಿ ವಿಫಲವಾಗಿವೆ.

**2. ಆರ್ಥಿಕ ಅಸ್ಥಿರತೆ(Financial Instability)**: ಜಾಗತೀಕರಣದಿಂದಾಗಿ ಹಿಂದುಳಿದ ಹಾಗೂ ಅಭಿವೃದ್ಧಿಶೀಲ ಅರ್ಥವ್ಯವಸ್ಥೆಗಳಲ್ಲಿ ವಿದೇಶೀ ಬಂಡವಾಳವು ಮುಕ್ತವಾಗಿ ಹರಿದು ಬರುತ್ತದೆಯಾದರೂ ಅದರಲ್ಲಿನ ಏರಿಳಿತಗಳಿಂದಾಗಿ ಈ ದೇಶಗಳಲ್ಲಿ ಆರ್ಥಿಕ ಅಸ್ಥಿರತೆಯು ಕಂಡು ಬರುತ್ತದೆ.

**3. ಕಾರ್ಮಿಕರ ಮೇಲೆ ಪ್ರಭಾವ(Impact on workers)**: ಜಾಗತೀಕರಣವು ಉದ್ಯೋಗಾವಕಾಶಗಳನ್ನು ಹೆಚ್ಚಿಸಿದೆ. ಆದರೆ ಕೆಲಸಗಾರರಿಗೆ ಸೇವಾ ಭದ್ರತೆ ದೊರೆಯುತ್ತಿಲ್ಲ. ಅವರ ಮೇಲೆ ಒತ್ತಡಗಳು ಹೆಚ್ಚಿವೆ ಮತ್ತು ಅವರಿಗೆ ಕಾರ್ಮಿಕ ಸಂಘಗಳನ್ನು ರಚಿಸಿಕೊಳ್ಳಲು ಅವಕಾಶಗಳಿಲ್ಲ.

**4. ಬಹುರಾಷ್ಟ್ರೀಯ ಕಂಪನಿಗಳ ಪ್ರಭಾವ(Effects of MNCs) :** ಜಾಗತೀಕರಣದ ನಿಜವಾದ ಚಾಲಕ ಶಕ್ತಿಯೆಂದರೆ ಬಹುರಾಷ್ಟ್ರೀಯ ಕಂಪನಿಗಳು. ಅವುಗಳ ಪರವಾದ ನೀತಿ ನಿರೂಪಣೆಯಿಂದಾಗಿ ಸ್ಥಳೀಯ ಕಾರ್ಮಿಕರು ಹಾಗೂ ದೇಶೀಯ ಸಂಪನ್ಮೂಲಗಳ ಶೋಷಣೆಯಾಗುತ್ತಿದೆ.

**5. ದೇಶದ ಸಾರ್ವಭೌಮತ್ವಕ್ಕೆ ಧಕ್ಕೆ (Effect to the soverignity of the nation):** ಜಾಗತೀಕರಣದ ಪರಿಣಾಮವಾಗಿ ಅರ್ಥ ವ್ಯವಸ್ಥೆಯ ಮೇಲಿನ ಸರ್ಕಾರದ ಹಿಡಿತವು ಜಾರಿ WTO United Nations ಮುಂತಾದ ಅಂತರ್ ರಾಷ್ಟ್ರೀಯ ಸಂಸ್ಥೆಗಳ ಕೈ ಸೇರುತ್ತದೆ. ನೀತಿ ನಿರೂಪಣೆಯು ಜಾಗತೀಕರಣದತ್ತ ಕೇಂದ್ರೀಕೃತವಾಗುವುದರಿಂದ ಸಹಜವಾಗಿ ಚುನಾಯಿತ ಸರ್ಕಾರಗಳ ಸಾರ್ವಭೌಮತ್ವಕ್ಕೆ ಧಕ್ಕೆಯಾಗುತ್ತದೆ.

**6. ಶಿಕ್ಷಣವು ದುಬಾರಿ (Costly Education) :** ವಿದೇಶೀ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಲು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಶಿಕ್ಷಣವು ದುಬಾರಿಯಾದಾಗ ನಮ್ಮ ಬಡ ವಿದ್ಯಾರ್ಥಿಗಳು ಸಹಜವಾಗಿ ಶಿಕ್ಷಣದಿಂದ ವಂಚಿತರಾಗುತ್ತಾರೆ.

**7. ಜಾಗತೀಕರಣವು ನಮ್ಮ ಪರಂಪರೆ, ಸಾಂಸ್ಕೃತಿಕ** ಮೌಲ್ಯಗಳನ್ನು ಶಿಥಿಲಗೊಳಿಸಬಹುದು

## 5.7 ಜೀವನ ಕೌಶಲಗಳು(Life skills)

ಪ್ರಕೃತಿ ನಮಗೆ ಬೇಕಾದ್ದೆಲ್ಲವನ್ನು ಕೊಟ್ಟಿದೆ, ಬುದ್ಧಿವಂತ ಮಾನವ ಪ್ರಕೃತಿದತ್ತ ಸಂಪತ್ತನ್ನು ಪುನರ್ವಿನ್ಯಾಸಗೊಳಿಸಿ ಅಭಿವೃದ್ಧಿ ಪಡಿಸಿದ್ದಾನೆ. ನಮಗೆ ಬೇಕಾದ್ದೆಲ್ಲ ನಮ್ಮ ಸುತ್ತಮುತ್ತಲೇ ಇದ್ದರೂ ಅವನ್ನು ನಮಗೆ ಬೇಕಾದ ಹಾಗೆ ಅಥವಾ ನಮ್ಮ ಉಪಯೋಗಕ್ಕೆ ಬರುವಂತೆ ಹೊಂದಿಸಿಕೊಳ್ಳದಿದ್ದರೆ ನಮಗೆ ಸೋಲುಂಟಾಗಿ, ಗಡಿಯಾರ ರಿಪೇರಿ ಗೊತ್ತಿಲ್ಲದನ ಮುಂದೆ ಗಡಿಯಾರ ಬಿಚ್ಚಿ ಹರಡಿದಂತಾಗುತ್ತದೆ. ಆಗ ಜೀವನ ನಡೆಸುವದು ಹೇಗೆ ಎಂಬ ಪ್ರಶ್ನೆ ಹುಟ್ಟಿಕೊಳ್ಳುವದರಿಂದ ನಮಗೆ ಬೇಕಾದ್ದನ್ನೆಲ್ಲ ಆಯ್ದು ಹೊಂದಿಸಿಕೊಂಡು ಜೀವಿಸುವ ಶಕ್ತಿಯನ್ನು ಕೊಡುವ ಶಿಕ್ಷಣ ಬೇಕು.

ಆಧುನಿಕ ಬದುಕು ತುಂಬಾ ಜಟಿಲವಾಗುತ್ತಿರುವದರಿಂದ ಪ್ರಸ್ತುತ ವಿದ್ಯಾರ್ಥಿ ನಾನಾ ರೀತಿಯ ಸಂಕೀರ್ಣ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುವದರಿಂದ ಅವನ ಬಹುಮುಖಿ ಸಮಸ್ಯೆಗಳನ್ನು ನಿವಾರಿಸಿಕೊಂಡು ಯಶಸ್ಸು ಪಡೆಯಲು ಸಾಧ್ಯವಾಗುವ ಶಕ್ತಿಯನ್ನು ಗಳಿಸಿಕೊಳ್ಳುವ ಜೀವನ ಕೌಶಲಗಳು ಉಪಯುಕ್ತವಾಗುತ್ತವೆ.

ಪ್ರಪಂಚದ ಪ್ರತಿ ಮನುಷ್ಯನು ಪ್ರತಿಕ್ಷಣದ ಪ್ರತಿ ಪ್ರಯತ್ನದ ಹಾರೈಕೆಯೇ ಗೆಲವು, ಸುಖ. ಈ ಗೆಲವು ನಮ್ಮದಾಗಬೇಕು, ಪ್ರತಿಯೊಬ್ಬರದಾಗಬೇಕು ಎಂಬುದು ಶಿಕ್ಷಣದ ಕಳಕಳಿಯಾಗಿದೆ. ಗೆಲವು ಎಂಬ ಪದವೇ ಅತೀವ ಆನಂದ ಕೊಡುತ್ತದೆ. ಗೆಲುವಿಗಾಗಿ ಮನಸ್ಸು ತಹತಹಿಸಿದಾಗ ಅವಕಾಶಗಳ ಕಿಟಕಿ ತನ್ನ ಬಾಗಿಲನ್ನು ತೆಗೆದುಕೊಳ್ಳುತ್ತದೆ. ಆಗ ನಾವು ಇರುವ ಜಾಣ್ಮೆ, ಜ್ಞಾನವನ್ನು ಮೈಗೂಡಿಸಿಕೊಂಡಿರಬೇಕು. ಜೀವನವನ್ನು ಸಮಾಜದ ಅಪೇಕ್ಷಿತ ರೀತಿ ನೀತಿಗನುಗುಣವಾಗಿ ಸಾಗಿಸಲು ಗಳಿಸಿಕೊಳ್ಳುವ ಕೌಶಲಗಳೇ ಜೀವನ ಕೌಶಲಗಳು, ಗೆಲುವೆಂಬ ಬದುಕಿನ ಗುರಿ ತಲುಪಲು ಜೀವನ ಕೌಶಲಗಳು ನಮ್ಮೊಡನಾಡಿಗಳಾಗಿ ಅಡಿಯಿಡುತ್ತವೆ.

### ಜೀವನ ಕೌಶಲಗಳ ಪರಿಕಲ್ಪನೆ (Concept of Life skills)

ಜೀವನ ಕೌಶಲಗಳನ್ನು ಹದವಾಗಿ ಅಳವಡಿಸಿಕೊಂಡಾಗ ವ್ಯಕ್ತಿ ಸಂತೋಷದಿಂದ ಬದುಕುತ್ತಾನೆ ಮತ್ತು ತನ್ನ ಕುಟುಂಬ ನೆರೆಹೊರೆ–ಸಮಾಜದ ಆರೋಗ್ಯವನ್ನು ಕಾಪಾಡುತ್ತಾನೆ/ಳೆ. ವ್ಯಕ್ತಿ ಮತ್ತು ಸಮಾಜಕ್ಕೆ ಮುದನೀಡುವ ಅನುಕರಣಾ ಯೋಗ್ಯ ವರ್ತನೆಗಳನ್ನು **"ಜೀವನ ಕೌಶಲ"** ಎನ್ನಬಹುದು.

"ವ್ಯಕ್ತಿಯು ವೈಯಕ್ತಿಕವಾಗಿ ಪ್ರತಿನಿತ್ಯ ಜೀವನದ ಬೇಡಿಕೆಗಳು ಮತ್ತು ಸವಾಲುಗಳನ್ನು ಎದುರಿಸಲು ಮತ್ತು ಸಕಾರಾತ್ಮಕ ನಡವಳಿಕೆಯನ್ನು ರೂಢಿಸಿಕೊಳ್ಳಲು ನೆರವಾಗುವದೇ **ಜೀವನ ಕೌಶಲಗಳು**"

– ವಿಶ್ವ ಆರೋಗ್ಯ ಸಂಸ್ಥೆ (1993)

ಯುನಿಸೆಫ್ 2004 ರ ವರದಿಯಂತೆ ಕಲಿಕೆ ಮತ್ತು ಬೋಧನಾ ಪ್ರಕ್ರಿಯೆಯಲ್ಲಿ (Life Skills Based Education-LSBE) ಜೀವನ ಕೌಶಲಗಳನ್ನು ಅಳವಡಿಸಿಕೊಳ್ಳುವದರ ಮೂಲಕ ಮಕ್ಕಳಲ್ಲಿ ಆರೋಗ್ಯಕರ ಬೆಳವಣಿಗೆಯನ್ನು ಮಾಡಬೇಕಿದೆ.

2005 ರ ರಾಷ್ಟ್ರೀಯ ಪಠ್ಯಕ್ರಮವು(NCF) 'ಮಕ್ಕಳು ಸ್ವತಂತ್ರವಾಗಿ ಗ್ರಹಿಸಿ, ಅರ್ಥೈಸಿಕೊಳ್ಳಲು ಸಂದರ್ಭವರಿತು ಕ್ರಿಯಾತ್ಮಕವಾಗಿ ಪ್ರತಿಕ್ರಿಯಿಸಲು, ಪ್ರಜಾಪ್ರಭುತ್ವದ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಭಾಗವಹಿಸಲು, ಸಾಮಾಜಿಕ ಹಾಗೂ ಆರ್ಥಿಕ ಬದಲಾವಣೆ ಸಾಧಿಸಲು, ಜೀವನ ಕೌಶಲ್ಯಗಳು ಉತ್ತಮ ಕೊಡುಗೆಯಾಗಿವೆ" ಎಂದು ಪಠ್ಯಕ್ರಮದಲ್ಲಿ ಜೀವನ ಕೌಶಲಗಳ ಅಳವಡಿಕೆಯನ್ನು ಒತ್ತಿ ಹೇಳಿದೆ.

## ಜೀವನ ಕೌಶಲಗಳ ಮಹತ್ವ (Importance of Life skills)

- ಜ್ಞಾನ, ಮನೋಭಾವ ಮತ್ತು ಮೌಲ್ಯಗಳನ್ನು ನೈಜ ಸಾಮರ್ಥ್ಯಗಳಾಗಿ ಜೀವನ ಕೌಶಲಗಳು ಪರಿವರ್ತಿಸುತ್ತವೆ.
- ಹೆಚ್ಚು ಅಪಾಯಕಾರಿ ವರ್ತನೆಗಳಾದ ಮದ್ಯಪಾನ, ಮಾದಕ ದ್ರವ್ಯಗಳ ಸೇವನೆ, ಮತ್ತು ಅನೈತಿಕ ಸಂಬಂಧಗಳು ಬೇಸರ, ಅಕ್ರಮಣಕಾರಿ ವರ್ತನೆ, ದಿಗ್ಭ್ರಮೆ, ಸಮವಯಸ್ಕರ ಒತ್ತಡ ಮತ್ತು ಕುತೂಹಲಗಳನ್ನುಂಟು ಮಾಡುವದರಿಂದ ಭಾವನಾತ್ಮಕ ನೋವು, ಘರ್ಷಣೆ, ಹತಾಶೆ ಮತ್ತು ಉದ್ವೇಗಗಳನ್ನು ಉಂಟು ಮಾಡಿ ಅಪಾಯಕಾರಿ ವರ್ತನೆಗೆ ಪ್ರೇರೇಪಿಸುತ್ತವೆ. ಇಂತಹ ಸಂದರ್ಭಗಳಲ್ಲಿ ಜೀವನ ಕೌಶಲಗಳ ತರಬೇತಿಯು ಯುವಕರನ್ನು ಜವಾಬ್ದಾರಿಯುತವಾಗಿ ನಡೆದುಕೊಳ್ಳಲು, ನಿಯಂತ್ರಿಸಿಕೊಳ್ಳುವಂತೆ ಮಾಡುವ ಸಾಧನವಾಗಿದೆ.
- ಯುವಜನರು ದೈನಂದಿನ ಘರ್ಷಣೆಗಳು, ಸಿಲುಕಿಕೊಂಡ ಸಂಬಂಧಗಳು, ಸಮವಯಸ್ಕರ ಒತ್ತಡಗಳಲ್ಲಿ ಸಿಲುಕಿದಾಗ ಸಮಾಜ ವಿರೋಧಿ ಚಟುವಟಿಕೆಗಳಲ್ಲಿ ತೊಡಗುವರು. ಜೀವನ ಕೌಶಲಗಳ ತರಬೇತಿಯಿಂದ ಇವೆಲ್ಲವುಗಳನ್ನು ನಿಯಂತ್ರಿಸಿಕೊಂಡು ಸಮಾಜದ ರಚನಾತ್ಮಕ ಚಟುವಟಿಕೆಗಳಲ್ಲಿ ತೊಡಗುವಂತೆ ಮಾಡಬಹುದು.
- ಜೀವನದ ಸತ್ಯಗಳನ್ನು ಎದುರಿಸುವ ಸಾಮರ್ಥ್ಯ ಮತ್ತು ಯುವಜನರ ಸರ್ವ ರೀತಿಯ ಯೋಗಕ್ಷೇಮ ನೋಡಿಕೊಳ್ಳಲು ಅಗತ್ಯವಿರುವ ಸಮರ್ಥತೆ ಉಂಟು ಮಾಡುವುದೇ ಜೀವನ ಕೌಶಲಗಳಾಗಿವೆ.
- ಜ್ಞಾನ, ವರ್ತನೆ ಮತ್ತು ಕೌಶಲಗಳೆಂಬ ಮೂರು ವಲಯಗಳ ಸಮತೋಲನ ವಿಕಾಸ ಮಾಡಿ ವರ್ತನಾ ಬದಲಾವಣೆ ಮಾಡಲು ವಿನ್ಯಾಸಗೊಳಿಸಿದ ತಂತ್ರಗಳೇ ಜೀವನ ಕೌಶಲಗಳಾಗಿವೆ.
- ಸರ್ವತೋಮುಖ ವ್ಯಕ್ತಿತ್ವ ವಿಕಾಸಗೊಳಿಸಿಕೊಳ್ಳಲು ಸಹಾಯಕವಾಗಿವೆ.
- ಯಶಸ್ಸು ಸಾಧಿಸಿ ಸಂತೃಪ್ತಿ ಜೀವನ ಸಾಗಿಸಲು ಅನುಕೂಲವಾಗಿವೆ.
- ಆತ್ಮವಿಶ್ವಾಸ, ಆತ್ಮಗೌರವವನ್ನು ಹೆಚ್ಚಿಸುತ್ತವೆ.

## ವಿಶ್ವ ಆರೋಗ್ಯ ಸಂಸ್ಥೆ ಸೂಚಿಸಿದ ಜೀವನ ಕೌಶಲಗಳು(Life Skills as laid down by WHO)

ಇಂದಿನ ಸ್ಪರ್ಧಾಜಗತ್ತಿನಲ್ಲಿ ಯಶಸ್ಸುಗೊಳಿಸಬೇಕಾದರೆ, ತಾನು ಯಶಸ್ವಿಯಾಗಿ ಬದುಕಿ, ಇತರರನ್ನು ಬದುಕಲು ಬಿಡಬೇಕಾದರೆ ಜೀವನ ಕೌಶಲಗಳು ಅಗತ್ಯವಾಗಿವೆ. 1997 ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಈ ಕೆಳಗೆ ನಮೂದಿಸದ ಹತ್ತು ಜೀವನ ಕೌಶಲಗಳನ್ನು ಗುರುತಿಸಿ ಅವುಗಳನ್ನು ಅಳವಡಿಸಿಕೊಳ್ಳಲು ಕರೆ ನೀಡಿದೆ.

1. ವಿಮರ್ಶಾತ್ಮಕ ಚಿಂತನೆ (Critical thinking) 2. ಸೃಜನಾತ್ಮಕ ಚಿಂತನೆ (Creative thinking )

3. ನಿರ್ಣಯ ಕೈಗೊಳ್ಳುವಿಕೆ (Decision making) 4.ಸಮಸ್ಯಾ ಪರಿಹಾರ (Problem Solving)

5. ಪರಿಣಾಮಕಾರಿ ಸಂವಹನ (Effective communication) 6. ಅಂತರ ವ್ಯಕ್ತಿ ಸಂಬಂಧ (Interpersonal relationship) 7.ಒತ್ತಡಗಳ ನಿರ್ವಹಣೆ (Coping with stress) 8. ಭಾವನೆಗಳ ನಿರ್ವಹಣೆ (Coping with emotions) 9. ಸ್ವಯಂ ಅರಿವು (Self-awareness) 10. ಅನುಭೂತಿ (Empathy)

**1. ವಿಮರ್ಶಾತ್ಮಕ ಚಿಂತನೆ (Critical thinking):** ಜೀವನದ ಹಲವಾರು ಕೌಶಲಗಳಾದ ಸೃಜನಶೀಲ ಚಿಂತನೆ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಅನೂಭೂತಿ ಇವೆಲ್ಲದರ ತಳಪಾಯ ವಿಮರ್ಶಾತ್ಮಕ ಚಿಂತನೆಯೇ ಆಗಿದೆ.

ಯಾವುದೇ ವಸ್ತು, ವಿಷಯ, ವ್ಯಕ್ತಿ, ಸ್ಥಿತಿಯನ್ನು ಬೇರೆ ಬೇರೆ ಆಯಾಮಗಳಿಂದ ಗ್ರಹಿಸಿ ತನ್ನದೇ ಆದ ತೀರ್ಮಾನ ತೆಗೆದುಕೊಳ್ಳುವ ಬೌದ್ಧಿಕ ಪ್ರಕ್ರಿಯೆಯೇ ವಿಮರ್ಶಾತ್ಮಕ ಚಿಂತನೆಯಾಗಿದೆ.

ಮಾಹಿತಿ ಮತ್ತು ಅನುಭವಗಳನ್ನು ವಸ್ತುನಿಷ್ಠ ರೀತಿಯಲ್ಲಿ ವಿಶ್ಲೇಷಿಸುವ ವ್ಯಕ್ತಿಯ ಸಾಮರ್ಥ್ಯವನ್ನು ವಿಮರ್ಶಾತ್ಮಕ ಚಿಂತನೆ ಎನ್ನುವರು.

ಮನೋಭಾವ ಮತ್ತು ವರ್ತನೆಯನ್ನು ಪ್ರಭಾವಿಸುವ ಮೌಲ್ಯಗಳು, ಸ್ನೇಹಿತರ ಮತ್ತು ಮಾಧ್ಯಮದ ಒತ್ತಡ, ಈ ಅಂಶಗಳನ್ನು ಗುರುತಿಸಿ ಮತ್ತು ಮೌಲ್ಯಮಾಪನ ಮಾಡಿ ಉತ್ತಮ ಆರೋಗ್ಯ ಹೊಂದಲು ವಿಮರ್ಶಾತ್ಮಕ ಚಿಂತನೆ ಸಹಾಯ ಮಾಡುತ್ತದೆ.

ಪ್ರಶ್ನಿಸುವ ಮನೋಧರ್ಮವೇ ವಿಮರ್ಶೆಯ ಜೀವಶಕ್ತಿ. ಆದ್ದರಿಂದ ನಮ್ಮನ್ನು ನಾವೇ ಚರ್ಚಿಸುವ ಹಾಗೂ ಮತ್ತೊಬ್ಬರೊಂದಿಗೆ ಚರ್ಚಿಸುವ ಮೂಲಕ ವಿಮರ್ಶಾತ್ಮಕ ಚಿಂತನೆಯನ್ನು ಬೆಳೆಸಬಹುದು.

### 2. ಸೃಜನಾತ್ಮಕ ಚಿಂತನೆ (Creative thinking )

ಹೊಸ ವಿಚಾರ ಇಲ್ಲವೇ ವಸ್ತುವನ್ನು ಸೃಷ್ಟಿಸುವ ಪ್ರಕ್ರಿಯೆಯೇ ಸೃಜನಶೀಲತೆಯಾಗಿದೆ. ಇದು ನಿರರ್ಗಳತೆ, ನಮ್ಯತೆ, ಮೂಲಚಿಂತನೆ, ಹಾಗೂ ವಿಸ್ತೃತಗೊಳಿಸುವಿಕೆ ಎಂಬ ನಾಲ್ಕು ಘಟಕಗಳನ್ನು ಒಳಗೊಂಡಿರುವ ಹೊಸ ದೃಷ್ಟಿಕೋನ ಅಥವಾ ಚಟುವಟಿಕೆಯಾಗಿದೆ.

ಈ ಕೌಶಲವನ್ನು ಮನಮಂಥನ, ಆಟದ ತಂತ್ರ, ಮೆಥೆಟಿಕ್ಸ ಹಾಗೂ ವಿಸ್ತೃತಗೊಳಿಸುವಿಕೆ ಎಂಬ ತಂತ್ರಗಳ ಮೂಲಕ ಅಭಿವೃದ್ಧಿಪಡಿಸಿಕೊಳ್ಳಬಹುದಾಗಿದೆ.

### 3. ನಿರ್ಣಯ ಕೈಗೊಳ್ಳುವಿಕೆ (Decision making)

ವ್ಯಕ್ತಿಗೆ ಸಮಸ್ಯೆ ಎದುರಾದಾಗ ಹಲವಾರು ದೃಷ್ಟಿಕೋನಗಳಲ್ಲಿ ವಿಚಾರ ಕೈಗೊಂಡು ಸೂಕ್ತವಾದ ಅಂಶಗಳನ್ನು ಆಯ್ಕೆ ಮಾಡುವದೇ ನಿರ್ಣಯ ಕೈಗೊಳ್ಳವಿಕೆ. ಇದು ಒಬ್ಬ ವ್ಯಕ್ತಿಗೆ ಹಲವಾರು ಆಯ್ಕೆಗಳು ಎದುರಾದಾಗ ಸೂಕ್ತ ಸಮಯದಲ್ಲಿ ಆ ಸಂದರ್ಭಕ್ಕೆ ಅನುಗುಣವಾದ ಸಮರ್ಪಕವಾದ ಅಂಶವನ್ನು ಆಯ್ಕೆ ಮಾಡುವದಾಗಿದೆ.

ಯಾವುದೇ ಸನ್ನಿವೇಶದಲ್ಲಿ ನಿರ್ಧಾರ ಕೈಗೊಳ್ಳುವಾಗ ಸಾಧ್ಯವಾಗುವ ಮತ್ತು ಲಭ್ಯವಿರುವ ಮಾರ್ಗೋಪಾಯಗಳನ್ನು ಪರಿಗಣಿಸಿ ವಿವಿಧ ಪರಿಣಾಮಗಳನ್ನು ಆಲೋಚಿಸಿನಿರ್ಧಾರ ಕೈಗೊಳ್ಳಬೇಕಾಗುತ್ತದೆ. ಅಗತ್ಯವೆನಿಸಿದರೆ ಇತರರ ಅಭಿಪ್ರಾಯಗಳನ್ನು ಪಡೆಯಬಹುದು ಆದರೆ ನಿರ್ಣಯ ಮಾತ್ರ ಸ್ವಂತದ್ದೇ ಆಗಿದ್ದರೆ ಎಲ್ಲ ರಂಗಗಳಲ್ಲಿಯೂ ಯಶಸ್ವಿ ವ್ಯಕ್ತಿಯಾಗುವನು. ಇದು ನಮ್ಮ ದಿನನಿತ್ಯದ ಜೀವನದಲ್ಲಿ ರಚನಾತ್ಮಕವಾಗಿ ವ್ಯವಹರಿಸಿ ಆರೋಗ್ಯದಿಂದ ಇರಲು ಸಹಾಯ ಮಾಡುತ್ತದೆ.

### 4.ಸಮಸ್ಯಾ ಪರಿಹಾರ (Problem Solving)

ವ್ಯಕ್ತಿಯ ದೈನಂದಿನ ಕಾರ್ಯಚಟುವಟಿಕೆಯಲ್ಲಿ ಸಮಸ್ಯಾಪರಿಹಾರ ಪ್ರಮುಖವಾಗಿದೆ. ಸಮಸ್ಯಾ ಪರಿಹಾರವು ಒಂದು ರೀತಿಯ ಅಲೋಚನಾ ಪ್ರಕ್ರಿಯೆಯಾಗಿದ್ದು ಗುರಿಸಾಧನೆಯೆಡಗೆ ಪ್ರಯತ್ನಿಸುವಂತೆ ಮಾಡುತ್ತದೆ. ಪ್ರತಿಯೊಂದು ಸಮಸ್ಯೆಗೆ ಪರಿಹಾರ ನಮ್ಮ ಮನಸ್ಸಿನಲ್ಲಿಯೇ ಇರುತ್ತದೆ. ಸಮಸ್ಯೆಯ ಗಂಭೀರತೆಯನ್ನು ಅರ್ಥೈಸಿಕೊಂಡು ಆಲೋಚನೆಯ ಮೂಲಕ ಸೂಕ್ತ ಪರಿಹಾರ ಕಂಡುಕೊಳ್ಳಬಹುದಾಗಿದೆ. ಸಮಸ್ಯೆಗೆ ಪರಿಹಾರ ಹುಡುಕುವಲ್ಲಿ ವ್ಯಕ್ತಿಭಿನ್ನತೆಯನ್ನು ಕಾಣುತ್ತೇವೆ.

ವ್ಯಕ್ತಿ ತನ್ನ ಆಲೋಚನೆಯ ಮೂಲಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಸಮಸ್ಯಾಪರಿಹಾರ ಎನ್ನುವರು. ವ್ಯಕ್ತಿ ಕಾರ್ಯನಿರತನಾದಾಗ ಉಂಟಾಗುವ ಅಡತಡೆಗೆ ಸಮಸ್ಯೆ ಎನ್ನುವರು. ತನ್ನ ಆಲೋಚನೆಯ ಮೂಲಕ ಅಡೆತಡೆಯನ್ನು ನಿವಾರಿಸಿಕೊಂಡು ಗುರಿಯೆಡೆಗೆ ತಲುಪುವ ಮಾನಸಿಕ ಪ್ರಕ್ರಿಯೆಗೆ ಸಮಸ್ಯಾಪರಿಹಾರ ಎನ್ನುವರು.

ಇದು ನಮ್ಮ ದಿನನಿತ್ಯದ ಜೀವನದ ಸಮಸ್ಯೆಗಳೊಂದಿಗೆ ರಚನಾತ್ಮಕವಾಗಿ ವ್ಯವಹರಿಸಿ ಮಾನಸಿಕ ಆರೋಗ್ಯದಿಂದ ಇರಲು ಸಹಾಯ ಮಾಡುತ್ತದೆ. ಸಮಸ್ಯೆಗಳು ಪರಿಹಾರವಾಗದೇ ಮುಂದುವರಿದರೆ ಮಾನಸಿಕ ಒತ್ತಡ ಉಂಟು ಮಾಡಿ ದೈಹಿಕ ಅನಾರೋಗ್ಯವನ್ನುಂಟು ಮಾಡುವ ಸಾದ್ಯತೆ ಇರುವದು. ಸಮಸ್ಯಾಪರಿಹಾರಕ್ಕೆ ಪ್ರತಿಯೊಬ್ಬ ವ್ಯಕ್ತಿ ತನ್ನದೇ ಆದ ವಿಶಿಷ್ಟ ವಿಧಾನವನ್ನು ಬಳಸಿಕೊಳ್ಳುತ್ತಾನೆ.